ಮಂಗಳವಾರ, ಜೂನ್ 15, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 166 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಕೋವಿಡ್ ಸೃಷ್ಟಿಸುತ್ತಿರುವ ಆತಂಕದಲ್ಲಿ ಮನಸ್ಸು ಭಯದ ದಾಳಿಗೆ ತುತ್ತಾಗುತ್ತಲೇ ಇರುವುದು ಸುಳ್ಳಲ್ಲ. ಹಾಗಾದರೆ ಭಯದ ಮೂಲ ಏನು? ಅದರ ನಿರ್ವಹಣೆ ಹೇಗೆ?

ಆಳ-ಅಗಲ ಕೋವಿಡ್ ಲಸಿಕೆ ಹೆಚ್ಚು ಬಳಕೆಯ ಅಚ್ಚರಿ

ಚಿರಾಗ್ ಪಾಸ್ವಾನ್ ವಿರುದ್ಧ ಬಂಡಾಯದ ಕಹಳೆ 9

ಮೊಮ್ಮಗಳಿಗೆ ಅಜ್ಜಿಯೇ ಆಸರೆ 8

ಸೆನ್ಸೆಕ್ಸ್	ನಿಫ್ಟಿ	₹/$
52,551 ▲	15,811 ▲	73.29 ▼

ತೈಲ ಬೆಲೆ ಏರಿಕೆ ಪ್ರಮುಖ ಕಾರಣ • ರೆಪೊ ದರ ಇಳಿಕೆ ಸಾಧ್ಯತೆ ಕ್ಷೀಣ

ದಾಖಲೆ ಮಟ್ಟದಲ್ಲಿ ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಬೆಲೆ ಆಧಾರಿತ ಹಣದುಬ್ಬರ (ಡಬ್ಲ್ಯುಪಿಐ) ಪ್ರಮಾಣವು ದೇಶದಲ್ಲಿ ಮೇ ತಿಂಗಳಿನಲ್ಲಿ ಸಾರ್ವಕಾಲಿಕ ದಾಖಲೆಯ ಶೇಕಡ 12.94ಕ್ಕೆ ತಲುಪಿದೆ. ಕಚ್ಚಾ ತೈಲ ಹಾಗೂ ತಯಾರಿಸಿದ ಉತ್ಪನ್ನಗಳ ಬೆಲೆ ಹೆಚ್ಚು-ತ್ತಿರುವುದು ಸಗಟು ಹಣದುಬ್ಬರದ ಏರಿಕೆಗೆ ಕಾರಣ.

ಹಿಂದಿನ ವರ್ಷದ ಮೇ ತಿಂಗಳಿನಲ್ಲಿ ಡಬ್ಲ್ಯುಪಿಐ ಹಣದುಬ್ಬರ ಪ್ರಮಾಣವು ಶೇ(–) 3.37ರಷ್ಟು ಇತ್ತು. ಡಬ್ಲ್ಯುಪಿಐ ಆಧಾರಿತ ಹಣದುಬ್ಬರ ಪ್ರಮಾಣವು ಐದು ತಿಂಗಳುಗಳಿಂದ ನಿರಂತರವಾಗಿ ಏರಿಕೆಯ ಹಾದಿಯಲ್ಲಿ ಇದೆ. ಏಪ್ರಿಲ್ ತಿಂಗಳಲ್ಲಿ ಇದು ಎರಡಂಕಿಯ ಪ್ರಮಾಣವನ್ನು (ಶೇ 10.49) ತಲುಪಿತ್ತು.

'ಹಿಂದಿನ ವರ್ಷದ ಇದೇ ತಿಂಗಳಿನಲ್ಲಿ ಡಬ್ಲ್ಯುಪಿಐ ಹಣದುಬ್ಬರ ಪ್ರಮಾಣವು ಕಡಿಮೆ ಇತ್ತು. ಅದಕ್ಕೆ ಹೋಲಿಸಿದರೆ ಈ ವರ್ಷದ ಮೇ ತಿಂಗಳಿನಲ್ಲಿ ಹಣದುಬ್ಬರ ಏರಿಕೆ ಆಗಿದೆ. ಪೆಟ್ರೋಲ್, ಡೀಸೆಲ್ ಮಾತ್ರವೇ ಅಲ್ಲದೆ ಹಿಂದಿನ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಮೇ ತಿಂಗಳಿನಲ್ಲಿ ತಯಾರಿಸಿದ ಉತ್ಪನ್ನಗಳ ಬೆಲೆಯಲ್ಲಿಯೂ ಹೆಚ್ಚಳ ಆಗಿದೆ' ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ.

ಪೆಟ್ರೋಲ್, ಎಲ್‌ಪಿಜಿ ಮತ್ತು ಹೈಸ್ಪೀಡ್ ಡೀಸೆಲ್‌ಅನ್ನು ಒಳಗೊಂಡಿರುವ ಇಂಧನ ವಿಭಾಗದಲ್ಲಿನ ಡಬ್ಲ್ಯುಪಿಐ ಹಣದುಬ್ಬರ ಪ್ರಮಾಣವು ಮೇನಲ್ಲಿ ಶೇ 37.61ಕ್ಕೆ ತಲುಪಿದೆ. ಇದು ಏಪ್ರಿಲ್ ತಿಂಗಳಿನಲ್ಲಿ ಶೇ 20.94ರಷ್ಟು ಇತ್ತು. ತಯಾರಿಸಿದ ಉತ್ಪನ್ನಗಳ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 9.01ರಷ್ಟು ಇದ್ದಿದ್ದು ಮೇನಲ್ಲಿ ಶೇ 10.83ಕ್ಕೆ ತಲುಪಿದೆ.

ಈರುಳ್ಳಿ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇ (–)19.72ರಷ್ಟು ಇತ್ತು. ಅದು ಮೇನಲ್ಲಿ ಶೇ 23.24ಕ್ಕೆ ಏರಿದೆ.

2022ರ ಮಾರ್ಚ್ 31ಕ್ಕೆ ಕೊನೆ-ಗೊಳ್ಳಲಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5.1ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.

ಸಗಟು ಹಣದುಬ್ಬರ



ಮಾಹಿತಿ: ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸೋಮವಾರ ಪೆಟ್ರೋಲ್ ದರವನ್ನು ಲೀಟರಿಗೆ 29 ಪೈಸೆ, ಡೀಸೆಲ್ ದರವನ್ನು ಲೀಟರಿಗೆ 30 ಪೈಸೆ ಹೆಚ್ಚಿಸಿವೆ.

ಆರು ವಾರಗಳಲ್ಲಿ 24ನೇ ಬಾರಿಗೆ ಇಂಧನ ದರ ಹೆಚ್ಚಿಸಲಾಗಿದೆ. ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಹಲವೆಡೆ ಪೆಟ್ರೋಲ್ ದರ ಈಗಾಗಲೇ ₹ 100ರ ಗಡಿ ದಾಟಿದೆ. ಸೋಮವಾರದ ದರ ಏರಿಕೆ ನಂತರ ಹೈದರಾಬಾದ್‌ನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 100ರ ಗಡಿ ದಾಟಿದೆ.

ಬೆಂಗಳೂರಿನಲ್ಲಿ ಸೋಮವಾರ ಪೆಟ್ರೋಲ್ ದರ ಲೀಟರಿಗೆ ₹ 99.69 ಮತ್ತು ಡೀಸೆಲ್ ಲೀಟರಿಗೆ ₹ 92.58ರಷ್ಟಾಗಿದೆ.

ಚಿಲ್ಲರೆ ಹಣದುಬ್ಬರವೂ ಹೆಚ್ಚಳ

ಗ್ರಾಹಕರ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣ ಕೂಡ ಮೇ ತಿಂಗಳಿನಲ್ಲಿ ಶೇ 6.3ಕ್ಕೆ ಏರಿಕೆ ಆಗಿದೆ. ಇದು ಆರ್‌ಬಿಐಗೆ ಕೇಂದ್ರ ನಿಗದಿ ಮಾಡಿರುವ ಮಿತಿಗಿಂತಲೂ ತುಸು ಹೆಚ್ಚು. ಏಪ್ರಿಲ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4.23ರಷ್ಟು ಇತ್ತು.

ಆಹಾರ ವಸ್ತುಗಳ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 1.96ರಷ್ಟು ಇದ್ದಿದ್ದು ಮೇ ತಿಂಗಳಲ್ಲಿ ಶೇ 5.01ಕ್ಕೆ ಏರಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ಕ್ಕೆ ಮಿತಿಗೊಳಿಸಬೇಕು ಎಂದು ಕೇಂದ್ರ ಸರ್ಕಾರವು ಆರ್‌ಬಿಐಗೆ ಗುರಿ ನಿಗದಿ ಮಾಡಿದೆ. ಶೇ 4ಕ್ಕಿಂತ 2 ಅಂಶ ಹೆಚ್ಚು ಅಥವಾ 2 ಅಂಶ ಕಡಿಮೆ ಆಗಲು ಅವಕಾಶ ಇದೆ. ಆದರೆ, ಮೇ ತಿಂಗಳ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ರ ಗಡಿಯನ್ನೂ ದಾಟಿದೆ.

2021ರಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಹೆಚ್ಚಾಗಿರುವುದು ಇದೇ ಮೊದಲು. ರೆಪೊ ದರದಲ್ಲಿ ಬದಲಾವಣೆ ತರುವ ಮುನ್ನ ಆರ್‌ಬಿಐ ಹಣದುಬ್ಬರ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಹಣದುಬ್ಬರವು ಹೆಚ್ಚಳ ಕಂಡಿರುವ ಕಾರಣ, ಆರ್‌ಬಿಐ ರೆಪೊ ದರವನ್ನು ತಕ್ಷಣಕ್ಕೆ ಇಳಿಸಲಿಕ್ಕಿಲ್ಲ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಳ್ಳಾರಿಯ ತೋಟಗಾರಿಕೆ ಇಲಾಖೆಯ ಕಚೇರಿ ಮುಂದೆ ಸೋಮವಾರ ರೈತರು ಮೆಣಸಿನಕಾಯಿ ಬೀಜ ಖರೀದಿಗೆ ಬಂದಿದ್ದ ಸಂದರ್ಭದಲ್ಲಿ ನೂಕು ನುಗ್ಗಲು ಉಂಟಾಗಿ ಪೊಲೀಸರು ಲಾಠಿ ಪ್ರಹಾರ ನಡೆಸಿದರು

ಪೊಲೀಸರಿಂದ ಲಘು ಲಾಠಿ ಪ್ರಹಾರ

ಮೆಣಸಿನಕಾಯಿ ಬೀಜ ಖರೀದಿಗೆ ನೂಕುನುಗ್ಗಲು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದ ತೋಟಗಾರಿಕೆ ಕಚೇರಿ ಮುಂಭಾಗ ಸೋಮವಾರ ರೈತರು ಮೆಣಸಿನಕಾಯಿ ಬೀಜ ಖರೀದಿಗೆ ಬಂದಿದ್ದ ವೇಳೆ ಏಕಾಏಕಿ ನೂಕುನುಗ್ಗಲು ಉಂಟಾಗಿದ್ದರಿಂದ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಜಿಲ್ಲಾಡಳಿತ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ವತಿಯಿಂದ ಸಿಜೆಂಟಾ ಕಂಪನಿ ವಿತರಕರು 5531–ತಳಿಯ ಮೆಣಸಿನಕಾಯಿ ಬೀಜವನ್ನು ರೈತರಿಗೆ ವಿತರಿಸುತ್ತಿದ್ದಾಗ ನೂಕುನುಗ್ಗಲು ಉಂಟಾಯಿತು. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿದ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ, ಜನರನ್ನು ನಿಯಂತ್ರಿಸಿದರು. ಈ ವೇಳೆ ರೈತರು ದಿಕ್ಕಾಪಾಲಾಗಿ ಓಡಿದರು.

> ಎಲ್ಲರಿಗೂ ಮೆಣಸಿನಕಾಯಿ ಬೀಜ ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೆಲವು ರೈತರು ನೂಕುನುಗ್ಗಲು ಸೃಷ್ಟಿಸಿದ್ದರಿಂದ ಪೊಲೀಸರು ಲಾಠಿ ಬೀಸಿದ್ದಾರೆ
>
> **ಶರಣಪ್ಪ ಬೋಗಿ**
> ಕೃಷಿ ಇಲಾಖೆ ಅಧಿಕಾರಿ, ಬಳ್ಳಾರಿ

'ಜಿಲ್ಲೆಯಲ್ಲಿ ಮುಂಗಾರು ಕೃಷಿ ಚಟುವಟಿಕೆ ಆರಂಭವಾಗಿರುವುದರಿಂದ ಬೀಜ ಖರೀದಿಸಲು ಸಾವಿರಾರು ರೈತರು ಬಂದಿದ್ದರು. ಆದರೆ, ಕೆಲವೇ ರೈತರಿಗೆ ಬೀಜ ವಿತರಿಸಿ ಕೌಂಟರ್ ಬಂದ್ ಮಾಡಿದ್ದರು. ಹಳ್ಳಿಯಿಂದ ಬಂದಿದ್ದ ರೈತರು ಆಕ್ರೋಶ ವ್ಯಕ್ತಪಡಿಸಿದಾಗ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ' ಎಂದು ರೈತರು ಆರೋಪಿಸಿದ್ದಾರೆ.

ವಿಷಯ ತಿಳಿದು ಉಪವಿಭಾಗಾಧಿಕಾರಿ ರಮೇಶ್ ಕೋನರೆಡ್ಡಿ, ತಹಶೀಲ್ದಾರ್ ರೆಹಮಾನ್ ಪಾಷಾ, ಕೃಷಿ ಇಲಾಖೆ ಅಧಿಕಾರಿ ಶರಣಪ್ಪ ಮುದಗಲ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶರಣಪ್ಪ ಬೋಗಿ ಸ್ಥಳಕ್ಕೆ ಭೇಟಿ ನೀಡಿ ರೈತರನ್ನು ಸಮಾಧಾನ ಪಡಿಸಿದರು.

'ಪ್ರತಿ ರೈತರಿಗೆ 100 ಗ್ರಾಂ ಮೆಣಸಿನ ಬೀಜ ವಿತರಿಸಲಾಗುತ್ತಿದೆ. ಅದಕ್ಕಾಗಿ ರೈತರು ಪಹಣಿ ಮತ್ತು ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ ಕೊಡಬೇಕು' ಎಂದು ತಿಳಿಸಿದ್ದಾರೆ. ಆದರೆ, ಹೆಚ್ಚಿನ ರೈತರಿಗೆ ಈ ವಿಷಯವೇ ಗೊತ್ತಿರಲಿಲ್ಲ.

11 ಜಿಲ್ಲೆಗಳ ಶಿಕ್ಷಕರಿಗೆ ಹಾಜರಾತಿ ವಿನಾಯಿತಿ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಕ್ರಿಯೆ ಮಂಗಳವಾರ (ಜೂನ್ 15) ಆರಂಭವಾಗುತ್ತಿದ್ದು, ಲಾಕ್ ಡೌನ್ ಜಾರಿಯಲ್ಲಿರುವ 11 ಜಿಲ್ಲೆಗಳ ಶಿಕ್ಷಕರಿಗೆ ಶಾಲಾ ಹಾಜರಾತಿಯಿಂದ ವಿನಾಯಿತಿ ನೀಡಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದರು. 8

ಒಳ ಪುಟಗಳು

ಸಿ.ಡಿ ಪ್ರಕರಣ: ಮತ್ತೊಂದು ತಕರಾರು ಅರ್ಜಿ ಸಲ್ಲಿಕೆ 8
ಸಿಇಟಿ: ಅರ್ಜಿ ಸಲ್ಲಿಕೆಗೆ ಜು. 10 ಕೊನೆ ದಿನ 8

ನೆರವು ಪ್ರಕಟಿಸಿದ ಮೊದಲ ರಾಜ್ಯ ಕರ್ನಾಟಕ: ಅಂದಾಜು ₹300 ಕೋಟಿ ಅಗತ್ಯ

ಕೋವಿಡ್ ಸಾವು: ಬಡವರಿಗೆ ₹1 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾದ ಶ್ರಮಜೀವಿ ವರ್ಗಕ್ಕೆ ಎರಡು ಆರ್ಥಿಕ ಪ್ಯಾಕೇಜ್‌ಗಳನ್ನು ಪ್ರಕಟಿಸಿದ ರಾಜ್ಯ ಸರ್ಕಾರ, ಕುಟುಂಬವನ್ನು ಆರ್ಥಿಕವಾಗಿ ಸಲುಹುವ ವ್ಯಕ್ತಿ ಕೋವಿಡ್‌ನಿಂದ ಮೃತಪಟ್ಟಿದ್ದರೆ ಅಂತಹವರ ಅವಲಂಬಿತರಿಗೆ ತಲಾ ₹1 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದೆ.

ಬಿಪಿಎಲ್ ಕುಟುಂಬದವರಿಗೆ ಹೀಗೆ ಪರಿಹಾರ ನೀಡುವ ಯೋಜನೆ ಘೋಷಿಸಿರುವ ಮೊದಲ ರಾಜ್ಯ ಕರ್ನಾಟಕ. 30 ಸಾವಿರ ಕುಟುಂಬಗಳಿಗೆ ಇದರ ಪ್ರಯೋಜನ ಸಿಗಲಿದ್ದು, ಇದಕ್ಕಾಗಿ ₹300 ಕೋಟಿ ಬೇಕಾಗಬಹುದು ಎಂದು ಅಂದಾಜಿಸಲಾಗಿದೆ.

ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಹಣಕಾಸು ಇಲಾಖೆಯ ಅಧಿಕಾರಿಗಳ ಜತೆ ನಡೆಸಿದ ಸಭೆಯ ಬಳಿಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈ ನಿರ್ಧಾರ ಪ್ರಕಟಿಸಿದರು.

ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದವರಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ. ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸೀಮಿತವಾಗುವಂತೆ ಈ ಪರಿಹಾರ ಸಿಗಲಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಯಾವುದೇ ಬಿಪಿಎಲ್ ಕುಟುಂಬಗಳಲ್ಲಿ ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಮೃತಪಟ್ಟಿದ್ದರೂ, ಆ ಕುಟುಂಬದ ದುಡಿಯುವ– ವಯಸ್ಕರ ಹೆಸರಿನಲ್ಲಿ ಪರಿಹಾರದ ಮೊತ್ತ ನೀಡಲಾಗುತ್ತದೆ ಎಂದು ತಿಳಿಸಿದರು.

'ಕೋವಿಡ್‌ನಿಂದಾಗಿ ಸಾಕಷ್ಟು ಕುಟುಂಬಗಳಲ್ಲಿ ದುಡಿಯುವ ವ್ಯಕ್ತಿಗಳೇ ಮೃತಪಟ್ಟಿದ್ದಾರೆ. ಇದರಿಂದ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ತುತ್ತಾಗಿವೆ. ಅವರ ನೆರವಿಗಾಗಿ ಈ ಪರಿಹಾರ ನೀಡಲಾಗುತ್ತಿದೆ. ಈ ಸಂಬಂಧ ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿದ್ದೇನೆ' ಎಂದರು.

'ದೇಶದಲ್ಲಿ ಮೊದಲ ಬಾರಿಗೆ ಈ ರೀತಿಯ ಪರಿಹಾರ ನೀಡಲಾಗುತ್ತಿದೆ. ಬೇರೆ ಯಾವುದೇ ರಾಜ್ಯಗಳಲ್ಲೂ ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ನೀಡಿಲ್ಲ' ಎಂದು ಯಡಿಯೂರಪ್ಪ ಹೇಳಿದರು.

'ಕೋವಿಡ್ ಇರುವವರೆಗೆ ಈ ಯೋಜನೆಯನ್ನು ಮುಂದುವರಿಸಲು ಉದ್ದೇಶಿಸಲಾಗಿದೆ. ಕೋವಿಡ್ ಲಸಿಕೆಗಾಗಿ ನಿಗದಿ ಮಾಡಿದ್ದ ಹಣವನ್ನು ಇದಕ್ಕೆ ಬಳಸಲಾಗುವುದು. ಕೇಂದ್ರ ಸರ್ಕಾರ ಲಸಿಕೆ ಖರೀದಿಸಿ ಕೊಡುವುದರಿಂದ, ರಾಜ್ಯಕ್ಕೆ ಆರ್ಥಿಕ ಹೊರೆ ಕಡಿಮೆ ಆಗಲಿದೆ' ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಕೋವಿಡ್ ಎರಡನೇ ಅಲೆಯಲ್ಲಿ ಸಂಕಷ್ಟಕ್ಕೆ ಒಳಗಾದ ದುಡಿಯುವ ವರ್ಗಕ್ಕೆ ಯಡಿಯೂರಪ್ಪ ಅವರು ಕ್ರಮವಾಗಿ ₹1,250 ಕೋಟಿ ಮತ್ತು ₹500 ಕೋಟಿಯನ್ನು ಎರಡು ಪ್ಯಾಕೇಜ್‌ಗಳಲ್ಲಿ ಪ್ರಕಟಿಸಿದ್ದಾರೆ.

ಪ್ರವಾಸಿ ಗೈಡ್‌ಗಳಿಗೆ ₹5 ಸಾವಿರ ಪರಿಹಾರ

ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಪ್ರವಾಸಿ ಗೈಡ್‌ಗಳಿಗೆ ಕೋವಿಡ್ ಸಂಕಷ್ಟದ ಕಾರಣ ತಲಾ ₹ 5,000 ಪರಿಹಾರ ನೀಡಲು ನಿರ್ಧರಿಸಿರುವುದಾಗಿ ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಅವರು ತಿಳಿಸಿದ್ದಾರೆ.

ಇಲಾಖೆಯಲ್ಲಿ ನೋಂದಾಯಿತ 384 ನೋಂದಾಯಿತ ಪ್ರವಾಸಿ ಗೈಡ್‌ಗಳಿದ್ದು, ಅವರೆಲ್ಲ ಸಂಕಷ್ಟದಲ್ಲಿದ್ದಾರೆ ಎಂದು ಅವರು ತಿಳಿಸಿದರು.

ಹೋಟೆಲ್ ಕಾರ್ಮಿಕರಿಗೆ ತಲಾ ₹3,000 ಪರಿಹಾರ ನೀಡಲು ಆರ್ಥಿಕ ಇಲಾಖೆಯಲ್ಲಿ ಚರ್ಚೆ ನಡೆಯುತ್ತಿದ್ದು, ಅತಿ ಶೀಘ್ರದಲ್ಲಿ ಸರ್ಕಾರಿ ಆದೇಶ ಹೊರಡಲಿದೆ ಎಂದು ಸಚಿವರು ಭರವಸೆ ನೀಡಿದರು.

ಸಂಚಾರಿ ವಿಜಯ್ ಮಿದುಳು ನಿಷ್ಕ್ರಿಯ

ಅಪಘಾತದಲ್ಲಿ ಗಾಯಗೊಂಡಿರುವ ನಟ: ಪರಿಸ್ಥಿತಿ ಗಂಭೀರ

ಸಂಚಾರಿ ವಿಜಯ್ ಮಿದುಳು ನಿಷ್ಕ್ರಿಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ರಾಷ್ಟ್ರ ಪ್ರಶಸ್ತಿ ವಿಜೇತ ಸಿನಿಮಾ ನಟ ಸಂಚಾರಿ ವಿಜಯ್ (42) ಅವರ ಮಿದುಳು ನಿಷ್ಕ್ರಿಯವಾಗಿದ್ದು, ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ಅವರು ಬದುಕುಳಿಯುವ ಸಾಧ್ಯತೆ ಕಡಿಮೆ ಇದೆ ಎಂಬ ವೈದ್ಯರ ಹೇಳಿಕೆ ಬೆನ್ನಲ್ಲೇ, ವಿಜಯ್ ಅವರ ಅಂಗಾಂಗಗಳನ್ನು ದಾನ ಮಾಡಲು ಕುಟುಂಬಸ್ಥರು ತೀರ್ಮಾನಿಸಿದ್ದಾರೆ.

ಶನಿವಾರ ರಾತ್ರಿ (ಜೂನ್ 12) ಸಂಭವಿಸಿದ ಅಪಘಾತದಿಂದಾಗಿ ಮಿದುಳಿನ ಎರಡೂ ಭಾಗಕ್ಕೂ ತೀವ್ರ ಪೆಟ್ಟು ಬಿದ್ದು ರಕ್ತ ಹೆಪ್ಪುಗಟ್ಟಿತ್ತು. ವಿಜಯ್ ಕೋಮಾ ಸ್ಥಿತಿ ತಲುಪಿದ್ದರು. ಅಪೋಲೊ ಆಸ್ಪತ್ರೆ ವೈದ್ಯ ಅರುಣ್ ನಾಯಕ್ ನೇತೃತ್ವದ ತಂಡ, ಭಾನುವಾರ ಬೆಳಿಗ್ಗೆಯೇ ಮಿದುಳಿಗೆ ಶಸ್ತ್ರಚಿಕಿತ್ಸೆ ಮಾಡಿದೆ. ಆದರೆ, ಅದಕ್ಕೆ ವಿಜಯ್ ಸ್ಪಂದಿಸಿಲ್ಲ ಎನ್ನಲಾಗಿದೆ.

'ವಿಜಯ್ ಅವರ ಕಿಡ್ನಿ, ಹೃದಯ, ಶ್ವಾಸಕೋಶ ಹಾಗೂ ಇತರೆ ಭಾಗಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ. ಹೃದಯ ಬಡಿತ ಹಾಗೂ ರಕ್ತದೊತ್ತಡ ಸಾಧಾರಣವಾಗಿದೆ. ಆದರೆ, ಮಿದುಳು ಯಾವುದೇ ಕೆಲಸ ಮಾಡುತ್ತಿಲ್ಲ. ಸಂಪೂರ್ಣ ನಿಷ್ಕ್ರಿಯವಾಗಿದೆ. ಇಂಥ ಸ್ಥಿತಿಯಿಂದ ರೋಗಿ ಗುಣಮುಖವಾದ ಉದಾಹರಣೆಗಳೇ ಇಲ್ಲ' ಎಂದು ವೈದ್ಯ ಅರುಣ್ ನಾಯಕ್ ಸುದ್ದಿಗಾರರಿಗೆ ಹೇಳಿದರು.

'ಜೀವರಕ್ಷಕದ ನೆರವಿನಿಂದ ವಿಜಯ್ ಉಸಿರಾಡುತ್ತಿದ್ದು, ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಮುಂದುವರಿಸಲಾಗಿದೆ. ಮಿದುಳು ನಿಷ್ಕ್ರಿಯವಾಗಿರುವ ಬಗ್ಗೆ ಕುಟುಂಬಸ್ಥರಿಗೆ ತಿಳಿಸಲಾಗಿದ್ದು, ಅಂಗಾಂಗ ದಾನ ಮಾಡಲು ಅವರು ಇಚ್ಛಿಸಿದ್ದಾರೆ. ನಿಯಮದ ಪ್ರಕಾರ ಮಿದುಳಿನ ಕೆಲ ಪರೀಕ್ಷೆ ಮಾಡುತ್ತಿದ್ದೇವೆ' ಎಂದೂ ತಿಳಿಸಿದರು.

'ಮಿದುಳು ನಿಷ್ಕ್ರಿಯವಾದರೆ ಸಾವು ಎಂದು ತೀರ್ಮಾನಿಸಲಾಗದು. ಯಾವುದಾದರೂ ಅಂಗಾಂಗ ತೆಗೆದು ಬೇರೆಯವರಿಗೆ ಕಸಿ ಮಾಡಿದರೆ, ಅವಾಗಲೇ ಅದು ಸಾವು ಎನ್ನಬಹುದು. ಆಕಸ್ಮಾತ್ ಅಂಗಾಂಗ ತೆಗೆಯದಿದ್ದರೆ, ವ್ಯಕ್ತಿ ಹಾಗೇ ಇರುತ್ತಾರೆ. ಹೃದಯ ಕೆಲಸ ನಿಂತ ನಂತರ ಸಾವು ಸಂಭವಿಸುತ್ತದೆ' ಎಂದರು.

ಸಮಾಜಕ್ಕಾಗಿ ಅಂಗಾಂಗ ದಾನ: 'ಅಣ್ಣನ ಮಿದುಳು ನಿಷ್ಕ್ರಿಯವಾಗಿದ್ದು, ಬದುಕುವುದು ಕಷ್ಟವೆಂದು ವೈದ್ಯರು ಹೇಳಿದ್ದಾರೆ. 12 ಗಂಟೆಗಳ ನಂತರ ಅಂಗಾಂಗಗಳನ್ನೂ ತೆಗೆದುಕೊಳ್ಳಲು ಬರುವುದಿಲ್ಲವೆಂದು ತಿಳಿಸಿದ್ದಾರೆ. ಸಮಾಜದ ಒಳಿತಿಗಾಗಿ ಅಣ್ಣ ದುಡಿಯುತ್ತಿದ್ದರು. ಹೀಗಾಗಿ, ಅಂಗಾಂಗ ದಾನಕ್ಕೆ ಒಪ್ಪಿದ್ದೇವೆ' ಎಂದು ವಿಜಯ್ ತಮ್ಮ ಸಿದ್ದೇಶ್ ಕುಮಾರ್ ತಿಳಿಸಿದರು.

'ಅಂಗಾಂಗಗಳನ್ನು 10 ಜನರಿಗೆ ಕಸಿ ಮಾಡಬಹುದು'

'ನಟ ಸಂಚಾರಿ ವಿಜಯ್ ಮಿದುಳು ನಿಷ್ಕ್ರಿಯ ಖಾತ್ರಿಗೆ ಸೋಮವಾರ ಮಧ್ಯಾಹ್ನ 12.25 ಹಾಗೂ ರಾತ್ರಿ 7.50ಕ್ಕೆ ಅಪ್ನಿಯಾ ಪರೀಕ್ಷೆ ನಡೆಸಲಾಗಿದೆ. ಅದರಲ್ಲಿ ನಿಷ್ಕ್ರಿಯ ಎಂದು ಪಾಸಿಟಿವ್ ಫಲಿತಾಂಶ ಬಂದಿದೆ. ಹೀಗಾಗಿ, ಅಂಗಾಂಗ ಕಸಿ ಪ್ರಕ್ರಿಯೆ ಆರಂಭಿಸಲಾಗಿದೆ. ಈ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೂ ಮಾಹಿತಿ ನೀಡಲಾಗಿದೆ' ಎಂದು ವೈದ್ಯ ಅರುಣ್ ನಾಯಕ್ ತಿಳಿಸಿದ್ದಾರೆ.

'ಅಂಗಾಂಗ ದಾನ ಪ್ರಕ್ರಿಯೆಗಾಗಿ ಜೀವ ಸಾರ್ಥಕತೆ ಸಮಿತಿ ಕೆಲಸ ಮಾಡುತ್ತಿದೆ. ಪರಿಣಿತ ವೈದ್ಯರು ಸಮಿತಿಯಲ್ಲಿ ಇದ್ದಾರೆ. ವಿಜಯ್ ಅವರ ಅಂಗಾಂಗಗಳನ್ನೂ ಅಗತ್ಯವಿರುವವರಿಗೆ ಕಸಿ ಮಾಡಲು ಸಮಿತಿ ಅನುಮತಿ ನೀಡಲಿದೆ. ವಿಜಯ್ ಅಂಗಾಂಗಗಳನ್ನು 8 ರಿಂದ 10 ಜನರಿಗೆ ಕಸಿ ಮಾಡಬಹುದು' ಎಂದರು.

ಇನ್ನಷ್ಟು ಸುದ್ದಿಗಳು 3, 9

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	27,71,969 ▲ (27,65,134 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	1,72,141 ▼
ಗುಣಮುಖರಾದವರು	25,66,774 ▲
ಒಟ್ಟು ಸಾವು	33,033 ▲

ದಿನದ ಏರಿಕೆ

ಹೊಸ ಪ್ರಕರಣ	6,835 ▼
ಗುಣಮುಖ	15,409 ▼
ಸಾವು	120 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಧುಮ್ಮಿಕ್ಕಿದ ಜಲರಾಶಿ ಶಿವಮೊಗ್ಗ ತಾಲ್ಲೂಕು ಗಾಜನೂರು ಗ್ರಾಮದ ಬಳಿಯ ತುಂಗಾ ಜಲಾಶಯದಿಂದ ನದಿಗೆ ಸೋಮವಾರ ನೀರು ಹರಿಸಲಾಯಿತು ಚಿತ್ರ–ಶಿವಮೊಗ್ಗ ನಾಗರಾಜ್

ನಾಳೆಯಿಂದ ಸ್ಮಾರಕಗಳ ವೀಕ್ಷಣೆಗೆ ಅವಕಾಶ

ಆಗ್ರಾ (ಪಿಟಿಐ): ಭಾರತೀಯ ಪುರಾತತ್ವ ಇಲಾಖೆಗೆ ಒಳಪಟ್ಟ ಸ್ಮಾರಕಗಳ ವೀಕ್ಷಣೆಗೆ ಬುಧವಾರದಿಂದ ಅವಕಾಶ ಕಲ್ಪಿಸಲಾಗಿದೆ.

ಪ್ರವಾಸಿಗರು ಈ ಐತಿಹಾಸಿಕ ಸ್ಮಾರಕಗಳಿಗೆ ಭೇಟಿ ನೀಡುವ ಮುನ್ನ ಆನ್‌ಲೈನ್‌ನಲ್ಲಿ ಟಿಕೆಟ್‌ಗಳನ್ನು ಕಾಯ್ದಿರಿಸಬೇಕು. ಆಫ್‌ಲೈನ್ ಸೌಲಭ್ಯವಿಲ್ಲ ಎಂದು ಇಲಾಖೆ ತಿಳಿಸಿದೆ.

ಕೋವಿಡ್ ಎರಡನೇ ಅಲೆಯ ಹಿನ್ನೆಲೆಯಲ್ಲಿ ಸುಮಾರು ಎರಡು ತಿಂಗಳಿಂದ ಸ್ಮಾರಕಗಳ ವೀಕ್ಷಣೆಗೆ ನಿರ್ಬಂಧ ವಿಧಿಸಲಾಗಿತ್ತು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮೂಲ್ಕಿ: ವಿದ್ಯುತ್ ಹರಿದು ಒಬ್ಬನ ಸಾವು

ವಿವಿಧೆಡೆ ವರುಣನ ಅಬ್ಬರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದ್ದು, ಸೋಮವಾರ ಧಾರಾಕಾರ ಮಳೆಯಾಗಿದೆ. ಕೆಲವು ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿ ತಾಲ್ಲೂಕಿನಲ್ಲಿ ಮನೆ ಮೇಲೆ ಬಿದ್ದಿದ್ದ ಮರ ತೆರವು ಮಾಡುವ ವೇಳೆ ವಿದ್ಯುತ್ ಸ್ಪರ್ಶದಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸೋಮವಾರ ನಿರಂತರ ಮಳೆ ಸುರಿಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನವಿಡೀ ಮಳೆ ಸುರಿದಿದೆ. ಮೂಲ್ಕಿ ತಾಲ್ಲೂಕಿನ ಐಕಳದಲ್ಲಿ ಮನೆಯ ಮೇಲೆ ಬಿದ್ದ ಮರ ತೆರವು ಮಾಡುವ ವೇಳೆ ವಿದ್ಯುತ್ ಸ್ಪರ್ಶದಿಂದ ಮಾಧವ ಆಚಾರ್ಯ (55) ಮೃತಪಟ್ಟಿದ್ದಾರೆ. ತಾಲ್ಲೂಕಿನಲ್ಲಿ ಹಲವೆಡೆ ವಿದ್ಯುತ್ ಕಂಬ ಧರೆಗುರುಳಿವೆ.

ಪುತ್ತೂರು- ಉಪ್ಪಿನಂಗಡಿ ರಸ್ತೆಗೆ ಸೇಡಿಯಾಪು ಬಳಿ ಮರವೊಂದು ಉರುಳಿ ಬಿದ್ದಿದ್ದರಿಂದ ಕೆಲ ಕಾಲ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು.

ಉಪ್ಪಿನಂಗಡಿಯಲ್ಲಿ ಕುಮಾರಧಾರಾ ಮತ್ತು ನೇತ್ರಾವತಿ ಎರಡೂ ನದಿಗಳ ನೀರಿನ ಮಟ್ಟ ಏರಿಕೆಯಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮಳೆಗೆ 20ಕ್ಕೂ ಹೆಚ್ಚು ಮನೆಗಳು ಭಾಗಶಃ ಕುಸಿದಿವೆ. ದನದ ಕೊಟ್ಟಿಗೆಗಳಿಗೆ ಹಾನಿಯಾಗಿದೆ. ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಚಿಕ್ಕಮಗಳೂರು ಜಿಲ್ಲೆಯ ಗಿರಿ ಶ್ರೇಣಿ ಭಾಗದಲ್ಲಿ 10, ಮಲೆನಾಡಿನ ವಿವಿಧೆಡೆ 20 ವಿದ್ಯುತ್ ಕಂಬಗಳು ಬಿದ್ದಿವೆ. ಹಲವು ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಕಡಿತವಾಗಿದೆ.

8ನೇ ಪುಟ ನೋಡಿ

ತುಂಗಾ ಜಲಾಶಯ ಭರ್ತಿ 9,500 ಕ್ಯುಸೆಕ್ ನೀರು ಬಿಡುಗಡೆ

ಶಿವಮೊಗ್ಗ: ಗಾಜನೂರು ಗ್ರಾಮದ ಬಳಿಯ ತುಂಗಾ ಅಣೆಕಟ್ಟು ಭರ್ತಿಯಾಗಿದ್ದು, ಸೋಮವಾರ ಹೆಚ್ಚುವರಿ ನೀರು ಹೊರಗಡೆ ಹರಿಸಲಾಯಿತು.

ಹಿನ್ನೀರು ಭಾಗದಲ್ಲಿ ಜೋರು ಮಳೆಯಾಗುತ್ತಿದ್ದು, ತುಂಗಾ ಅಣೆಕಟ್ಟು ಭರ್ತಿಯಾಗಿದೆ. 21 ಕ್ರಸ್ಟ್ ಗೇಟ್‌ಗಳ ಮೂಲಕ 9,500 ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಗಾಜನೂರು ಜಲಾಶಯ ರಾಜ್ಯದ ಅತಿ ಚಿಕ್ಕ ಅಣೆಕಟ್ಟಾಗಿದ್ದು, ಈ ಅಣೆಕಟ್ಟು 2.85 ಕ್ಯುಸೆಕ್ ನೀರು ಸಂಗ್ರಹ ಸಾಮರ್ಥ್ಯವನ್ನು ಹೊಂದಿದೆ. ಜಿಲ್ಲೆಯಲ್ಲಿ ಎರಡು ತಿಂಗಳಿಂದ ಆಗಾಗ್ಗೆ ಮಳೆಯಾಗುತ್ತಿರುವುದರಿಂದ ಈ ಬಾರಿ ಅಣೆಕಟ್ಟು ಜೂನ್ ಎರಡನೇ ವಾರಕ್ಕೇ ತುಂಬಿದೆ. ನದಿಗೆ ನೀರು ಬಿಡುವ ಬಗ್ಗೆ ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಭೂ ಖರೀದಿ ಅಕ್ರಮ ಆರೋಪ: 'ಸುಪ್ರೀಂ' ಮೇಲ್ವಿಚಾರಣೆಯಲ್ಲಿ ಲೆಕ್ಕಪರಿಶೋಧನೆಗೆ ಆಗ್ರಹ

'ರಾಮ ಮಂದಿರ ದೇಣಿಗೆ ಹಣ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಬತ್ತಳಿಕೆಯ ಬಹುದೊಡ್ಡ ಅಸ್ತ್ರವಾಗಿದ್ದ ಅಯೋಧ್ಯೆಯ ರಾಮ ಮಂದಿರ ನಿರ್ಮಾಣದಲ್ಲಿ ಅಕ್ರಮ ಎಸಗಲಾಗಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ.

'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂಮಿ ಖರೀದಿಯಲ್ಲಿ ಭಾರಿ ಅಕ್ರಮ ನಡೆದಿದೆ. ಮಂದಿರ ನಿರ್ಮಾಣಕ್ಕೆ ಜನರು ದೇಣಿಗೆ ನೀಡಿದ್ದ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಲೆಕ್ಕಪರಿಶೋಧನೆ ನಡೆಸಬೇಕು' ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ದೇಶದ ಹಲವೆಡೆ ಕಾಂಗ್ರೆಸ್ ಪ್ರತಿಭಟನೆ ನಡೆಸಿದೆ. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ.

ರಾಮಜನ್ಮಭೂಮಿಯ 70 ಎಕರೆ ನಿವೇಶನಕ್ಕೆ ಹೊಂದಿಕೊಂಡಂತೆ ಇರುವ ಜಮೀನೊಂದನ್ನು ₹2 ಕೋಟಿಗೆ ಖರೀದಿಸಿ, 5 ನಿಮಿಷದಲ್ಲಿ ಅದೇ ಜಮೀನನ್ನು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ₹18.5 ಕೋಟಿಗೆ ಮಾರಾಟ ಮಾಡಲಾಗಿದೆ ಎಂದು ಎಎಪಿ, ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಆರೋಪಿಸಿವೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಲಖನೌ ನಿವಾಸದ ಎದುರು ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

> ರಾಮ ಭಕ್ತಿಯ ಹೆಸರಿನಲ್ಲಿ ಕೋಟ್ಯಂತರ ಜನ ದೇಣಿಗೆ ನೀಡಿದ್ದಾರೆ. ಆ ದೇಣಿಗೆಯ ದುರ್ಬಳಕೆ ಖಂಡಿತಾ ಅನೈತಿಕವಾದುದು. ಜನರ ನಂಬಿಕೆಗೆ ಮಾಡಿದ ದ್ರೋಹ
>
> **ಪ್ರಿಯಾಂಕಾ ಗಾಂಧಿ ವಾದ್ರಾ**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

9ನೇ ಪುಟ ನೋಡಿ

ಮಾರುಕಟ್ಟೆ ದರದಲ್ಲಿ ಖರೀದಿ: ಟ್ರಸ್ಟ್ ಸಮರ್ಥನೆ

'ಇದು ರಾಜಕೀಯ ಪ್ರೇರಿತ ಆರೋಪ. ಜನರ ಹಾದಿಯನ್ನು ತಪ್ಪಿಸಲು ಈ ಆರೋಪ ಮಾಡಲಾಗುತ್ತಿದೆ. ಜಮೀನು ಖರೀದಿಯಲ್ಲಿ ಯಾವುದೇ ಹಗರಣ ನಡೆದಿಲ್ಲ'' ಎಂದು ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರಾಯ್ ವಿರೋಧ ಪಕ್ಷಗಳ ಆರೋಪವನ್ನು ನಿರಾಕರಿಸಿದ್ದಾರೆ.

'ಜಮೀನನ್ನು ₹ 2 ಕೋಟಿಗೆ ಮಾರಾಟ ಮಾಡಲು ಮೂಲ ಮಾಲೀಕರು ವರ್ಷಗಳ ಹಿಂದೆಯೇ ಒಪ್ಪಂದ ಮಾಡಿಕೊಂಡಿದ್ದರು. ಆ ಪ್ರಕಾರವೇ 2021ರ ಮಾರ್ಚ್‌ನಲ್ಲಿ ಮಾರಾಟ ದಾಖಲೆ ಸಿದ್ಧಪಡಿಸಿದ್ದಾರೆ. ಹಿಂದಿನ ಒಪ್ಪಂದದಂತೆ ಜಮೀನನ್ನು ₹ 2 ಕೋಟಿಗೇ ಮಾರಾಟ ಮಾಡಿದ್ದಾರೆ. ಆದರೆ ಎರಡನೇ ಮಾರಾಟಗಾರರಿಂದ ನಾವು ಮಾರುಕಟ್ಟೆ ಬೆಲೆಯಾದ ₹ 18.5 ಕೋಟಿ ನೀಡಿ ಜಮೀನು ಖರೀದಿಸಿದ್ದೇವೆ. ಇದರಲ್ಲಿ ಯಾವುದೇ ಅವ್ಯವಹಾರ ಇಲ್ಲ' ಎಂದು ಚಂಪತ್ ರಾಯ್ ಸ್ಪಷ್ಟನೆ ನೀಡಿದ್ದಾರೆ.

ಇಸ್ರೇಲ್ ಕಂಪನಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್ (ಐಎಐ) ಕಂಪನಿಯು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ಗೆ (ಬಿಇಎಲ್) 100 ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ನೀಡಿದೆ. ಕೋವಿಡ್ ಪೀಡಿತರ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳನ್ನು ಬಳಸಲಾಗುತ್ತದೆ. ಬಿಇಎಲ್‌ನ ಮಾರುಕಟ್ಟೆ ವಿಭಾಗದ ನಿರ್ದೇಶಕ ಆನಂದಿ ರಾಮಲಿಂಗಂ ಅವರು ಕಾನ್ಸನ್‌ಟ್ರೇಟರ್‌ಗಳನ್ನು ಬಿಇಎಲ್‌ನ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಕೆ.ಎಂ. ಶಿವಕುಮಾರನ್ ಅವರಿಗೆ ಹಸ್ತಾಂತರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಲಾಕ್‌ಡೌನ್ ಸಡಿಲಗೊಂಡ ಬಳಿಕವೂ ಎಚ್ಚರಿಕೆ ವಹಿಸಿ: ಬಿಬಿಎಂಪಿ ಮುಖ್ಯ ಆಯುಕ್ತ

ಹೊರಗಿನಿಂದ ಬರುವವರಿಗೆ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಣಕ್ಕಾಗಿ ಜಾರಿಗೊಳಿಸಿದ್ದ ಲಾಕ್‌ಡೌನ್ ಸೋಮವಾರದಿಂದ ಸಡಿಲವಾಗಿದೆ. ಇದರ ಬೆನ್ನಲ್ಲೇ, ಕೋವಿಡ್ ಪರೀಕ್ಷೆ, ಸೋಂಕು ಹೆಚ್ಚು ಪತ್ತೆಯಾಗುವ ಕಡೆ ಕಂಟೈನ್ಮೆಂಟ್ ವಲಯಗಳನ್ನು ಗುರುತಿಸುವುದು ಮತ್ತು ಸೋಂಕಿತರ ಜೊತೆ ಸಂಪರ್ಕ ಬಾರದಂತೆ ಪ್ರತ್ಯೇಕಿಸುವ ಪ್ರಕ್ರಿಯೆಗಳನ್ನು ತೀವ್ರಗೊಳಿಸಲು ಬಿಬಿಎಂಪಿ ಮುಂದಾಗಿದೆ.

ಹೊರಗಿನಿಂದ ಬರುವವರನ್ನು ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಕ್ರಮಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ವರ್ಚುವಲ್ ರೂಪದಲ್ಲಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, 'ಸಾರ್ವಜನಿಕರು ಕೋವಿಡ್ ನಿಯಂತ್ರಣ ನಿಯಮಗಳನ್ನು ಪಾಲಿಸಿದರೆ ಮಾತ್ರ ಈ ಸೋಂಕಿನ ವಿರುದ್ಧದ ಹೋರಾಟ ಯಶಸ್ಸು ಕಾಣಲು ಸಾಧ್ಯ. ಕೋವಿಡ್ ಪರೀಕ್ಷೆ, ಕಂಟೈನ್ಮೆಂಟ್ ವಲಯಗಳನ್ನು ಗುರುತಿಸುವುದು ಮತ್ತು ಸೋಂಕಿತರನ್ನು ಪ್ರತ್ಯೇಕಿಸುವ ಪ್ರಕ್ರಿಯೆಯನ್ನು ಕ್ರಮಬದ್ಧವಾಗಿ ನಡೆಸಬೇಕು' ಎಂದು ನಿರ್ದೇಶನ ನೀಡಿದರು.

ಕೋವಿಡ್ ಪರೀಕ್ಷೆ: ಬಿಬಿಎಂಪಿ ಸಿಬ್ಬಂದಿ ನಗರದ ಹಾಸ್ಟೆಲ್‌ಗಳು, ಪೇಯಿಂಗ್ ಗೆಸ್ಟ್ ಕಟ್ಟಡಗಳು, ಕಟ್ಟಡ ನಿರ್ಮಾಣ ತಾಣಗಳು ಹಾಗೂ ಕಾರ್ಖಾನೆಗಳಿಗೆ ತೆರಳಿ ಎಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಅಪಾರ್ಟ್‌ಮೆಂಟ್‌ಗಳ ಸಮುಚ್ಚಯಗಳಿಗೆ ಹೊರಗಿನಿಂದ ಬರುವವರಿಗೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ (ಆರ್‌ಡಬ್ಲ್ಯುಎ) ಪದಾಧಿಕಾರಿಗಳಿಗೆ ಸೂಚನೆ ನೀಡಬೇಕು. ಸೋಂಕಿನ ಲಕ್ಷಣಗಳಿರುವವರನ್ನು ಕಡ್ಡಾಯವಾಗಿ ಪರೀಕ್ಷೆಗೆ ಒಳಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

'ಪ್ರತಿಯೊಬ್ಬರೂ ಸೋಂಕಿನಿಂದ ರಕ್ಷಣೆ ಪಡೆದಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳಲು ನಗರದ ಎಲ್ಲೆಡೆ ಲಸಿಕಾ ಕಾರ್ಯಕ್ರಮವನ್ನು ಬಿಬಿಎಂಪಿ ನಡೆಸುತ್ತಿದೆ. ಆದರೆ, ಪ್ರಕರಣಗಳು ಮತ್ತೆ ಏರಿಕೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಹಾಗೂ ಜಾಗೃತಿ ನಾಗರಿಕರ ಮೇಲೆಯೂ ಇದೆ. ಸೋಂಕು ಹರಡುವಿಕೆಯನ್ನು ಸಂಪೂರ್ಣ ನಿಯಂತ್ರಿಸಬೇಕಾದರೆ ಲಾಕ್‌ಡೌನ್ ಸಡಿಲಿಕೆ ಬಳಿಕವೂ ಎಲ್ಲರೂ ಜಾಗರೂಕರಾಗಿ ವರ್ತಿಸಬೇಕು' ಎಂದು ಹೇಳಿದರು.

ಲಸಿಕೆ ಕಾರ್ಯಕ್ರಮ: ನಗರದಲ್ಲಿ 44 ವರ್ಷ ಮೇಲ್ಪಟ್ಟವರು ಹಾಗೂ 18 ರಿಂದ 44 ವರ್ಷದೊಳಗಿನ 40,39,744 ಮಂದಿಗೆ ಲಸಿಕೆ ನೀಡಲಾಗಿದೆ. ಲಸಿಕೆ ಪಡೆಯಲು ಅರ್ಹರಿರುವ ಎಲ್ಲರಿಗೂ ತ್ವರಿತವಾಗಿ ಲಸಿಕೆ ನೀಡಬೇಕು. ಎರಡನೇ ಡೋಸ್ ಪಡೆಯಬೇಕಾದವರಿಗೆ ಕರೆ ಮಾಡಿ ಲಸಿಕೆ ಹಾಕಿಸಿಕೊಳ್ಳಲು ತಿಳಿಸಬೇಕು. ಮನೆ-ಮನೆ ಸಮೀಕ್ಷೆ ಮಾಡಿ ಲಸಿಕೆ ಪಡೆಯುವಂತೆ ಉತ್ತೇಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮೂರನೇ ಅಲೆ ನಿಯಂತ್ರಣಕ್ಕೆ ಸಿದ್ಧತೆ: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಬೇಕು. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಹೆರಿಗೆ ಆಸ್ಪತ್ರೆಗಳ ಮತ್ತು ರೆಫರಲ್ ಆಸ್ಪತ್ರೆಗಳಲ್ಲಿರುವ ಕೊರತೆಗಳನ್ನು ಪಟ್ಟಿ ಮಾಡಿ ಅವುಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯ ಆಯುಕ್ತರು ಮುಖ್ಯ ಆರೋಗ್ಯಾಧಿಕಾರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ಬಿ.ಕೆ. ವಿಜಯೇಂದ್ರ, ವಲಯ ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳು ಸಲಹೆ ನೀಡಿದರು.

ಕೋವಿಡ್ ನಿಯಂತ್ರಣ: ಬಿಬಿಎಂಪಿ ಸೂಚಿಸಿದ ಕ್ರಮಗಳು

- ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಿನ ಲಸಿಕಾ ಶಿಬಿರಗಳನ್ನು ಆಯೋಜಿಸಿ
- ಸೋಂಕಿನ ಲಕ್ಷಣ ಕಂಡುಬಂದರೆ ತಕ್ಷಣ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಿ
- ಅನಿವಾರ್ಯ ಅಲ್ಲದಿದ್ದರೆ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವುದನ್ನು ತಪ್ಪಿಸಿ
- ಕೋವಿಡ್ ನಿಯಂತ್ರಣ ಪೂರಕ ನಡವಳಿಕೆ ರೂಢಿಸಿಕೊಳ್ಳಿ
- ಅರ್ಹರೆಲ್ಲರೂ ಕೋವಿಡ್ ಲಸಿಕೆ ಪಡೆಯಿರಿ

ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ, ಸೋಂಕು ಪತ್ತೆ ದರ ಕಡಿಮೆಯಾಗಿದೆ. ಮತ್ತೆ ಏರಿಕೆಯಾಗದಂತೆ ತಡೆಯಲು ಎಲ್ಲರೂ ಎಚ್ಚರ ವಹಿಸಬೇಕು

ಗೌರವ್ ಗುಪ್ತ, ಮುಖ್ಯ ಆಯುಕ್ತ, ಬಿಬಿಎಂಪಿ

ಸುದ್ದಿ 2 ನಿಮಿಷ

ಉದ್ಯಾನ: ವ್ಯಾಯಾಮ ಪರಿಕರ ಬಳಕೆಗೆ ನಿರ್ಬಂಧ

ಬೆಂಗಳೂರು: ನಗರದ ಉದ್ಯಾನಗಳನ್ನು ಮುಂಜಾನೆಯ ವಾಯು ವಿಹಾರಕ್ಕಾಗಿ ಬೆಳಿಗ್ಗೆ 5ರಿಂದ 10 ಗಂಟೆವರೆಗೆ ಬಳಸುವುದಕ್ಕೆ ಬಿಬಿಎಂಪಿ ಅವಕಾಶ ನೀಡಿದೆ. ಆದರೆ, ಈ ಉದ್ಯಾನಗಳಲ್ಲಿ ಅಳವಡಿಸಿರುವ ವ್ಯಾಯಾಮ ಪರಿಕರಗಳ ಬಳಕೆಯನ್ನು ನಿರ್ಬಂಧಿಸಿದೆ.

ಉದ್ಯಾನಗಳಲ್ಲಿ ಅಳವಡಿಸಿರುವ ವ್ಯಾಯಾಮ ಪರಿಕರ ಬಳಕೆ ತಾಣಗಳನ್ನು ಮುಂದಿನ ಆದೇಶದವರೆಗೆ ಮುಚ್ಚಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದ್ದಾರೆ.

'ಜಿಮ್‌ಗಳನ್ನು ಮುಚ್ಚಿರುವುದರಿಂದ ಹಾಗೂ ಸಾರ್ವಜನಿಕರ ಮುಕ್ತ ಬಳಕೆಗೆ ಲಭ್ಯವಿದ್ದ ವ್ಯಾಯಾಮ ಸೌಕರ್ಯಗಳನ್ನು ಉಪಯೋಗಿಸುವುದನ್ನು ನಿರ್ಬಂಧಿಸಿರುವುದರಿಂದ ಅನನುಕೂಲವಾಗುತ್ತದೆ ಎಂಬುದು ನಮಗೂ ಗೊತ್ತು. ಆದರೆ, ಕೋವಿಡ್ ನಿಯಂತ್ರಣಕ್ಕಾಗಿ ಸೀಮಿತ ಅವಧಿವರೆಗೆ ಇವುಗಳ ಬಳಕೆ ನಿಷೇಧ ಅನಿವಾರ್ಯ ಎಂಬುದನ್ನು ಜನರೂ ಅರ್ಥಮಾಡಿಕೊಳ್ಳಬೇಕು' ಎಂದು ಗೌರವ್ ಗುಪ್ತ ಸೋಮವಾರ ಬಿಡುಗಡೆ ಮಾಡಿರುವ ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ.

ಉದ್ಯಾನಗಳಲ್ಲಿ, ಮನರಂಜನಾ ತಾಣಗಳಲ್ಲಿ ಹಾಗೂ ವ್ಯಾಯಾಮ ನಡೆಸುವ ಸ್ಥಳಗಳಲ್ಲಿ ಜನರು ಗುಂಪುಗೂಡಬಾರದು. ಪರಸ್ಪರ ಸುರಕ್ಷಿತ ಅಂತರ ಕಾಪಾಡಬೇಕು. ಮಕ್ಕಳು ಗುಂಪು ಸೇರಿ ಆಟವಾಡುವುದಕ್ಕೆ ಅವಕಾಶ ಕಲ್ಪಿಸಬಾರದು ಎಂದು ಅವರು ತಿಳಿಸಿದ್ದಾರೆ.

ವೈದ್ಯರ ಮೇಲೆ ಹಲ್ಲೆ: ಪ್ರತಿಭಟನೆ

ಬೆಂಗಳೂರು: ಫೋರ್ಟಿಸ್ ಆಸ್ಪತ್ರೆ ವೈದ್ಯ ಹಾಗೂ ಶುಶ್ರೂಷಕಿ ಮೇಲೆ ನಡೆದಿರುವ ಹಲ್ಲೆ ಘಟನೆಯನ್ನು ಖಂಡಿಸಿ ಪುಟ್ಟೇನಹಳ್ಳಿ ಠಾಣೆ ಎದುರು ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ, ಆಸ್ಪತ್ರೆಯಿಂದ ಠಾಣೆಯವರೆಗೆ ರ‍್ಯಾಲಿ ನಡೆಸಿದರು. ಭುಜಕ್ಕೆ ಕಪ್ಪು ಪಟ್ಟಿ ಧರಿಸಿ ಆಕ್ರೋಶ ವ್ಯಕ್ತಪಡಿಸಿದರು.

'ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದ ವೈದ್ಯ ಹಾಗೂ ಶುಶ್ರೂಷಕಿ ಮೇಲೆ ರೋಗಿಯ ಪುತ್ರ ಮತ್ತು ತಾಯಿ ಹಲ್ಲೆ ಮಾಡಿದ್ದಾರೆ. ತಲೆಗೆ ತೀವ್ರ ಗಾಯವಾಗಿದ್ದರಿಂದ ವೈದ್ಯರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಹಲ್ಲೆ ಬಗ್ಗೆ ದೂರು ನೀಡಲಾಗಿದ್ದು, ಆರೋಪಿಯನ್ನೂ ಪೊಲೀಸರು ಬಂಧಿಸಿದ್ದಾರೆ. ಆದರೆ, ಆರೋಪಿ ಜಾಮೀನಿನ ಮೇಲೆ ಒಂದೇ ದಿನದಲ್ಲೇ ಹೊರಗೆ ಬಂದಿದ್ದಾರೆ' ಎಂದೂ ಪ್ರತಿಭಟನಕಾರರು ದೂರಿದರು.

'ಜೀವನ ಹಂಗು ತೊರೆದು ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ವೈದ್ಯರ ಮೇಲಿನ ಹಲ್ಲೆ ಹಾಗೂ ಆಸ್ಪತ್ರೆ ಆಸ್ತಿಗೆ ಹಾನಿ ಮಾಡುವ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು. ವೈದ್ಯರು ಹಾಗೂ ಆಸ್ಪತ್ರೆಗೆ ಸೂಕ್ತ ಭದ್ರತೆ ಒದಗಿಸಬೇಕು' ಎಂದು ಪ್ರತಿಭಟನಕಾರರು ಪೊಲೀಸರಿಗೆ ಮನವಿ ಸಲ್ಲಿಸಿದರು.

ಕರೆ ಮಾರ್ಪಾಡು ಜಾಲ: ಮತ್ತೆ ಐವರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಂತರರಾಷ್ಟ್ರೀಯ ಕರೆಗಳನ್ನು (ಐಎಸ್‌ಡಿ) ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡಿಸಿ ದೇಶದ ಭದ್ರತೆಗೆ ಧಕ್ಕೆ ತರುವುದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಮತ್ತೆ ಐವರನ್ನು ಸೋಮವಾರ ಬಂಧಿಸಿದ್ದಾರೆ.

ಸೇನೆಯ ಗುಪ್ತಚರ ವಿಭಾಗ ನೀಡಿದ್ದ ಮಾಹಿತಿ ಆಧರಿಸಿ ತನಿಖೆ ಕೈಗೊಂಡಿದ್ದ ಸಿಸಿಬಿ ಭಯೋತ್ಪಾದನಾ ನಿಗ್ರಹ ವಿಭಾಗದ (ಎಟಿಸಿ) ಅಧಿಕಾರಿಗಳು, ಬಿಟಿಎಂ ಬಡಾವಣೆಯಲ್ಲಿ ವಾಸವಿದ್ದ ಕೇರಳದ ಇಬ್ರಾಹಿಂ ಪುಲ್ಲಟ್ಟಿ (36) ಹಾಗೂ ತಮಿಳುನಾಡಿನ ಗೌತಮ್ (27) ಎಂಬುವರನ್ನು ಸೆರೆ ಹಿಡಿದಿದ್ದರು.

'ಆರೋಪಿಗಳು ತಮ್ಮದೇ ಜಾಲ ರೂಪಿಸಿಕೊಂಡು ಕೃತ್ಯ ಎಸಗುತ್ತಿದ್ದರು. ಅವರು ನೀಡಿದ್ದ ಮಾಹಿತಿ ಆಧರಿಸಿ ತಮಿಳುನಾಡಿನ ಸಂತನ್ ಕುಮಾರ್ (29), ಸುರೇಶ್ ತಂಗವೇಲು (32), ಜೈ ಗಣೇಶ್ (30), ಕೇರಳದ ಮಹಮ್ಮದ್ ಬಷೀರ್ (51) ಹಾಗೂ ಅನೀಸ್ ಅತ್ತಿಮನ್ನೀಲ್ (30) ಎಂಬುವರನ್ನು ಬಂಧಿಸಲಾಗಿದೆ. ಇವರಿಂದ 109 ಸಿಮ್ ಕಾರ್ಡ್ ಅಳವಡಿಸಿದ್ದ ಎಫ್‌ಸಿಟಿ (ಫಿಕ್ಸೆಡ್ ಸೆಲ್ಯುಲರ್ ಟರ್ಮಿನಲ್) ಬಾಕ್ಸ್, ಮೂರು ಸಾವಿರ ಸಿಮ್ ಕಾರ್ಡ್, 23 ಲ್ಯಾಪ್‌ಟಾಪ್, 10 ಪೆನ್ ಡ್ರೈವ್ ಹಾಗೂ ಇತರೆ ಉಪಕರಣಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ಬಿಟಿಎಂ ಲೇಔಟ್, ಮಡಿವಾಳ ಹಾಗೂ ಸುದ್ದಗುಂಟೆಪಾಳ್ಯದಲ್ಲಿ ಆರೋಪಿಗಳು ವಾಸವಿದ್ದರು. ತಮ್ಮದೇ ಜಾಗದಲ್ಲಿ ಎಫ್‌ಸಿಟಿ ಬಾಕ್ಸ್ ಇಟ್ಟುಕೊಂಡು ಕೃತ್ಯ ಎಸಗುತ್ತಿದ್ದರು.'

'ಆರೋಪಿ ಸಂತನ್ ಕುಮಾರ್, ಮೊಬೈಲ್ ಸೇವಾ ಕಂಪನಿಯೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿದ್ದ. ಆತನೇ ತಮಿಳುನಾಡಿನ ಸುರೇಶ್ ತಂಗವೇಲು ಹಾಗೂ ಜೈಗಣೇಶ್ ಮೂಲಕ ಸಿಮ್ ಕಾರ್ಡ್‌ಗಳನ್ನು ಕೊರಿಯರ್ ಮೂಲಕ ಬೆಂಗಳೂರಿಗೆ ತರಿಸುತ್ತಿದ್ದ' ಎಂದೂ ಹೇಳಿದರು.

'ಪಾಕಿಸ್ತಾನ, ಯುಎಇ ಹಾಗೂ ಇತರೆ ದೇಶಗಳಿಂದ ಬರುತ್ತಿದ್ದ ಐಎಸ್‌ಡಿ ಕರೆಗಳನ್ನು ಆರೋಪಿಗಳು ಸ್ಥಳೀಯ ಕರೆಗಳನ್ನಾಗಿ ಮಾರ್ಪಾಡಿಸುತ್ತಿದ್ದರು. ಈ ಮೂಲಕ ದೇಶದ ಭದ್ರತೆಗೆ ಧಕ್ಕೆ ತರುತ್ತಿದ್ದರು. ಹವಾಲಾ ದಂಧೆಯನ್ನೂ ನಡೆಸುತ್ತಿದ್ದ ಮಾಹಿತಿ ಇದೆ. ಆರೋಪಿಗಳ ಬಗ್ಗೆ ರಾಷ್ಟ್ರೀಯ ತನಿಖಾ ಸಂಸ್ಥೆಗಳೂ ತನಿಖೆ ಆರಂಭಿಸಿವೆ' ಎಂದೂ ತಿಳಿಸಿದರು.

ಮುಖ್ಯಾಂಶಗಳು

- ಸೇನೆಯ ಗುಪ್ತಚರ ವಿಭಾಗ ನೀಡಿದ್ದ ಮಾಹಿತಿ ಆಧರಿಸಿ ತನಿಖೆ
- ಸಿಸಿಬಿ ಪೊಲೀಸರಿಂದ ಆರೋಪಿಗಳ ಸೆರೆ

'ಸ್ಕೌಟ್ಸ್–ಗೈಡ್ಸ್‌ನಿಂದ ಅರ್ಜಿ ಆಹ್ವಾನಿಸಿಲ್ಲ'

ಬೆಂಗಳೂರು: 'ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಪಡೆದ ಅಭ್ಯರ್ಥಿಗಳನ್ನು ಸಂಸ್ಥೆಯ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಾಗಿ ಕೆಲವರು ಜಾಹೀರಾತು ನೀಡಿ, ಸಂಸ್ಥೆಯ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಸಂಸ್ಥೆ ಯಾವುದೇ ಹುದ್ದೆಗೆ ಅರ್ಜಿ ಆಹ್ವಾನಿಸಿಲ್ಲ' ಎಂದು ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಪಷ್ಟನೆ ನೀಡಿದೆ.

'ನ್ಯಾಷನಲ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆರ್ಗನೈಸೇಷನ್' ಹಾಗೂ ಇತರ ಸಂಸ್ಥೆಗಳ ಹೆಸರಿನಲ್ಲಿ ಬೆಳಗಾವಿ, ಬಾಗಲಕೋಟೆ, ಹಾವೇರಿ, ಶಿರಸಿ, ಕಾರವಾರ, ಶಿವಮೊಗ್ಗ, ದಾವಣಗೆರೆ, ಉಡುಪಿ, ಮಂಗಳೂರಿನಲ್ಲಿ ನೇಮಕಾತಿ ಸಂಬಂಧ ಜಾಹೀರಾತು ನೀಡಲಾಗಿದೆ. ಅಭ್ಯರ್ಥಿಗಳಿಂದ ಶುಲ್ಕ ವಸೂಲಿ ಮಾಡುತ್ತಿರುವ ವಿಚಾರ ಸಂಸ್ಥೆಯ ಗಮನಕ್ಕೆ ಬಂದಿದೆ' ಎಂದು ಸ್ಕೌಟ್ಸ್ ಆ್ಯಂಡ್ ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಪಿ.ಜಿ. ಆರ್.ಸಿಂಧ್ಯ ತಿಳಿಸಿದ್ದಾರೆ.

ನೈರುತ್ಯ ರೈಲ್ವೆ

E- Tender Notice No. CAO/CN/BNC/019/2021 Dated:10.06.2021

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ.

Tender Ref: GDG-WD-029

ಕ್ರ	ಕಾಮಗಾರಿಗಳ ಹೆಸರು	ಮೌಲ್ಯ ಕೋಟಿಗಳಲ್ಲಿ
1	ಗದಗ–ವಾಡಿ ಹೊಸ ಬಿಜಿ ಲೈನ್–	Rs. 12.87/-

ತಳಕಲ್‌ನಿಂದ ಸಂಗನಾಳ ನಿಲ್ದಾಣಗಳ ನಡುವೆ ಕಿ.ಮೀ. 0.00 ದಿಂದ 22.200 ವರೆಗೆ ಸ್ಟೇಷನ್ ಅಪ್ರೋಚ್ ರೋಡ್, ಗೂಡ್ಸ್ ರೋಡ್, ಸರ್ವಿಸ್ ರೋಡ್, ಟ್ರಾಲಿ ರೆಫ್ಯೂಜಸ್, ಹೆಚ್‌ಇಎಲ್‌ನ ಚಿತ್ರಕಲೆ, ಡಿಎಲ್, ಇಂಡಿಕೇಟರ್ ಬೋರ್ಡ್ ಒದಗಿಸುವುದು ಮತ್ತು ಮರ ನೆಡುವಿಕೆ ಇಂತಹ ಮುಂತಾದ ವಿವಿಧ ಮತ್ತು ಪೂರಕ ಕೆಲಸಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–07–2021, 11:00 ಗಂಟೆಯವರೆಗೆ

Tender Ref: LD-MRJ-059

2	ಲೋಂಡಾ–ಮೀರಜ್	Rs. 11.21/-

ದ್ವಿಪಥೀಕರಣ ಕಾಮಗಾರಿ: ಸೂಳೇಭಾವಿ (ಸೂಳೆಭಾವಿ ಯಾರ್ಡ್ ಹೊರತುಪಡಿಸಿ) ಮತ್ತು ಘಟಪ್ರಭಾ (ಘಟಪ್ರಭಾ ಯಾರ್ಡ್ ಹೊರತುಪಡಿಸಿ) ನಿಲ್ದಾಣಗಳ ನಡುವೆ ಸುಳಧಾಳ, ಪಾಚ್ಛಾಪೂರ ಹಾಗೂ ಗೋಕಾಕ ರೋಡ್ ಯಾರ್ಡ್‌ಗಳನ್ನು ಒಳಗೊಂಡಂತೆ ಕಿ.ಮೀ. 627/000 ರಿಂದ 668/000 (41 ಕಿ.ಮೀ.)ರ ನಡುವೆ ಬಿಜಿ ಟ್ರ್ಯಾಕ್‌ನ ಲಿಂಕಿಂಗ್ ಮತ್ತು ಇತರ ವಿವಿಧ ಕೆಲಸಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–07–2021, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನೀಯರ್/ಸಿಎನ್/ಕಾಮಗಾರಿಗಳು ಬೆಂಗಳೂರು ಕ್ಯಾಂಟೋನ್ಮೆಂಟ್

PUB/27/AAV/PRB/SBC/2021-22

ರೈಲ್ವೆ ಆಸ್ಪತ್ರೆ

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು

ಇಓಐ ಸಂಖ್ಯೆ.ಆರ್‌ಡಬ್ಲ್ಯೂಎಫ್/ಎಂಇಡಿ/ಇಓಐ/2021–22/02 ದಿನಾಂಕ: 14/06/2021 ರ ಪ್ರಕಟಣೆ

ರೈಲು ಗಾಲಿ ಕಾರ್ಖಾನೆ, ಯಲಹಂಕ ಇಲ್ಲಿನ ರೈಲ್ವೆ ಆಸ್ಪತ್ರೆಯ ರೋಗಿಗಳಿಗೆ ಎಲ್ಲಾ ಬ್ರಾಡ್ ಹಾಗೂ ಸೂಪರ್ ಸ್ಪೆಷಾಲಿಟಿ ವ್ಯವಸ್ಥೆಯ ನಿರ್ವಹಣೆಗಾಗಿ ಸಿಜಿಹೆಚ್‌ಎಸ್ ನೋಂದಾಯಿತ ಆಸ್ಪತ್ರೆಗಳಲ್ಲಿ 2014 ಬೆಂಗಳೂರು ದರದಲ್ಲಿ ಆರಂಭದ 2 (ಎರಡು) ವರ್ಷಗಳ ಅವಧಿಗಾಗಿ ಗುತ್ತಿಗೆ ಆಧಾರದ ಮೇಲೆ ತಮ್ಮ ಆಸಕ್ತಿ ವ್ಯಕ್ತ ಪಡಿಸಲು (ಇಓಐ) ಆಹ್ವಾನಿಸಿದೆ.

ಆಸಕ್ತಿಯುಳ್ಳ ಸಂಸ್ಥೆಗಳು ತಮ್ಮ ಆಸಕ್ತಿಯನ್ನು ವ್ಯಕ್ತ ಪಡಿಸಲು ಪ್ರಧಾನ ಮುಖ್ಯ ವೈದ್ಯಕೀಯ ಅಧಿಕಾರಿ, ರೈಲ್ವೆ ಆಸ್ಪತ್ರೆ, ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು – 560 064 ಇವರಿಗೆ ಮೊಹರಾದ ಲಕೋಟೆಯಲ್ಲಿ ದಿನಾಂಕ 14/07/2021 ರಂದು 1500 ಗಂಟೆಗೆ ಅಥವಾ ಮುಂಚಿತವಾಗಿ ನೋಂದಣಿ ಅಂಚೆ ಮೂಲಕ ಅಥವಾ ಭೌತಿಕವಾಗಿ ಸಲ್ಲಿಸಬಹುದು.

ವಿವರವಾದ ನಿಯಮ ಹಾಗೂ ನಿಬಂಧನೆಗಳು ಆರ್‌ಡಬ್ಲ್ಯೂಎಫ್ ವೆಬ್‌ಸೈಟ್ www.rwf.indianrailways.gov.in ನಲ್ಲಿ ಲಭ್ಯವಿದೆ.

ಪ್ರಧಾನ ಮುಖ್ಯ ವೈದ್ಯಕೀಯ ಅಧಿಕಾರಿ
ಭಾರತದ ರಾಷ್ಟ್ರಪತಿಯವರ ಪರವಾಗಿ

ನಗರಸಭಾ ಕಾರ್ಯಾಲಯ ಚನ್ನಪಟ್ಟಣ.

ರಾಮನಗರ ಜಿಲ್ಲೆ – 562 160.

ದೂ.: 080–27251235. ಇಮೇಲ್: itstaff_ulb_channapatna@yahoo.co.in

ವೆಬ್‌ಸೈಟ್: www.channapatnacity.mrc.gov.in

ನಂ.: ನಸಚ/ಕಾವಿ/ಟೆಂಡರ್/ಸಿ.ಆರ್/04/2021–22 ದಿನಾಂಕ : 11–06–2021

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

14ನೇ ಹಣಕಾಸು (ಸಾಮಾನ್ಯ ಮೂಲ) ಯೋಜನೆಯಡಿ 2018–19ನೇ ಸಾಲಿನಿಂದ 2019–20ನೇ ಸಾಲಿನವರೆಗೆ ಉಳಿತಾಯವಾಗಿರುವ ಅನುದಾನ ಮತ್ತು 14ನೇ ಹಣಕಾಸು (ಸಾಮಾನ್ಯ ಕಾರ್ಯಧಾರಿತ) ಯೋಜನೆಯಡಿ 2016–17 ಮತ್ತು 2017–18ನೇ ಸಾಲಿನಲ್ಲಿ ಉಳಿತಾಯವಾಗಿರುವ ಅನುದಾನದಲ್ಲಿ ಈ ಕೆಳಕಂಡ ಇಂಡೆಂಟ್ ಸಂಖ್ಯೆಯ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ನಿಯಮಗಳು ಮತ್ತು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ, ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಮತ್ತು ವಿದ್ಯುತ್ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮೂಲಕ ಐಟಂವಾರು ಆನ್‌ಲೈನ್ ಟೆಂಟರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು KW-1 & KW-2 ರ ನಿಯಮಗಳಂತೆ ದಿನಾಂಕ : 29–06–2021 ರ ಸಂಜೆ 4.30 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ಪ್ಯಾಕೇಜ್ ಮೊತ್ತವು ಕ್ರಮವಾಗಿ ರೂ. 1.50 ಲಕ್ಷ ರಿಂದ ರೂ. 45.00 ಲಕ್ಷಗಳು ಇರುತ್ತದೆ. ಟೆಂಡರ್‌ನ್ನು ತೆರೆಯುವ ದಿನಾಂಕ : 01–07–2021 ರಂದು ಬೆಳಿಗ್ಗೆ 11.00 ಗಂಟೆ. WORK_INDENT NO. 1) 117067, 2) 117068, 3) 117069, 4) 117070, 5) 117071, 6) 117072, 7) 117073, ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆ ವೆಬ್‌ಸೈಟ್ www.channapatnacity.mrc.gov.in ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಚನ್ನಪಟ್ಟಣ.

ಡಿಐಪಿಆರ್/ರಾಮನಗರ/98/ಮಣಿಪಾಲ್/20–21

'ಕೆರೆ ಒತ್ತುವರಿ ತೆರವಿಗೆ ವಿಳಂಬ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲ ಕೆರೆಗಳ ಸರ್ವೆ ಕಾರ್ಯವನ್ನು ಶೀಘ್ರವೇ ಕೈಗೊಳ್ಳಿ. ಒತ್ತುವರಿ ಕಂಡುಬಂದರೆ ಕೂಡಲೇ ತೆರವುಗೊಳಿಸಿ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೆರೆಗಳ ಅಭಿವೃದ್ಧಿ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ಸೋಮವಾರ ಚರ್ಚಿಸಿದರು.

'ಎಲ್ಲ ಕೆರೆಗಳ ಗಡಿ ಗುರುತಿಸುವ ಕೆಲಸ ಆಗಬೇಕು. ಅವುಗಳ ಸುತ್ತ ಇರುವ ಮೀಸಲು ವಲಯದಲ್ಲಿ ಕಟ್ಟಡ ನಿರ್ಮಾಣ ಹಾಗೂ ಇತರ ಕಾಮಗಾರಿಗಳಿಗೆ ಅನುಮತಿ ನೀಡುವಂತಿಲ್ಲ. ಈ ಬಗ್ಗೆ ಗಮನಹರಿಸಿ. ಕೆರೆಗಳಿಗೆ ನೀರು ಪೂರೈಸುವ ರಾಜಕಾಲುವೆಗಳ ಒತ್ತುವರಿಯನ್ನೂ ಕೂಡಲೇ ತೆರವುಗೊಳಿಸಿ. ಒಂದು ದಿನದೊಳಗೆ ಈ ಬಗ್ಗೆ ವೇಳಾಪಟ್ಟಿ ಸಿದ್ಧಪಡಿಸಿ' ಎಂದು ಸೂಚಿಸಿದರು.

'ಜಿಲ್ಲೆಯಲ್ಲಿ ಒಟ್ಟು 836 ಕೆರೆಗಳಿವೆ. ಈ ಪೈಕಿ ಬಿಬಿಎಂಪಿ ವ್ಯಾಪ್ತಿಯಲ್ಲಿ 204, ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ 46, ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 421 ಕೆರೆಗಳು ಇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಕ್ರಮವಾಗಿ ಐದು ಹಾಗೂ ಒಂದು ಕೆರೆ ಇವೆ. ಉಳಿದ ಕೆರೆಗಳು ಯಾವ ಇಲಾಖೆಗಳ ವ್ಯಾಪ್ತಿಗೆ ಸೇರುತ್ತವೆ ಎಂಬುದನ್ನು ಪತ್ತೆಹಚ್ಚಲು ಶೀಘ್ರವೇ ಸಮೀಕ್ಷೆ ಕೈಗೊಳ್ಳಿ' ಎಂದು ಪಂಚಾಯತ್ ರಾಜ್ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮಿ, ಉತ್ತರ ವಿಭಾಗಾಧಿಕಾರಿ ರಂಗನಾಥ್, ದಕ್ಷಿಣ ಉಪವಿಭಾಗಾಧಿಕಾರಿ ಶಿವಣ್ಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶ್ರೀನಿವಾಸ್ ಇದ್ದರು.

ಪತ್ನಿಯ ಅಜ್ಜಿ, ಸಂಬಂಧಿ ಕೊಂದಿದ್ದವನಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಸುಲಿಗೆಗಾಗಿ ಪತ್ನಿಯ ಅಜ್ಜಿ ಲೂರ್ಡ್‌ಮೇರಿ ಹಾಗೂ ಸುಲಿಗೆಯಲ್ಲಿ ಪಾಲು ಕೇಳಿದ್ದಕ್ಕಾಗಿ ತನ್ನ ಸಂಬಂಧಿ ಶ್ರೀನಿವಾಸ್ ಎಂಬುವರನ್ನು ಕೊಲೆ ಮಾಡಿದ್ದ ಆರೋಪಿ ಫ್ರಾಂಕ್ ಅಂಥೋಣಿ (30) ಎಂಬಾತನಿಗೆ ನಗರದ ಸಿಸಿಎಚ್ 64ನೇ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ರಾಜಗೋಪಾಲನಗರ ಹಾಗೂ ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ 2009ರಲ್ಲಿ ಪ್ರತ್ಯೇಕವಾಗಿ ನಡೆದಿದ್ದ ಕೊಲೆ ಪ್ರಕರಣಗಳ ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ. ವೆಂಕಟೇಶ್ ಅವರು ಸೋಮವಾರ ಆದೇಶ ಹೊರಡಿಸಿದ್ದಾರೆ.

ಕನಕಪುರ ಮುಖ್ಯರಸ್ತೆಯ ತಟ್ಟಗುಪ್ಪೆ ಗ್ರಾಮದ ನಿವಾಸಿ ಫ್ರಾಂಕ್‌ನನ್ನು ಸಿಸಿಬಿ ಸಂಘಟಿತ ಅಪರಾಧ ದಳದ ಪೊಲೀಸರು ಬಂಧಿಸಿದ್ದರು. ಆತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಶರಣಗೌಡ ವಿ. ಪಾಟೀಲ ವಾದಿಸಿದ್ದರು.

ಫ್ರಾಂಕ್

ಸಾಲ ತೀರಿಸಲು ಕೃತ್ಯ: 'ಗೂಡ್ಸ್ ಆಟೊ ಚಾಲಕನಾಗಿದ್ದ ಫ್ರಾಂಕ್, ಸಾವಿರಾರು ರೂಪಾಯಿ ಸಾಲ ಮಾಡಿಕೊಂಡಿದ್ದ. ಅದನ್ನು ತೀರಿಸದಿದ್ದರಿಂದ ಸಾಲಗಾರರು ಕಿರುಕುಳ ನೀಡುತ್ತಿದ್ದರು. ಅದಕ್ಕಾಗಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಯ ಪತ್ನಿಯ ಅಜ್ಜಿ ಲೂರ್ಡ್‌ಮೇರಿ, ಅಗ್ರಹಾರ ದಾಸರಹಳ್ಳಿಯಲ್ಲಿ ಅಂಗಡಿ ನಡೆಸುತ್ತಿದ್ದರು. ಅದೇ ಅಂಗಡಿಯಲ್ಲಿ ಶ್ರೀನಿವಾಸ್ ಕೆಲಸ ಮಾಡುತ್ತಿದ್ದರು. ಆಗಾಗ ಅಂಗಡಿಗೆ ಹೋಗುತ್ತಿದ್ದ ಫ್ರಾಂಕ್, ಅಜ್ಜಿಯ ಮೈ ಮೇಲೆ ಆಭರಣ ಇರುವುದನ್ನು ನೋಡುತ್ತಿದ್ದ. ಆಭರಣಗಳನ್ನು ಸುಲಿಗೆ ಮಾಡಿ ಸಾಲ ತೀರಿಸಬೇಕೆಂದು ಅಂದುಕೊಂಡಿದ್ದ' ಎಂದೂ ತಿಳಿಸಿದರು.

'ಸಂಬಂಧಿ ಶ್ರೀನಿವಾಸ್‌ನಿಗೆ ಹಣದ ಆಮಿಷವೊಡ್ಡಿದ್ದ ಫ್ರಾಂಕ್, ಸುಲಿಗೆಗೆ ಸಹಾಯ ಕೇಳಿದ್ದ. ಇಬ್ಬರೂ ಗೂಡ್ಸ್ ಆಟೊದಲ್ಲಿ ಅಜ್ಜಿಯನ್ನು ಅಪಹರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದರು. ಲಗ್ಗೆರೆ ಬಳಿ ಹೊರವರ್ತುಲ ರಸ್ತೆಯಲ್ಲಿ ಅಜ್ಜಿಯನ್ನು ವಾಹನದಿಂದ ತಳ್ಳಿ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಂದು ಪರಾರಿಯಾಗಿದ್ದರು' ಎಂದೂ ಹೇಳಿದರು.

'ಆಭರಣ ಮಾರಾಟ ಮಾಡಿದ್ದ ಫ್ರಾಂಕ್, ಬಂದ ಹಣವನ್ನು ಸಾಲಗಾರರಿಗೆ ನೀಡಿದ್ದ. ಕೆಲ ದಿನಗಳ ನಂತರ ತನಗೂ ಪಾಲು ನೀಡುವಂತೆ ಶ್ರೀನಿವಾಸ್ ಒತ್ತಾಯಿಸಿದ್ದ. ಹಣ ನೀಡುವುದಾಗಿ ಹೇಳಿ ಶ್ರೀನಿವಾಸ್ ಅವರನ್ನು ಬೇಗೂರು ಬಳಿಯ ನೀಲಗಿರಿ ತೋಪಿಗೆ ಕರೆದೊಯ್ದಿದ್ದ ಫ್ರಾಂಕ್, ಅಲ್ಲಿಯೇ ಕೊಲೆ ಮಾಡಿ ತಲೆಮರೆಸಿಕೊಂಡಿದ್ದ. ಎರಡೂ ಮೃತದೇಹಗಳು ಕೊಳೆತ ಸ್ಥಿತಿಯಲ್ಲಿ ದೊರೆತಿದ್ದವು. ಪ್ರಕರಣಗಳ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು' ಎಂದೂ ಪೊಲೀಸರು ತಿಳಿಸಿದರು.

ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರಕ್ಕೆ ಆಗ್ರಹ

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಬೇಕು. ಬಡ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಕನಿಷ್ಠ ₹10 ಸಾವಿರ ಪರಿಹಾರ ಪ್ರಕಟಿಸಬೇಕು' ಎಂದು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ ರಾಜ್ಯ ಸಮಿತಿಯ ಉಪಾಧ್ಯಕ್ಷ ತಾಜುದ್ದೀನ್ ಇಳಕಲ್ ಒತ್ತಾಯಿಸಿದರು.

ಪಕ್ಷದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ಲಾಕ್‌ಡೌನ್ ಮತ್ತು ಅದರ ಪರಿಣಾಮ' ಕುರಿತ ಆನ್‌ಲೈನ್ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ವಿಚಾರವಾದಿ ನೂರ್ ಶ್ರೀಧರ್, 'ಕೋವಿಡ್ ನಿಯಂತ್ರಿಸಲು ಲಾಕ್‌ಡೌನ್ ಅನಿವಾರ್ಯ ಹಾಗೂ ತಾತ್ಕಾಲಿಕ ಕ್ರಮ. ಸರ್ಕಾರವು ಆರ್ಥಿಕ ನೆರವು ಪ್ರಕಟಿಸುವ ಮೂಲಕ ಆತ್ಮಸ್ಥೈರ್ಯ ಮೂಡಿಸುವ ಕೆಲಸ ಮಾಡಬೇಕು' ಎಂದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ತಾಹೀರ್ ಹುಸೇನ್, ಪ್ರಧಾನ ಕಾರ್ಯದರ್ಶಿ ಎಂ.ಎಂ.ಹಬೀಬುಲ್ಲಾ ಖಾನ್, ರಾಜ್ಯ ಕಾರ್ಯದರ್ಶಿ ಆದಿಲ್ ಪಟೇಲ್ ಇದ್ದರು.

'ಹೊರೆಯಾಗದ ಶಾಲಾ ಶುಲ್ಕ ನಿಗದಿ ಮಾಡಿ'

ಬೆಂಗಳೂರು: 'ಪೋಷಕರು ಹಾಗೂ ಖಾಸಗಿ ಶಾಲಾ ಆಡಳಿತ ಮಂಡಳಿಗಳಿಗೆ ಹೊರೆಯಾಗದಂತೆ ಶಾಲಾ ಶುಲ್ಕ ನಿಗದಿ ಮಾಡಬೇಕು' ಎಂದು ಶಾಸಕ ಜಿ.ರಘು ಆಚಾರ್ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ರಾಜ್ಯದಲ್ಲಿ ಕೊರೊನಾ ಸಂಕಷ್ಟ ಮುಂದುವರಿದಿದ್ದು, ಇದರ ನಡುವೆಯೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿ ಆರಂಭವಾಗಿದೆ. ಪರಿಸ್ಥಿತಿಯನ್ನು ಅವಲೋಕಿಸಿ, ಶುಲ್ಕ ನಿಗದಿಪಡಿಸಬೇಕು' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ಆರ್ಥಿಕವಾಗಿ ಕುಗ್ಗಿರುವ ಪೋಷಕರು ಹೆಚ್ಚು ಶುಲ್ಕ ಭರಿಸಲು ಸಾಧ್ಯವಿಲ್ಲ. ಈಗ ಆನ್‌ಲೈನ್ ತರಗತಿಗಳು ಆರಂಭಗೊಂಡಿರುವುದರಿಂದ ಶಾಲಾ ಆಡಳಿತ ಮಂಡಳಿಗಳಿಗೆ ಖರ್ಚು ತಗ್ಗಿದೆ, ಶಿಕ್ಷಕರ ಸಂಬಳ ಕಡಿತವೂ ಆಗಿದೆ' ಎಂದೂ ಹೇಳಿದ್ದಾರೆ.

ಭಾರತೀಯ ರೈಲ್ವೆ ಟಿಕೆಟ್ ಪರೀಕ್ಷಕರ ಸಂಘದ ಬೆಂಗಳೂರು ಶಾಖೆಯ ವತಿಯಿಂದ ಸ್ವಚ್ಛತಾ ಸಿಬ್ಬಂದಿ ಹಾಗೂ ಸಹಾಯಕರಿಗೆ ಪಡಿತರ ಕಿಟ್‌ಗಳನ್ನು ವಿತರಿಸಲಾಯಿತು. ಸಂಘದ ವಿಭಾಗೀಯ ಅಧ್ಯಕ್ಷ ಸಿ.ಎನ್.ಶ್ರೀನಿವಾಸ್, ಸ್ಟ್ಯಾನ್ಲಿ ರಾಜೇಶ್, ಅನಿಲ್ ಕುಮಾರ್, ಸುಬ್ರಮಣಿ, ರಘುವೀರ್, ನಾಗಭೂಷಣ್ ಇದ್ದಾರೆ

ಮಾರಾಟ ಉತ್ತೇಜನ ಕ್ರಮಗಳಿಗೆ ಪಾಲಿಕೆ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಲ್ಲರೆ ಮಾರಾಟ ಮಳಿಗೆಗಳ ಬಳಿ ಜನಸಂದಣಿ ಉಂಟಾಗುವುದನ್ನು ತಡೆಯಲು ಕ್ರಮಕೈಗೊಳ್ಳುವಂತೆ ಬಿಬಿಎಂಪಿಯು ಇಂತಹ ಮಳಿಗೆಗಳ ಮಾಲೀಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಚಿಲ್ಲರೆ ಮಾರಾಟ ಮಳಿಗೆಗಳು ಉತ್ಪನ್ನಗಳ ಮಾರಾಟ ಉತ್ತೇಜನಕ್ಕಾಗಿ ವಿಶೇಷ ಕೊಡುಗೆಗಳನ್ನು ನೀಡುವಂತಿಲ್ಲ. ಮಾರಾಟ ಮೇಳಗಳನ್ನು ಹಮ್ಮಿಕೊಳ್ಳುವಂತಿಲ್ಲ.

ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮಾರ್ಗಸೂಚಿ ಪ್ರಕಟಿಸಿದ್ದಾರೆ. ಅದರ ಪ್ರಮುಖ ಅಂಶಗಳು ಇಂತಿವೆ.

- ಮಳಿಗೆಗಳ ಬಳಿ ಜನಜಂಗುಳಿ ಸೇರಲು ಕಾರಣವಂತಹ 'ಕೊಡುಗೆ'ಗಳನ್ನು ನೀಡಬಾರದು.
- ನಿರ್ದಿಷ್ಟ ಕಾಲಮಿತಿಯೊಳಗೆ ಬಳಸಬಹುದಾದ ಟೋಕನ್‌ಗಳನ್ನು ನೀಡುವ ಮೂಲಕ ಮಳಿಗೆಯಲ್ಲಿ ಗ್ರಾಹಕರ ದಟ್ಟಣೆ ಉಂಟಾಗುವುದನ್ನು ತಡೆಯಬಹುದು. ನಿರ್ಬಂಧದ ಆದೇಶ ಜಾರಿಯಲ್ಲಿದ್ದರೂ ಜನರಿಗೆ ಅವಶ್ಯಕ ಸಾಮಗ್ರಿ ಸಿಗಬೇಕು ಎಂಬ ಕಾರಣಕ್ಕೆ ಮಳಿಗೆಗಳನ್ನು ತೆರೆಯಲು ಅವಕಾಶ ನೀಡಲಾಗಿದೆ.
- ಗ್ರಾಹಕರ ಬಳಕೆಗಾಗಿ ಸ್ಯಾನಿಟೈಸರ್‌ಗಳನ್ನು ಮಳಿಗೆಗಳಲ್ಲಿ ಒದಗಿಸಬೇಕು.
- ಮಳಿಗೆಯಲ್ಲಿ ಗ್ರಾಹಕರು ಕೈಯಿಂದ ಮುಟ್ಟುವಂತಹ ರೇಲಿಂಗ್, ಬಾಗಿಲ ಕೈಹಿಡಿ, ನೆಲ, ಬಿಲ್ಲಿಂಗ್ ಕೌಂಟರ್‌ಗಳ ಮೇಲ್ಮೈ ಮುಂತಾದ ಸ್ಥಳಗಳನ್ನು ಸೋಡಿಯಂ ಹೈಪೋಕ್ಲೋರೈಟ್‌ನಿಂದ ಅಥವಾ ಬ್ಲೀಚಿಂಗ್ ಪೌಡರ್‌ನಿಂದ ತಯಾರಿಸಿದ ದ್ರಾವಣದಿಂದ ಆಗಾಗ ಸ್ವಚ್ಛಗೊಳಿಸಬೇಕು.
- ಸಿಬ್ಬಂದಿಯೂ ವೈಯಕ್ತಿಕ ಸ್ವಚ್ಛತೆಗೆ ಗಮನ ಹರಿಸಬೇಕು. ಸಿಬ್ಬಂದಿಗಳೆಲ್ಲರಿಗೂ ಕೋವಿಡ್ ಲಸಿಕೆ ನೀಡಬೇಕು. ಸೋಂಕಿನ ಲಕ್ಷಣಗಳಿರುವ ಹಾಗೂ ಉಸಿರಾಟದ ಸಮಸ್ಯೆ ಹೊಂದಿರುವ ಸಿಬ್ಬಂದಿಗೆ ಅಸೌಖ್ಯದ ರಜೆ ಮಂಜೂರು ಮಾಡಿ ಚಿಕಿತ್ಸೆ ಪಡೆಯುವಂತೆ ಸೂಚಿಸಬೇಕು.
- ಗ್ರಾಹಕರು ಉತ್ಪನ್ನಗಳನ್ನು ಮುಟ್ಟುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ಉತ್ಪನ್ನ ತೆಗೆದುಕೊಡಲು ಸಿಬ್ಬಂದಿಯನ್ನು ನಿಯೋಜಿಸಬೇಕು.
- ಬಿಲ್ಲಿಂಗ್ ಕೌಂಟರ್‌ನಲ್ಲಿ ಗ್ರಾಹಕರ ದಟ್ಟಣೆ ಕಡಿಮೆಗೊಳಿಸಲು, ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಬೇಕು. ವಾರಾಂತ್ಯದಲ್ಲಿ ಹೆಚ್ಚುವರಿ ಕೌಂಟರ್‌ಗಳನ್ನು ವ್ಯವಸ್ಥೆ ಮಾಡಬೇಕು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

LOANS: WE Assist To Avail Govt Awaaz Yogana,Rozgar Yogana, Business & Industrial Loans Call: 080-43029162

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411275189

PERSONAL

Change of Name

14823873P, HAV/MT, Omprakash Gurjar, 1ATC, father name service record HARBIR SINGH instead of HARVEER SINGH, notary KV Mani, Bangalore.

14823873P, HAV/MT, Omprakash Gurjar, 1ATC, mother name service record KESULA instead of KESHULA DEVI, notary KV Mani, Bangalore.

CHANDRAVATI W/O. JC672922W, SUB/MT, Guju Pandaya Reddy, Vill: Reddytulu, Indrakhi Kanish Ganjam, Odisha, my name CHANDRAVATI to GUJU CHANDRAVATI REDDY notary KV Mani, Bangalore.

I,MANGALA RESIDING at- No.L.I.G.18, 3rd-Phase, Pragathi colony,Near, Bus-stand, Gulbarga-585105 have changed-my Name-to GEETHA Vide Affidavit dated.14-06-2021 Sworn before-Notary N.Sandhya,Bangalore.

REAL ESTATE SELLING

Industrial & Factory

Jigani

SALE 5.5 acres Industrial land with 2,75,000 sqft building. Ready to occupy in Jigani industrial area Contact 9900083763

OTHERS

For Sale

IMMEDIATE SALE Designer Leather Sofa Diwan Teak Dining king Boxcot Curtains...Call 9845414482, 7019263843

JOB OPPORTUNITIES

General

REQUIRED
Required following Staff for Ballari Airport Project
Project Manager (BE Civil) Minimum Exp. 15 years
Site Engineer BE Civil/DIP Exp. 7 years
Surveyor Can use Total Station Exp. 3 years
Last Date to Apply 20/06/2021 on the E-mail : vippl.ballari@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call 9880856233 • 9886213331
Email: Santhoshkumar@deccanherald.co.in

ಕಾಫಿನಾಡಿನ ಬಯಲುಸೀಮೆ ಪ್ರತಿಭೆ ಸಂಚಾರಿ ವಿಜಯ್

• ಬಿ.ಜೆ. ಧನ್ಯಪ್ರಸಾದ್

2020ರಲ್ಲಿ ನಡೆದ ಚಿಕ್ಕಮಗಳೂರು ಹಬ್ಬದಲ್ಲಿ ಕಾರ್ಯಕ್ರಮವೊಂದನ್ನು ಸಂಚಾರಿ ವಿಜಯ್ ಉದ್ಘಾಟಿಸಿದ ಕ್ಷಣ (ಸಂಗ್ರಹ ಚಿತ್ರ)

ಚಿಕ್ಕಮಗಳೂರು: ರಂಗಭೂಮಿ, ಸಿನಿಮಾ, ಕಲಾ ಕ್ಷೇತ್ರದಲ್ಲಿ ಛಾಪು ಮೂಡಿಸಿ ಜನಮನ ಗೆದ್ದಿರುವ ಸಂಚಾರಿ ವಿಜಯ್ (ಬಿ.ವಿಜಯಕುಮಾರ್) ಅವರು ಕಾಫಿನಾಡಿನ ಬಯಲು ಸೀಮೆಯ ಪ್ರತಿಭೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಬಾಲ್ಯದಿಂದಲೇ ಚೂಟಿಯಾಗಿದ್ದರು.

ವಿಜಯ್ ಅವರು ಕಡೂರು ತಾಲ್ಲೂಕಿನ ಪಂಚನಹಳ್ಳಿಯ ಬಸವರಾಜಯ್ಯ ಮತ್ತು ಗೌರಮ್ಮ ದಂಪತಿಯ ಪುತ್ರ. ವಿಜಯ್ ಅವರಿಗೆ ವಿರೂಪಾಕ್ಷ, ಸಿದ್ದೇಶ್ ಎಂಬ ಇಬ್ಬರು ಸಹೋದರರು ಇದ್ದಾರೆ.

ಗ್ರಾಮ ಲೆಕ್ಕಿಗರಾಗಿದ್ದ ಬಸವರಾಜಯ್ಯ ಅವರು ತಬಲ ವಾದನ, ಚಿತ್ರಕಲೆಯಲ್ಲಿ ನೈಪುಣ್ಯ ಇತ್ತು. ಶುಶ್ರೂಷಕಿಯಾಗಿದ್ದ ಗೌರಮ್ಮ ಅವರಿಗೆ ಗಾಯನ ಕಲೆ ಒಲಿದಿತ್ತು. ಅಪ್ಪ-ಅಮ್ಮನಿಂದ ಈ ಕಲೆಗಳನ್ನು ವಿಜಯ್ ಕರಗತ ಮಾಡಿಕೊಂಡಿದ್ದರು.

ವಿಜಯ್ ಅವರು ಪಂಚನಹಳ್ಳಿಯಲ್ಲಿ ಪ್ರಾಥಮಿಕ ಶಾಲೆ, ಆಣೆಗೆರೆ ಪ್ರೌಢಶಾಲೆ, ತಿಪಟೂರಿನಲ್ಲಿ ಪಿಯು ಹಾಗೂ ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ್ದಾರೆ.

'ಶಾಲಾ ದಿನಗಳಿಂದಲೂ ವಿಜಯ್ ಆಟೋಟ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಾವಗಾಲೂ ಮುಂದೆ ಇದ್ದರು. ಚಿತ್ರಕಲೆ, ಅಭಿನಯ, ಗಾಯನ, ಜಿಮ್ನಾಸ್ಟಿಕ್ಸ್ ಎಲ್ಲದರಲ್ಲೂ ಬಹುಮಾನ ಕಟ್ಟಿಟ್ಟ ಬುತ್ತಿಯಾಗಿರುತ್ತಿತ್ತು' ಎಂದು ವಿಜಯ್ ಅವರ ಬಾಲ್ಯ ಸ್ನೇಹಿತ ಪಂಚನಹಳ್ಳಿಯ ಪಿ.ಎಂ.ನಂದೀಶ್ ತಿಳಿಸಿದರು.

'ಸ್ವಾತಂತ್ರ್ಯ ದಿನಾಚರಣೆ, ಶಾಲಾ ವಾರ್ಷಿಕೋತ್ಸವ ಮೊದಲಾದವುಗಳಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆವು. ಗೌರಮ್ಮ ಅವರ ಗರಡಿಯಲ್ಲಿ ಗಾಯನ ಕಲಿತೆವು. ಭದ್ರಾವತಿ ಆಕಾಶವಾಣಿ ಕೇಂದ್ರದಲ್ಲಿ 'ಜೋಗದ ಸಿರಿ ಬೆಳಕಿನಲ್ಲಿ...' ಮೊದಲಾದ ಗೀತೆಗಳನ್ನು ಹಾಡಿದ್ದೆವು' ಎಂದು ಅವರು ನೆನಪಿಸಿಕೊಂಡರು.

'ಸಿನಿಮಾದಲ್ಲಿ ಅಭಿನಯಿಸಬೇಕು ಎಂಬ ಕನಸು ಚಿಕ್ಕಂದಿನಿಂದಲೂ ವಿಜಯ್‌ಗೆ ಇತ್ತು. 'ಸಂಚಾರಿ' ರಂಗ ತಂಡದ ಮೂಲಕ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಂಚಾರಿ ವಿಜಯ್ ಎಂದೇ ಖ್ಯಾತರಾದರು. ಸಿನಿಮಾ ಕ್ಷೇತ್ರದಲ್ಲಿ ಸಾಧನೆ ಮೆರೆದು ಕನಸನ್ನು ನನಸಾಗಿಸಿದರು' ಎಂದು ಹೇಳಿದರು.

ವಿಜಯ್ ಅವರಿಗೆ ಚಿಕ್ಕಂದಿನಿಂದಲೂ ಸಿನಿಮಾ ಹುಚ್ಚು ಬಹಳ ಇತ್ತು. ಪಂಚನಹಳ್ಳಿ ಪಕ್ಕದ ಅರಸೀಕೆರೆ ತಾಲ್ಲೂಕಿನ ಗಡಿ ಗ್ರಾಮ ಮೇಟಿಕುರ್ಕೆಯ ಟೆಂಟ್‌ಗೆ ಸಿನಿಮಾ ನೋಡಲು ಸೈಕಲ್‌ನಲ್ಲಿ ಹಲವು ಬಾರಿ ಹೋಗಿದ್ದೆವು ಎಂದು ಅವರ ಬಾಲ್ಯದ ಗೆಳೆಯರು ತಿಳಿಸಿದರು.

ವಿಜಯ್ ಅವರು ಸಿನಿಮಾ ಕ್ಷೇತ್ರದಲ್ಲಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದಾರೆ. ಪಂಚನಹಳ್ಳಿಗೂ ಗ್ರಾಮಕ್ಕೂ ಅವರಿಗೂ ಅವಿನಾಭಾವ ನಂಟು. ಗ್ರಾಮದ ಹಳೆಯ ಸ್ನೇಹಿತರ ಜತೆ ಸಂಪರ್ಕ ಇಟ್ಟುಕೊಂಡಿದ್ದಾರೆ.

ಪಂಚನಹಳ್ಳಿಯ ಸರ್ಕಾರಿ ಶಾಲೆಯಲ್ಲಿ 2017ನೇ ಇಸವಿಯಲ್ಲಿ ಜರುಗಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಗ್ರಾಮದಲ್ಲಿನ ಬಾಲ್ಯದ ನೆನಪುಗಳನ್ನು ಕಾರ್ಯಕ್ರಮದಲ್ಲಿ ಸ್ಮರಿಸಿದ್ದರು. ತಾನೊಬ್ಬ ಖ್ಯಾತ ನಟ ಎಂಬ ಹಮ್ಮುಬಿಮ್ಮು ಇಲ್ಲದೆ ಮುಕ್ತವಾಗಿ ಬೆರೆತಿದ್ದರು ಎಂದು ಗ್ರಾಮಸ್ಥರು ಹೇಳುತ್ತಾರೆ.

ಹೆಲ್ಮೆಟ್ ಧರಿಸದೇ ಅಪಾಯ ತಂದುಕೊಂಡ 'ಸಂಚಾರಿ'?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಸಂಚಾರಿ ವಿಜಯ್ ತಮ್ಮ ಸ್ನೇಹಿತನ ಬೈಕ್‌ನಲ್ಲಿ ಹೋಗುವಾಗ ಹೆಲ್ಮೆಟ್ ಧರಿಸದಿರುವುದೇ ಅಪಾಯಕ್ಕೆ ಕಾರಣ ಎಂಬುದು ಗೊತ್ತಾಗಿದೆ.

'ಬೈಕ್ ಚಲಾಯಿಸುತ್ತಿದ್ದ ಪಿ.ಎಸ್. ನವೀನ್ ಹಾಗೂ ಹಿಂಬದಿ ಕುಳಿತಿದ್ದ ನಟ ಸಂಚಾರಿ ವಿಜಯ್ ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಹೀಗಾಗಿಯೇ ಬೈಕ್‌ನಿಂದ ಬಿದ್ದ ವಿಜಯ್ ತಲೆಗೆ ತೀವ್ರ ಪೆಟ್ಟು ಬಿದ್ದು ಮಿದುಳು ನಿಷ್ಕ್ರಿಯವಾಗುವ ಹಂತಕ್ಕೆ ತಲುಪಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಜೆ.ಪಿ.ನಗರದ ನವೀನ್ ಜೊತೆಯಲ್ಲಿ ವಿಜಯ್ ಮನೆಯಿಂದ ಹೊರಬಂದಿದ್ದರು. ಸೌತ್ ಸಿಟಿ ಬಳಿಯ ರಸ್ತೆಯಲ್ಲಿ ಶನಿವಾರ (ಜೂ. 12) ರಾತ್ರಿ 11.45ರ ಸುಮಾರಿಗೆ ಬೈಕ್ ಉರುಳಿಬಿದ್ದಿತ್ತು. ರಸ್ತೆಯಲ್ಲೇ ಉಜ್ಜಿಕೊಂಡು ಹೋಗಿದ್ದ ಬೈಕ್, ಪಕ್ಕದ ವಿದ್ಯುತ್ ಕಂಬಕ್ಕೆ ಗುದ್ದಿ ಪುನಃ ಹಾರಿ ಬಿದ್ದಿದೆ. ತಲೆಗೆ ಪೆಟ್ಟಾಗಿ ವಿಜಯ್ ಸ್ಥಳದಲ್ಲೇ ಪ್ರಜ್ಞೆ ತಪ್ಪಿದ್ದರು. ನವೀನ್ ಬೆನ್ನು ಮೂಳೆಗೆ ಪೆಟ್ಟಾಗಿತ್ತು. ಅವರೇ ಸ್ನೇಹಿತರಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿಕೊಂಡಿದ್ದರು. ನಂತರ ಇಬ್ಬರನ್ನೂ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

'ಸಂಚಾರಿ ವಿಜಯ್ ಹೆಲ್ಮೆಟ್ ಧರಿಸಿದ್ದರೆ ತಲೆಗೆ ಹೆಚ್ಚು ಪೆಟ್ಟಾಗುತ್ತಿರಲಿಲ್ಲ. ಸವಾರ ನವೀನ್, ಸಂಚಾರ ನಿಯಮಗಳನ್ನು ಪಾಲಿಸಿ ನಿಗದಿತ ವೇಗದಲ್ಲಿ ಬೈಕ್ ಚಲಾಯಿಸಿದ್ದರೂ ಅವಘಡ ಸಂಭವಿಸುತ್ತಿರಲಿಲ್ಲ' ಎಂದೂ ಪೊಲೀಸರು ಹೇಳಿದರು.

ಐದು ತಿಂಗಳಿನಲ್ಲಿ 257 ಸಾವು

ನಗರದಲ್ಲಿ 2021ರ ಜನವರಿಯಿಂದ ಮೇವರೆಗೆ 1,188 ಅಪಘಾತಗಳು ಸಂಭವಿಸಿದ್ದು, 257 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಇದೇ ಅಪಘಾತದಲ್ಲಿ 1,046 ಮಂದಿ ಗಾಯಗೊಂಡಿದ್ದಾರೆ.

'ಸಂಚಾರ ನಿಯಮ ಪಾಲಿಸದೇ ಹಾಗೂ ಅತೀ ವೇಗದಲ್ಲಿ ವಾಹನ ಚಲಾಯಿಸುತ್ತಿರುವುದೇ ಅಪಘಾತಕ್ಕೆ ಕಾರಣವಾಗುತ್ತಿದೆ. ಬೈಕ್ ಸವಾರರೇ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ. ಬಹುಪಾಲು ಸವಾರರು, ಹೆಲ್ಮೆಟ್ ಧರಿಸದಿದ್ದರಿಂದ ತಲೆಗೆ ಪೆಟ್ಟು ಬಿದ್ದು ಅಸುನೀಗಿದ್ದಾರೆ' ಎಂದು ಸಂಚಾರ ವಿಭಾಗದ ಅಧಿಕಾರಿ ಹೇಳಿದರು.

ಅಪಘಾತ; ಸಂಚಾರಿ ವಿಜಯ್ ಸ್ನೇಹಿತನ ವಿರುದ್ಧ ಎಫ್‌ಐಆರ್

ಬೈಕ್ ಅಪಘಾತ ಪ್ರಕರಣದಲ್ಲಿ ಸಂಚಾರಿ ವಿಜಯ್ ಸ್ನೇಹಿತ ಪಿ.ಎಸ್. ನವೀನ್ ವಿರುದ್ಧ ಜಯನಗರ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಿಜಯ್ ಅವರ ಸಹೋದರ ಸಿದ್ದೇಶ್‌ಕುಮಾರ್ ದೂರು ನೀಡಿದ್ದಾರೆ. ಸಾರ್ವಜನಿಕ ರಸ್ತೆಯಲ್ಲಿ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ಆರೋಪದಡಿ ನವೀನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ನವೀನ್ ಅವರೇ ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ವಿಜಯ್ ಕುಳಿತಿದ್ದರು' ಎಂದೂ ತಿಳಿಸಿದರು.

ಅಪಘಾತವಾದ ಬೈಕ್‌ನ್ನು ಜಯನಗರ ಸಂಚಾರ ಠಾಣೆಯಲ್ಲಿ ನಿಲ್ಲಿಸಲಾಗಿದೆ

ನಟ ಸಂಚಾರಿ ವಿಜಯ್ ಹೆಲ್ಮೆಟ್ ಧರಿಸಿದ್ದರೆ ಜೀವಕ್ಕೆ ಕುತ್ತು ಬರುತ್ತಿರಲಿಲ್ಲ. ದಯವಿಟ್ಟು, ಬೈಕ್ ಸವಾರರು ಚಾಲನೆ ವೇಳೆ ಹೆಲ್ಮೆಟ್ ಧರಿಸಿ ಎಂದು ಕೇಳಿಕೊಳ್ಳುತ್ತೇನೆ

ಬಿ.ಆರ್. ರವಿಕಾಂತೇಗೌಡ, ಸಂಚಾರ ವಿಭಾಗದ ಜಂಟಿ ಕಮಿಷನರ್

ಶಾಲಾ ಶುಲ್ಕ: ಮುಖ್ಯಮಂತ್ರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ಪೋಷಕರ ನೆರವಿಗೆ ರಾಜ್ಯ ಸರ್ಕಾರ ನಿಲ್ಲಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ರಾಜ್ಯ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮನ್ವಯ ಸಮಿತಿ ಮನವಿ ಸಲ್ಲಿಸಿದೆ.

'2019-20ರಲ್ಲಿ ಸಂಗ್ರಹಿಸಿದ ಬೋಧನಾ ಶುಲ್ಕದ ಶೇ 70ರಷ್ಟನ್ನು ಮಾತ್ರ ಕಳೆದ ಸಾಲಿನಲ್ಲಿ ಸಂಗ್ರಹಿಸುವಂತೆ ಖಾಸಗಿ ಶಾಲೆಗಳಿಗೆ ಸೂಚಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಪ್ರಸಕ್ತ ಸಾಲಿನಲ್ಲೂ (2021-22) ಅದೇ ರೀತಿ ಶುಲ್ಕ ಪಡೆಯುವಂತೆ ಆದೇಶ ಹೊರಡಿಸಬೇಕು' ಎಂದು ಸಮಿತಿಯ ಪದಾಧಿಕಾರಿಗಳು ಮನವಿಯಲ್ಲಿ ಆಗ್ರಹಿಸಿದರು.

'ಶುಲ್ಕ ವಸೂಲಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಪಾಲಿಸದ ಶಾಲೆಗಳಲ್ಲಿ ಪೋಷಕ-ಶಿಕ್ಷಕ ಸಂಘಗಳನ್ನು ರಚಿಸಿ, ಅಂಥ ಶಾಲೆಗಳನ್ನು ನಡೆಸಲು ಆ ಸಂಘಗಳಿಗೆ ವಹಿಸಬೇಕು. ಆರ್‌ಟಿಇ ನಿಯಮದ ಪ್ರಕಾರ ಶಾಲೆಗಳಲ್ಲಿ ಕಡ್ಡಾಯವಾಗಿ ಪೋಷಕರ-ಶಿಕ್ಷಕರ ಮಂಡಳಿ ರಚಿಸಬೇಕು. ಆ ಮಂಡಳಿ ಸಭೆ ಸೇರಿ, ಪ್ರತಿ ವರ್ಷದ ಶೈಕ್ಷಣಿಕ ಶುಲ್ಕ ನಿಗದಿಪಡಿಸಬೇಕು. ಈ ಮಂಡಳಿ ನಿಗದಿಪಡಿಸುವ ಶುಲ್ಕವನ್ನು ಆಯಾ ಶಾಲೆಗಳು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ನಂತರವೇ ಮಕ್ಕಳ ದಾಖಲಾತಿ ಆರಂಭಿಸಬೇಕು. ಶುಲ್ಕ ಪಟ್ಟಿ ಪ್ರಕಟಿಸದ ಶಾಲೆಗಳ ಪೋಷಕರು ಯಾವುದೇ ಶುಲ್ಕವನ್ನು ಕಕಟ್ಟವುದಿಲ್ಲ ಮತ್ತು ಮಕ್ಕಳ ದಾಖಲಾತಿಗೂ ಅವಕಾಶ ನೀಡುವುದಿಲ್ಲ' ಎಂದು ಮನವಿಯಲ್ಲಿ ಸಮಿತಿ ತಿಳಿಸಿದೆ.

'ಬೇರೆ ರಾಜ್ಯಗಳಲ್ಲಿರುವಂತೆ ರಾಜ್ಯದಲ್ಲೂ ಖಾಸಗಿ ಶಾಲೆಗಳು ಸ್ವೀಕರಿಸಬಹುದಾದ ಶುಲ್ಕವನ್ನು ನಿಗದಿಪಡಿಸಲು ಶುಲ್ಕ ನಿಗದಿ ಸಮಿತಿ ರಚಿಸಬೇಕು. ಶುಲ್ಕ ಪಾವತಿಯೂ ಸೇರಿದಂತೆ ಶಾಲೆ ಮತ್ತು ಪೋಷಕರ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ ವಿದ್ಯಾರ್ಥಿಯ ಮೇಲೆ ಯಾವುದೇ ರೀತಿಯ ನಿಷೇಧ, ಒತ್ತಡ ಅಥವಾ ಕ್ರಮ ತೆಗೆದುಕೊಳ್ಳುವುದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗದ ನಿಬಂಧನೆಗಳ ಉಲ್ಲಂಘನೆಯಾಗುತ್ತದೆ. ಅಂಥ ಶಾಲೆಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ಸಮಿತಿ ಆಗ್ರಹಿಸಿದೆ.

ಉದ್ಯೋಗ ತರಬೇತಿ: 21ರಿಂದ ಪ್ರವೇಶ ಆರಂಭ

ಬೆಂಗಳೂರು: ಉನ್ನತಿ ಸೆಂಟರ್ (ಎಸ್‌ಜಿಬಿಎಸ್ ಟ್ರಸ್ಟ್) 18ರಿಂದ 30 ವರ್ಷದೊಳಗಿನವರಿಗೆ ಉದ್ಯೋಗ ತರಬೇತಿ ನೀಡಲಿದ್ದು, ಇದಕ್ಕಾಗಿ ಇದೇ 21ರಿಂದ ಪ್ರವೇಶ ಆರಂಭಿಸಲಿದೆ.

35 ದಿನಗಳ ತರಬೇತಿ ವೇಳೆ ಯುವಕರಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವ ಕೌಶಲ, ಜೀವನ ಕೌಶಲ, ಮೌಲ್ಯಗಳು, ಸೇಲ್ಸ್ ಆ್ಯಂಡ್ ಮಾರ್ಕೆಟಿಂಗ್, ಕಂಪ್ಯೂಟರ್ ಕಲಿಕೆ ಹಾಗೂ ಟ್ಯಾಲಿ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ಅರ್ಹರಿಗೆ ಉದ್ಯೋಗವನ್ನೂ ಕಲ್ಪಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ವೈಜಯಶ್ರೀ 9900146423 ಅವರನ್ನು ಸಂಪರ್ಕಿಸಬಹುದು.

55ನೇ ವಯಸ್ಸಿನಲ್ಲೂ ಪರರಿಗೆ ನೆರವಾಗುತ್ತಿರುವ ಕಾಮಾಚಿದುರ್ಗೆ

102 ಬಾರಿ ರಕ್ತದಾನ ಮಾಡಿದ ಎಂಜಿನಿಯರ್

ಪ್ರಜಾವಾಣಿ ವಾರ್ತೆ



ಆರ್‌ಕಾಮಾಚಿ ದುರ್ಗೆ

ಬೆಂಗಳೂರು: ರಕ್ತದಾನದ ಮಹತ್ವದ ಬಗ್ಗೆ ಸರ್ಕಾರ, ಸಂಘ ಸಂಸ್ಥೆಗಳು ಎಷ್ಟೇ ಜಾಗೃತಿ ಮೂಡಿಸಿದರೂ ಸ್ವಯಂಪ್ರೇರಿತವಾಗಿ ರಕ್ತ ನೀಡುವವವರ ಸಂಖ್ಯೆ ಅಷ್ಟಕ್ಕಷ್ಟೇ. ಆದರೆ, ನಗರದ ಸಿವಿಲ್ ಎಂಜಿನಿಯರ್ ಆರ್.ಕಾಮಾಚಿದುರ್ಗೆ ಒಟ್ಟು 102 ಬಾರಿ ರಕ್ತದಾನ ಮಾಡುವ ಮೂಲಕ ಮಾದರಿಯಾಗಿದ್ದಾರೆ. ರಕ್ತ ನೀಡಿ ಪರರ ಜೀವ ಉಳಿಸಲು ನೆರವಾಗುತ್ತಿರುವ ಅವರೀಗ 55ರ ಹರೆಯದ 'ಚಿರ ಯುವಕ'.

ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಅವರು ಎಚ್‌ಎಎಲ್‌ನ ಹೊಸ ತಿಪ್ಪಸಂದ್ರ ರಸ್ತೆ ಬಳಿಯ ಬಿಎಂಎಸ್‌ಟಿ ಸಂಸ್ಥೆಯಲ್ಲಿ ಸೋಮವಾರ ರಕ್ತದಾನ ಮಾಡಿದರು. ತಮಿಳುನಾಡಿನವರಾದ ಅವರು 35 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಪ್ರಸ್ತುತ ಜೀವನ್‌ಬಿಮಾ ನಗರ ನಿವಾಸಿ.

'18 ವರ್ಷ ತುಂಬುತ್ತಿದ್ದಂತೆಯೇ ರಕ್ತದಾನ ಆರಂಭಿಸಿದ್ದೇನೆ. ಎನ್‌ಸಿಸಿ ಏರ್ಪಡಿಸಿದ್ದ ರಕ್ತದಾನ ಶಿಬಿರದಲ್ಲಿ ಭಾಗವಹಿಸಿದ ನನಗೆ ಇದರ ಮಹತ್ವ ಮನದಟ್ಟಾಗಿತ್ತು. ಆ ಬಳಿಕ ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುತ್ತಾ ಬಂದಿದ್ದೇನೆ. ಅನಿವಾರ್ಯ ಕಾರಣಗಳಿಲ್ಲದೇ ಒಮ್ಮೆಯೂ ಈ ಪರಿಪಾಠ ತಪ್ಪಿಸಿಲ್ಲ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಸ್ಪತ್ರೆಯಲ್ಲಿ ಎಷ್ಟೋ ಮಂದಿ ಸಕಾಲದಲ್ಲಿ ರಕ್ತ ಸಿಗದೆ ಜೀವವನ್ನೇ ಕಳೆದುಕೊಳ್ಳುತ್ತಾರೆ. ರಕ್ತ ದಾನದಿಂದ ನಮಗೆ ಯಾವುದೇ ನಷ್ಟವೂ ಇಲ್ಲ. ದಾನ ಮಾಡಿದಷ್ಟು ಪ್ರಮಾಣದ ರಕ್ತ ಕೆಲವೇ ತಿಂಗಳುಗಳಲ್ಲಿ ದೇಹದಲ್ಲಿ ಮತ್ತೆ ಉತ್ಪತ್ತಿಯಾಗುತ್ತದೆ. ಇಷ್ಟೊಂದು ಬಾರಿ ರಕ್ತದಾನ ಮಾಡಿದರೂ ನನಗೆ ಯಾವುದೇ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿಲ್ಲ' ಎಂದರು.

'ಯುವಜನರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಬೇಕು. ವಯಸ್ಸಾದಂತೆ ಮಧುಮೇಹ, ಅಧಿಕ ರಕ್ತದೊತ್ತಡದಂತಹ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇನ್ನೊಬ್ಬರ ಜೀವ ಉಳಿಸಲು ನೆರವಾಗುವ ಸಂತೃಪ್ತ ಭಾವಕ್ಕೆ ಬೆಲೆ ಕಟ್ಟಲಾಗದು' ಎಂದರು.

'ಕಾಮಾಚಿ ದುರ್ಗೆ ಅವರ ಸಮಾಜ ಸೇವೆ ರಕ್ತದಾನಕ್ಕೆ ಸಿಮಿತವಾಗಿಲ್ಲ. ಅವರು ಜನಾಗ್ರಹ ಸಂಸ್ಥೆಯ ಮೂಲಕ ಸಮುದಾಯ ಪೊಲೀಸಿಂಗ್ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಜನಜಾಗೃತಿ ಕಾರ್ಯಕ್ರಮಗಳಲ್ಲೂ ಕೈಜೋಡಿಸುತ್ತಾರೆ. ಅವರ ಕುಟುಂಬದ ಸದಸ್ಯರೂ ಆಗಾಗ ರಕ್ತದಾನ ಮಾಡುತ್ತಾ ಬಂದಿದ್ದಾರೆ' ಎಂದು ಸಂಸ್ಥೆಯ ಮಹಾಲಕ್ಷ್ಮಿ ತಿಳಿಸಿದರು.

'ಕನ್ನಡ ಸಾಹಿತ್ಯಕ್ಕೆ ಹೊಸ ಕಣ್ಣು ನೀಡಿದ್ದ ಕವಿ ಸಿದ್ದಲಿಂಗಯ್ಯ'

ಬೆಂಗಳೂರು: 'ಸಿದ್ದಲಿಂಗಯ್ಯ ಅವರು ಕನ್ನಡ ಸಾಹಿತ್ಯಕ್ಕೆ ಹೊಸ ಕಣ್ಣು ನೀಡಿದ್ದ ಕವಿ. ಅವರ ಹಾಡುಗಳು ದಲಿತ ಸಂಘರ್ಷ ಸಮಿತಿಯ ಪ್ರಾರ್ಥನಾ ಗೀತೆಗಳಾಗಿದ್ದವು' ಎಂದು ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ ತಿಳಿಸಿದರು.

ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಆನ್‌ಲೈನ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಸಿದ್ದಲಿಂಗಯ್ಯ-ನುಡಿನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಿದ್ದಲಿಂಗಯ್ಯನವರ ಬರವಣಿಗೆಯಲ್ಲಿ ಹೊಸತನವಿತ್ತು. ಬಂಡಾಯ ಸಾಹಿತ್ಯದ ಹುಟ್ಟಿಗೆ ಕಾರಣರಾದವರಲ್ಲಿ ಅವರು ಕೂಡ ಒಬ್ಬರು. ರಾಮಕೃಷ್ಣ ಹೆಗಡೆ ಸಹ ಅಭಿಮಾನಿಯಾಗಿದ್ದರು' ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ, 'ದಲಿತ ಮತ್ತು ಬಂಡಾಯ ಸಾಹಿತ್ಯ ಚಳವಳಿಗಳಿಗೆ ಸಿದ್ದಲಿಂಗಯ್ಯನವರ ಕೊಡುಗೆ ಅಪಾರ. ಅವರ ಗೀತೆಗಳಲ್ಲಿ ಹೋರಾಟದ ಶಕ್ತಿ ಇತ್ತು. ಎಡಶಕ್ತಿಗಳ ಪ್ರತಿರೋಧ ಎದುರಿಸಿದ್ದ ಅವರು ಹಾಸ್ಯ ಪ್ರಜ್ಞೆ ಮೈಗೂಡಿಸಿಕೊಂಡಿದ್ದರು' ಎಂದರು.

ಸಾಹಿತಿ ಬಸವರಾಜ ಸಬರದ, 'ಸಿದ್ದಲಿಂಗಯ್ಯ ಜನಸಮುದಾಯವನ್ನು ಸೆಳೆದ ಮಾಂತ್ರಿಕ. ನಾಲ್ಕು ದಶಕಗಳಿಂದ ಬಂಡಾಯ ಸಂಘಟನೆಯೊಂದಿಗೆ ಒಡನಾಟ ಹೊಂದಿದ್ದ ಅವರು ಬಳಿಕ ದೂರ ಉಳಿದಿದ್ದರು. ಬಂಡಾಯಕ್ಕೆ ಹೊಸ ಆಯಾಮ ನೀಡಿದ್ದರು' ಎಂದರು.

ಕವಯತ್ರಿ ಕೆ.ಶರೀಫಾ, 'ಸಿದ್ದಲಿಂಗಯ್ಯ ಜೊತೆಗಿನ ಒಡನಾಟದ ನೆನಪುಗಳು ಎಂದಿಗೂ ಮಾಸುವುದಿಲ್ಲ. ಅವರ ಬೌದ್ಧಿಕ ಚಿಂತನೆಗಳಲ್ಲಿ ನವಿರಾದ ಹಾಸ್ಯ ಅಡಗಿರುತ್ತಿತ್ತು. ಸಿದ್ದಲಿಂಗಯ್ಯ ಅಂಬೇಡ್ಕರ್ ಹಾಗೂ ಮಾರ್ಕ್ಸ್‌ವಾದಿಯಾಗಿ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ತಳಮಟ್ಟದ ಜನರ ಒಡನಾಡಿಯಾಗಿ ಕನ್ನಡಕ್ಕೆ ಹೊಸ ಪರಿಭಾಷೆಯ ಕಾವ್ಯಗಳನ್ನು ನೀಡಿದರು' ಎಂದು ತಿಳಿಸಿದರು.

ಲೇಖಕ ರಾಜಪ್ಪ ದಳವಾಯಿ, 'ಜೀವಿತಾವಧಿಯಲ್ಲಿ ಮರೆಯಲಾರದ ಹಾಡುಗಳನ್ನು ಅವರು ನೀಡಿದ್ದರು. ದ.ಸಂ.ಸ ಹಾಗೂ ಬಂಡಾಯ ಸಾಹಿತ್ಯದ ಸಂಗಾತಿಯಾಗಿ, ವಿನಯದ ಪ್ರತಿರೂಪದಂತಿದ್ದರು' ಎಂದರು.

ಲೇಖಕ ಯಲ್ಲಪ್ಪ ಹಿಮ್ಮಡಿ, 'ಸಾಹಿತ್ಯವು ಸಮಾಜವನ್ನು ಬದಲಿಸುತ್ತದೆ ಎಂಬುದಕ್ಕೆ ಸಿದ್ದಲಿಂಗಯ್ಯ ಸಾಕ್ಷಿಯಂತಿದ್ದರು. ಅವರ ಹಾಡುಗಳಿಂದ ಪ್ರಭಾವಿತಗೊಂಡ ಅನೇಕರು ಅಂಬೇಡ್ಕರ್ ತತ್ವವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು' ಎಂದರು.

ಎನ್‌ಟಿಎಸ್‌ಇ ಪರೀಕ್ಷೆ: ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆಯು (ಡಿಎಸ್‌ಇಆರ್‌ಟಿ) ಜ.25ರಂದು ನಡೆಸಿದ ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆಯಲ್ಲಿ (ಎನ್‌ಟಿಎಸ್‌ಇ) ಆಯ್ಕೆಯಾಗಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ.

ಆಯ್ಕೆ ಪಟ್ಟಿಯನ್ನು ಡಿಎಸ್‌ಇಆರ್‌ಟಿ ವೆಬ್‌ಸೈಟ್ www.dsert.kar.nic.inನಲ್ಲಿ ಪ್ರಕಟಿಸಲಾಗಿದ್ದು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳಲ್ಲೂ ಲಭ್ಯ.

ರಾಜ್ಯಮಟ್ಟದಲ್ಲಿ ನಡೆದ ಪರೀಕ್ಷೆಗೆ 1,61,353 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಮುಂದಿನ ಹಂತದ ಪರೀಕ್ಷೆಗೆ 385 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ದ್ವಿತೀಯ ಹಂತದ ಪರೀಕ್ಷೆ ಪ್ರವೇಶ ಪತ್ರಗಳನ್ನು ಎನ್‌ಸಿಇಆರ್‌ಟಿ ವೆಬ್‌ಸೈಟ್ www.ncert.nic.inನಿಂದ ಪಡೆದುಕೊಳ್ಳಬಹುದು.

ಸಿ.ಡಿ ಬ್ಲ್ಯಾಕ್‌ಮೇಲ್: ಆರೋಪಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿರುದ್ಧ ಷಡ್ಯಂತ್ರ ರೂಪಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದ ಪ್ರಕರಣದ ಆರೋಪಿ ನರೇಶ್‌ಗೌಡನನ್ನು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಸೋಮವಾರ ವಿಚಾರಣೆ ನಡೆಸಿದರು.

ಸುದ್ದಿವಾಹಿನಿಯಲ್ಲಿ ವರದಿಗಾರನಾಗಿ ಕೆಲಸ ಮಾಡಿದ್ದ ನರೇಶ್‌ಗೌಡ ಹಾಗೂ ಶ್ರವಣ್ ಪ್ರಕರಣದಲ್ಲಿ ಭಾಗಿಯಾಗಿರುವ ಅನುಮಾನ ಎಸ್‌ಐಟಿಗೆ ಇತ್ತು. ಆದರೆ, ಇಬ್ಬರೂ ಆರೋಪಿಗಳು ತಲೆಮರೆಸಿಕೊಂಡಿದ್ದರು. ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದ ಅವರಿಬ್ಬರು, ಶನಿವಾರ ವಿಚಾರಣೆ ಹಾಜರಾಗಿದ್ದರು.

'ಇಬ್ಬರನ್ನೂ ಒಟ್ಟಿಗೆ ವಿಚಾರಣೆ ನಡೆಸಿ ಕೆಲ ಮಾಹಿತಿ ಪಡೆಯಲಾಗಿತ್ತು. ನರೇಶ್ ಗೌಡನನ್ನು ಮಾತ್ರ ಆಡುಗೋಡಿಯಲ್ಲಿರುವ ಕಚೇರಿಗೆ ಕರೆಸಿ ವಿಚಾರಣೆ ನಡೆಸಲಾಗಿದೆ. ಆತನಿಂದ ಘಟನೆ ಬಗ್ಗೆ ಹೇಳಿಕೆ ಪಡೆದು ಕಳುಹಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಇನ್ನೊಬ್ಬ ಆರೋಪಿ ಶ್ರವಣ್ ಸಹ ಮಂಗಳವಾರ ವಿಚಾರಣೆಗೆ ಬರಲಿದ್ದಾನೆ. ಆತನಿಂದಲೂ ಹೇಳಿಕೆ ಪಡೆದು ಪರಿಶೀಲನೆ ನಡೆಸಲಾಗುವುದು. ಬಳಿಕವೇ ಪ್ರಕರಣದಲ್ಲಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದೂ ತಿಳಿಸಿವೆ.

ಆಸ್ತಿ ಸಂಪಾದನೆ ಪ್ರಶ್ನೆ: 'ಸಿ.ಡಿ ಪ್ರಕರಣದ ಹೊರಬೀಳುತ್ತಿದ್ದ ತಲೆಮರೆಸಿಕೊಂಡಿದ್ದ ನರೇಶ್, ಆಸ್ತಿ ಬಗ್ಗೆ ಎಸ್‌ಐಟಿ ಮಾಹಿತಿ ಕಲೆಹಾಕಿತ್ತು. ಕೆಲವೆಡೆ ಜಮೀನು ಹಾಗೂ ಯಶವಂತಪುರದಲ್ಲಿ ಕಾರು ಖರೀದಿಸಲು ನರೇಶ್ ತಯಾರಿ ನಡೆಸಿದ್ದ ಸಂಗತಿ ಬಯಲಾಗಿತ್ತು. ಈ ಕುರಿತ ಪ್ರಶ್ನೆಗೆ ನರೇಶ್, ಅಂಥ ಯಾವುದೇ ಖರೀದಿ ವ್ಯವಹಾರ ಮಾಡಿಲ್ಲವೆಂದು ಉತ್ತರಿಸಿದ್ದಾನೆ' ಎಂದೂ ಮೂಲಗಳು ಹೇಳಿವೆ.

ಆರೋಪಿಗಳ ರಹಸ್ಯ ಕಾರ್ಯಾಚರಣೆ: 'ಕೆಲಸದ ಆಮಿಷವೊಡ್ಡಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿದ್ದ ಯುವತಿ, ತಮಗೆ ನ್ಯಾಯ ಕೊಡಿಸುವಂತೆ ಆರೋಪಿಗಳನ್ನು ಸಂಪರ್ಕಿಸಿದ್ದರು. ಸುದ್ದಿವಾಹಿನಿಗಳಲ್ಲಿ ಆರೋಪಿಗಳು ಕೆಲಸ ಮಾಡಿದ್ದರಿಂದ, ರಹಸ್ಯ ಕಾರ್ಯಾಚರಣೆ ನಡೆಸುವುದಾಗಿ ಹೇಳಿದ್ದರು. ಯುವತಿಗೆ ರಹಸ್ಯ ಕ್ಯಾಮೆರಾ ಕೊಟ್ಟು ದೃಶ್ಯಗಳನ್ನು ಸೆರೆ ಹಿಡಿದಿದ್ದರು ಎಂಬ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಆರೋಪಿಗಳು ಕೆಲ ಮಾಹಿತಿ ಹಂಚಿಕೊಂಡಿದ್ದಾರೆ' ಎಂದೂ ಎಸ್‌ಐಟಿ ಮೂಲಗಳು ತಿಳಿಸಿವೆ.

ಆರ್‌ಜಿಯುಎಚ್‌ಎಸ್ ರಜತ ಮಹೋತ್ಸವದ ಸಮಾರೋಪ

'ಕುಲಪತಿ ಹುದ್ದೆಗೆ ಕಳಂಕಿತರು ಬೇಡ'

ಪ್ರಜಾವಾಣಿ ವಾರ್ತೆ

ಈಜುಗಾರ್ತಿ ದಾಮಿನಿ ಕೆ.ಗೌಡ ಅವರಿಗೆ ಆರೋಗ್ಯ ಸಚಿವ ಕೆ.ಸುಧಾಕರ್ ಪ್ರತಿಭಾ ಪುರಸ್ಕಾರ ವಿತರಿಸಿದರು. ಕುಲಪತಿ ಎಸ್. ಸಚ್ಚಿದಾನಂದ, ಕುಲಸಚಿವ ರಾಮಕೃಷ್ಣಾರೆಡ್ಡಿ ಹಾಗೂ ಪೋಷಕರು ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶುದ್ಧ ಚಾರಿತ್ರ್ಯವಿರುವ ವ್ಯಕ್ತಿ ಮಾತ್ರ ಕುಲಪತಿಯಾಗಲು ಯೋಗ್ಯ. ಯಾವುದೇ ಅಪವಾದ ಹೊತ್ತುಕೊಂಡವರು ಕುಲಪತಿ ಸ್ಥಾನ ಅಲಂಕರಿಸಲು ಸಾಧ್ಯವಿಲ್ಲ. ನಾನು ಸಚಿವ ಸ್ಥಾನದಲ್ಲಿರುವವರೆಗೆ ಅದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಸಚಿವ ಕೆ.ಸುಧಾಕರ್ ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ (ಆರ್‌ಜಿಯುಎಚ್‌ಎಸ್) ಸೋಮವಾರ ನಡೆದ ರಜತ ಮಹೋತ್ಸವದ ಸಮಾರೋಪ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕುಲಪತಿ ಸ್ಥಾನಕ್ಕೆ ಉತ್ತಮ ಸಂಸ್ಕಾರ ಹಾಗೂ ಶೈಕ್ಷಣಿಕ ಅರ್ಹತೆ ಇರುವವರನ್ನು ಆಯ್ಕೆ ಮಾಡುವಲ್ಲಿ ಸರ್ಕಾರಕ್ಕೆ ಸ್ಪಷ್ಟತೆ ಇದೆ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿ ಸ್ಥಾನಕ್ಕೆ ಯೋಗ್ಯರನ್ನು ನೇಮಿಸುವ ಕುರಿತು ರಾಜ್ಯಪಾಲರ ಜೊತೆ ಚರ್ಚಿಸುತ್ತೇನೆ' ಎಂದರು.

ಆಯುರ್ವೇದದಲ್ಲಿ ಸಂಶೋಧನೆ ನಡೆಯಲಿ: 'ವೈದ್ಯಕೀಯ ಕಾಲೇಜುಗಳನ್ನು ಸಂಶೋಧನಾ ಸಂಸ್ಥೆಗಳೆಂದೂ ಕರೆಯುತ್ತೇವೆ. ಆದರೆ, ಎಷ್ಟು ಪ್ರಮಾಣದ ಸಂಶೋಧನೆಗಳು ನಡೆಯುತ್ತಿವೆ ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಆಯುರ್ವೇದದಲ್ಲೂ ಹೆಚ್ಚು ಸಂಶೋಧನೆಗಳು ನಡೆಯಬೇಕು' ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ದಾಮಿನಿ ಕೆ.ಗೌಡ, ಶಿವಾನಿ ಪೃಥ್ವಿ, ಹರ್ಷಿತಾ ಟಾಟರ್, ಪ್ರೀತಿ, ಅಂಜನಾಕ್ಷಿ, ತೇಜಸ್ವಿನಿ, ಬಿ.ಆರ್.ಅನುಷಾ, ಕಾರ್ತಿಕ್ ಅಡಿಗ ಸೇರಿದಂತೆ 10 ವಿದ್ಯಾರ್ಥಿಗಳಿಗೆ ನಗದು, ಪ್ರಮಾಣ ಪತ್ರ ಹಾಗೂ ಫಲಕ ಸಹಿತ ಪ್ರತಿಭಾ ಪುರಸ್ಕಾರ ನೀಡಲಾಯಿತು.

ವಿಶ್ವವಿದ್ಯಾಲಯ ಹೊರತಂದಿರುವ ಸಂಶೋಧನಾ ವರದಿಗಳು ಹಾಗೂ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಭಿವೃದ್ಧಿ ಪಡಿಸಿರುವ 'ವಿದ್ಯಾರ್ಥಿಮಿತ್ರ' ಮೊಬೈಲ್ ಆ್ಯಪ್‌ಗೆ ಚಾಲನೆ ನೀಡಲಾಯಿತು.

'ಗ್ರಾಮೀಣ ಸೇವೆಗೆ ನಿರಾಸಕ್ತಿ'

'ಎಲ್ಲ ವೈದ್ಯರು ಕನಿಷ್ಠ 2ರಿಂದ 5 ವರ್ಷ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಿದರೆ, ಬಡವರಿಗೆ ಉತ್ತಮ ಆರೋಗ್ಯ ಸಿಗಲಿದೆ' ಎಂದು ಸಚಿವ ಸುಧಾಕರ್ ತಿಳಿಸಿದರು.

'ದೇಶದಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ವೈದ್ಯರು ಲಭ್ಯವಿಲ್ಲ' ಎಂದೂ ಹೇಳಿದರು.

ಮಾರುಕಟ್ಟೆಗಳಲ್ಲಿ ಅಂತರ ಮರೆತು ವ್ಯವಹಾರ • ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ

ಲಾಕ್‌ಡೌನ್ ಸಡಿಲಿಕೆ: ಹೆಚ್ಚಿದ ಜನಸಂದಣಿ

ಪ್ರಜಾವಾಣಿ ವಾರ್ತೆ

ನಾಗಸಂದ್ರದ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಉದ್ಯೋಗಿಗಳು ಸೋಮವಾರ ಕೆಲಸಕ್ಕೆ ಹಾಜರಾದರು

ನಗರದ ಪುರಭವನ ಎದುರು ಸೋಮವಾರ ವಿಪರೀತ ವಾಹನ ದಟ್ಟಣೆ ಉಂಟಾಗಿತ್ತು ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಜಾರಿಗೊಳಿಸಲಾಗಿರುವ ಲಾಕ್‌ಡೌನ್ ಭಾಗಶಃ ಸಡಿಲಿಕೆ ಮಾಡಲಾಗಿದ್ದು, ನಗರದಲ್ಲಿ ಸೋಮವಾರ ಬಹುತೇಕ ಕಡೆ ಜನ ಸಂದಣಿ ಹೆಚ್ಚಾಗಿತ್ತು.

ನಗರದ ಮೆಜೆಸ್ಟಿಕ್, ಯಶವಂತಪುರ, ಪೀಣ್ಯ, ಚಾಮರಾಜಪೇಟೆ, ಸ್ಯಾಟ್‌ಲೈಟ್ ನಿಲ್ದಾಣ ಹಾಗೂ ಇತರೆ ಪ್ರದೇಶಗಳಲ್ಲಿ ಜನರು ಗುಂಪು ಸೇರಿ ಓಡಾಡಿದ್ದು ಕಂಡುಬಂತು.

ಲಾಕ್‌ಡೌನ್‌ನಿಂದಾಗಿ ನಗರ ತೊರೆದು ತಮ್ಮೂರಿಗೆ ಹೋಗಿದ್ದ ಸಾವಿರಾರು ಮಂದಿ ರೈಲು ಹಾಗೂ ಖಾಸಗಿ ವಾಹನಗಳ ಮೂಲಕ ಬೆಂಗಳೂರಿಗೆ ಸೋಮವಾರ ವಾಪಸು ಬಂದರು. ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಂತೂ ಜನ ಜಾತ್ರೆಯೇ ಇತ್ತು. ಗಂಟುಮೂಟೆ ಹೊತ್ತುಕೊಂಡು ಜನರು ನಿಲ್ದಾಣದಿಂದ ಹೊರಬಂದರು.

ನಿಲ್ದಾಣ ಎದುರು ಆಟೊ, ಟ್ಯಾಕ್ಸಿ ಹಾಗೂ ಖಾಸಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಆಟೊದಲ್ಲಿ ಇಬ್ಬರಿಗೆ ಮಾತ್ರ ಪ್ರಯಾಣಿಸಲು ಅವಕಾಶ ನೀಡಲಾಗಿತ್ತು. ಆದರೆ,ಅದಕ್ಕಿಂತಲೂಹೆಚ್ಚಿನಜನಆಟೊದಲ್ಲಿ ಸಂಚರಿಸಿದರು. ಕೆಲವರು ವಾಹನ ಸಿಗದೇ ನಡೆದುಕೊಂಡೇ ಸಾಗಿದರು.

'ಕೆಲಸ ಮಾಡಿದರೆ ಹೊಟ್ಟೆ ತುಂಬುತ್ತದೆ. ಕೆಲಸ ಇಲ್ಲದಿದ್ದರಿಂದ ಊರಿಗೆ ಹೋಗಿದ್ದೆವು. ಈಗ ಕೆಲಸ ಇರುವುದಾಗಿ ಮಾಲೀಕರು ಕರೆ ಮಾಡಿ ಹೇಳಿದರು. ಅದಕ್ಕಾಗಿ ಸ್ನೇಹಿತರೆಲ್ಲರೂ ವಾಪಸು ಬಂದಿದ್ದೇವೆ' ಎಂದು ಉತ್ತರ ಪ್ರದೇಶದ ಮನ್ವೀತ್ ಹೇಳಿದರು.

ಮಾರುಕಟ್ಟೆಯಲ್ಲೂ ಸಂದಣಿ: ನಗರದ ಮಾರುಕಟ್ಟೆಯಲ್ಲೂ ಜನಸಂದಣಿ ಇತ್ತು. ಅಂತರ ಮರೆತ ಜನ, ಅಗತ್ಯ ವಸ್ತುಗಳ ಖರೀದಿಗಾಗಿ ಮುಗಿಬಿದ್ದರು.

ದಿನಸಿ, ಹಣ್ಣು, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಮಾರಾಟಕ್ಕೆ ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಅವಕಾಶ ಕಲ್ಪಿಸಲಾಗಿದೆ. ಕೆ.ಆರ್. ಮಾರುಕಟ್ಟೆ, ಚಾಮರಾಜಪೇಟೆ, ಶಿವಾಜಿನಗರ, ಎಸ್‌ಪಿ ರಸ್ತೆ, ಮೆಜೆಸ್ಟಿಕ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ವ್ಯಾಪಾರ ವಹಿವಾಟು ಜೋರಾಗಿತ್ತು.

ಬಹುತೇಕ ರಸ್ತೆಗಳಲ್ಲಿ ಸಂಚಾರ ದಟ್ಟಣೆ

ಆಟೊ, ಟ್ಯಾಕ್ಸಿ, ಕಾರು, ದ್ವಿಚಕ್ರ ವಾಹನಗಳು ಹಾಗೂ ಗೂಡ್ಸ್ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗೆ ಇಳಿದಿದ್ದವು. ಇದರಿಂದಾಗಿ ಬಹುತೇಕ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಮೆಜೆಸ್ಟಿಕ್, ಪುರಭವನ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಕೆ.ಆರ್. ಮಾರುಕಟ್ಟೆ, ಮೈಸೂರು ರಸ್ತೆ, ತುಮಕೂರು ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಹನಗಳು ನಿಧಾನವಾಗಿ ಸಂಚರಿಸಿದವು.

ಕೈಗಾರಿಕೆಗಳೂ ಆರಂಭ: ಪೀಣ್ಯ, ಯಲಹಂಕ, ಕನಕಪುರ ರಸ್ತೆ ಹಾಗೂ ಹಲವೆಡೆಯ ಕೈಗಾರಿಕೆಗಳೂ ಆರಂಭವಾದವು. ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲೂ ಕೆಲಸ ಶುರುವಾಯಿತು.

ಕೈಗಾರಿಕೆಗಳಲ್ಲಿ ಶೇ 50ರಷ್ಟು ಮತ್ತು ಸಿದ್ಧ ಉಡುಪು ಕಾರ್ಖಾನೆಗಳ ಶೇ 30ರಷ್ಟು ಸಿಬ್ಬಂದಿಗೆ ಕೆಲಸಕ್ಕೆ ಹಾಜರಾಗಲು ಅವಕಾಶ ನೀಡಲಾಗಿದೆ. ಅದೇ ಸಂಖ್ಯೆಗೆ ತಕ್ಕಂತೆ ಉದ್ಯೋಗಿಗಳು ಕೆಲಸಕ್ಕೆ ಹಾಜರಾದರು.

ಉದ್ಯಾನದಲ್ಲೂ ಜನರ ಓಡಾಟ: ಲಾಕ್‌ಡೌನ್‌ನಿಂದಾಗಿ ಮನೆಯಲ್ಲೇ ವ್ಯಾಯಾಮ ಮಾಡಿಕೊಂಡಿದ್ದ ಜನ, ಸೋಮವಾರ ಉದ್ಯಾನಕ್ಕೆ ಲಗ್ಗೆ ಇಟ್ಟರು.

ಬೆಳಿಗ್ಗೆ 5ರಿಂದ 10 ಗಂಟೆಯವರೆಗೆ ವಾಯುವಿಹಾರಕ್ಕೆ ಅವಕಾಶವಿದೆ. ಇದೇ ಅವಧಿಯಲ್ಲೇ ನಿವಾಸಿಗಳು, ತಮ್ಮ ಮನೆ ಸಮೀಪದ ಉದ್ಯಾನಕ್ಕೆ ಬಂದು ವಾಯುವಿಹಾರ ಮಾಡಿದರು.

ಲಾಲ್‌ಬಾಗ್: ವಾಯುವಿಹಾರಕ್ಕೆ ಬಂದ 4 ಸಾವಿರ ಜನ

ಲಾಕ್‌ಡೌನ್ ಸಡಿಲಿಕೆಯಾಗಿ ಉದ್ಯಾನಗಳಿಗೆ ಪ್ರವೇಶ ಕಲ್ಪಿಸಿರುವುದರಿಂದ ಲಾಲ್‌ಬಾಗ್ ಉದ್ಯಾನಕ್ಕೆ ಸೋಮವಾರ ನಾಲ್ಕು ಸಾವಿರ ಮಂದಿ ವಾಯುವಿಹಾರಕ್ಕೆ ಬಂದಿದ್ದರು. ಕಬ್ಬನ್ ಉದ್ಯಾನದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ವಾಯುವಿಹಾರ ನಡೆಸಿದರು.

'ಸೋಮವಾರ ಮುಂಜಾನೆ 4.45ರಿಂದಲೇ ಲಾಲ್‌ಬಾಗ್‌ನ ಪ್ರವೇಶ ದ್ವಾರಗಳಲ್ಲಿ ವಾಯುವಿಹಾರಿಗಳು ಸಾಲುಗಟ್ಟಿ ನಿಂತಿದ್ದರು. ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದು, ಬೆಳಿಗ್ಗೆ 10 ಗಂಟೆಯವರೆಗೆ ವಾಯುವಿಹಾರ ನಡೆಸಿದರು' ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ ಜಿ.ಕುಸುಮಾ ತಿಳಿಸಿದರು.

ಸುದ್ದಿ 2 ನಿಮಿಷ

ಶಿಕ್ಷಕರ ಹಾಜರಿ: ಮತ್ತೆ ಸುತ್ತೋಲೆ ಪರಿಷ್ಕರಣೆ!

ಬೆಂಗಳೂರು: 'ಇದೇ 14ರಿಂದ ಲಾಕ್‌ಡೌನ್ ತೆರವುಗೊಂಡಿರುವ ಜಿಲ್ಲೆಗಳಲ್ಲಿ ಪ್ರಸ್ತುತ ಇರುವ ಶಿಕ್ಷಕರು ಮಾತ್ರ ಮಂಗಳವಾರದಿಂದ (ಜೂನ್ 15) ಶಾಲೆಗಳಿಗೆ ತೆರಳಿ ಮಕ್ಕಳ ಕಲಿಕಾ ಪೂರ್ವ ತಯಾರಿಯಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಸೋಮವಾರ ಸಂಜೆ ಎರಡನೇ ಬಾರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಪರಿಷ್ಕೃತ ಸುತ್ತೋಲೆ ಹೊರಡಿಸಿದೆ.

ಲಾಕ್‌ಡೌನ್ ತೆರವುಗೊಂಡಿರುವ 20 ಜಿಲ್ಲೆಗಳ ಶಾಲೆಗಳ ಶಿಕ್ಷಕರು ಮಂಗಳವಾರದಿಂದ ಶಾಲೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸಬೇಕು. ಲಾಕ್‌ಡೌನ್ ತೆರವುಗೊಳ್ಳದ 11 ಜಿಲ್ಲೆಗಳ ಶಾಲೆಗಳ ಶಿಕ್ಷಕರು, ಕಠಿಣ ನಿರ್ಬಂಧ ಭಾಗಶಃ ಸಡಿಲಗೊಂಡ ತಕ್ಷಣ ಶಾಲೆಗಳಿಗೆ ತೆರಳಬೇಕು. ಅಲ್ಲಿಯವರೆಗೆ ಮನೆಯಿಂದಲೇ ಕರ್ತವ್ಯ ನಿರ್ವಹಿಸಬೇಕು' ಎಂದು ಶಿಕ್ಷಣ ಇಲಾಖೆಯ ಆಯುಕ್ತರು ಸೋಮವಾರ ಮಧ್ಯಾಹ್ನ ಸುತ್ತೋಲೆ ಹೊರಡಿಸಿದ್ದರು

ಶಿಕ್ಷಣ ಸಚಿವರ ಸೂಚನೆಯಂತೆ ಮತ್ತೆ ಸುತ್ತೋಲೆಯನ್ನು ಪರಿಷ್ಕರಿಸಲಾಗಿದೆ. ಬೇರೆ ಜಿಲ್ಲೆಗಳಲ್ಲಿ ಪ್ರಸ್ತುತ ಇರುವವರಿಗೆ ಕಾರ್ಯನಿರ್ವಹಿಸುತ್ತಿರುವ ಜಿಲ್ಲೆಗಳಿಗೆ ತೆರಳಿ ಶಾಲೆಗಳಿಗೆ ಹಾಜರಾಗಲು ಕಾಲಾವಕಾಶ ನೀಡುವಂತೆ ಸೂಚಿಸಿದ್ದಾರೆ. ಪ್ರಸ್ತುತ ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಶಿಕ್ಷಕರು, ಲಾಕ್‌ಡೌನ್ ತೆರವುಗೊಂಡ ಜಿಲ್ಲೆಯಲ್ಲಿರುವ ತಮ್ಮ ಶಾಲೆಗಳಲ್ಲಿ ಹಾಜರಾಗಲುಇದೇ 21ರವರೆಗೆ ಕಾಲಾವಕಾಶ ನೀಡಲಾಗಿದೆ.

ಕಣ್ಣು, ಕಿವಿ ಇಲ್ಲದ ಸರ್ಕಾರ: ರಾಮಲಿಂಗಾರೆಡ್ಡಿ ವಾಗ್ದಾಳಿ

ಯಲಹಂಕ: 'ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇದೊಂದು ಕಣ್ಣು, ಕಿವಿ ಇಲ್ಲದ ಸರ್ಕಾರ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಟೀಕಿಸಿದರು.

ಯಲಹಂಕ ಕ್ಷೇತ್ರದ ಕಾಂಗ್ರೆಸ್ ಘಟಕದ ವತಿಯಿಂದ ನಿಸರ್ಗ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬಡವರಿಗೆ ದಿನಸಿ ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಕೋಟಿಗಟ್ಟಲೆ ಪರಿಹಾರ ಘೋಷಿಸಿ, ಮೂರು ವಾರ ಕಳೆದಿದೆ. ಈವರೆಗೆ ಯಾರಿಗೂ ಹಣ ನೀಡಿಲ್ಲ. ಕೇವಲ ಘೋಷಣೆಗಳಿಗಷ್ಟೇ ಈ ಸರ್ಕಾರ ಸೀಮಿತ. ಯಾವುದೂ ಕಾರ್ಯರೂಪಕ್ಕೆ ಬರುತ್ತಿಲ್ಲ' ಎಂದು ಆರೋಪಿಸಿದರು.

ಶಾಸಕ ಕೃಷ್ಣಬೈರೇಗೌಡ, 'ಬಿಜೆಪಿ ಸರ್ಕಾರ ಜನರಿಗೆ ಪರಿಹಾರ ನೀಡುವುದಾಗಿ ಘೋಷಣೆಗಳನ್ನು ಮಾಡಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದೆಯೇ ಹೊರತು, ಬಡಜನರ ಬಗ್ಗೆ ಕಾಳಜಿಯೇ ಇಲ್ಲ. ದುಡಿಮೆ ಇಲ್ಲದ ಸಮಯದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಸಿ ಸಂಕಷ್ಟಕ್ಕೆ ಸಿಲುಕಿಸಿದೆ' ಎಂದರು.

ಬಲವಂತದಿಂದ ಹೊರಹಾಕುವಂತಿಲ್ಲ: ಸೂಚನೆ

ಊರಿಗೆ ಮರಳಿ: ಪಿ.ಜಿ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಬಿಬಿಎಂಪಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿದ್ಯಾರ್ಥಿನಿಲಯಗಳಲ್ಲಿ ನೆಲೆಸಿರುವ ಹಾಗೂ ಪೇಯಿಂಗ್ ಗೆಸ್ಟ್‌ಗಳಾಗಿ ಉಳಿದುಕೊಂಡಿರುವ ವಿದ್ಯಾರ್ಥಿಗಳು ಸ್ವಂತ ಊರಿಗೆ ಮರಳುವಂತೆ ಬಿಬಿಎಂಪಿ ಸಲಹೆ ನೀಡಿದೆ.

'ಶಾಲಾ ಕಾಲೇಜುಗಳಲ್ಲಿ ತರಗತಿಗಳು ನಡೆಯುತ್ತಿಲ್ಲವಾದರೆ, ಇಲ್ಲಿನ ಹಾಸ್ಟೆಲ್‌ಗಳಲ್ಲಿ ಹಾಗೂ ಪಿ.ಜಿ. ಹೋಂಗಳಲ್ಲಿ ಉಳಿದುಕೊಂಡಿರುವ ವಿದ್ಯಾರ್ಥಿಗಳು ಊರಿಗೆ ಮರಳಬೇಕು. ಒಂದು ವೇಳೆ ಅನಿವಾರ್ಯ ಕಾರಣಗಳಿಂದ ನಗರವನ್ನು ತೊರೆಯುವುದು ಸಾಧ್ಯವಾಗದೇ ಇದ್ದರೆ, ವೈಯಕ್ತಿಕ ಸ್ವಚ್ಛತೆ ಕಾಪಾಡುವ ಬಗ್ಗೆ ರಾಜ್ಯ ಸರ್ಕಾರ ಹೊರಡಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು' ಎಂದು ಬಿಬಿಎಂಪಿ ತಿಳಿಸಿದೆ.

ಹಾಸ್ಟೆಲ್ ಹಾಗೂ ಪಿ.ಜಿ.ಹೋಂಗಳಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಣದ ಸಲುವಾಗಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಸೋಮವಾರ ಮಾರ್ಗಸೂಚಿ ಹೊರಡಿಸಿದ್ದಾರೆ.

'ಯಾವುದೇ ಕಾರಣಕ್ಕೂ ಹಾಸ್ಟೆಲ್ ಅಥವಾ ಪಿ.ಜಿ. ಹೋಂನಲ್ಲಿ ಉಳಿದುಕೊಂಡಿರುವವರನ್ನು ಮುನ್ಸೂಚನೆ ನೀಡದೇ ಮಾಲೀಕರು ಬಲವಂತದಿಂದ ಹೊರಹಾಕುವಂತಿಲ್ಲ. ಬೇರೆ ಕಡೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಳ್ಳುವವರೆಗೂ ಅವರಿಗೆ ಕಾಲಾವಕಾಶ ನೀಡಬೇಕು' ಎಂದು ಮಾರ್ಗಸೂಚಿಯಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ.

'ಒಂದೇ ಕೋಣೆಯಲ್ಲಿ, ಅದರ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವ್ಯಕ್ತಿಗಳು ಉಳಿದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವಂತಿಲ್ಲ. 110 ಚದರ ಅಡಿಯಷ್ಟು ವಿಸ್ತೀರ್ಣದ ಕೋಣೆಯಲ್ಲಿ ಇಬ್ಬರಿಗಿಂತ ಹೆಚ್ಚು ಮಂದಿ ಉಳಿದುಕೊಳ್ಳುವಂತಿಲ್ಲ' ಎಂದು ತಿಳಿಸಿದ್ದಾರೆ.

'ಪಿ.ಜಿ. ಹೋಂ ಹಾಗೂ ಹಾಸ್ಟೆಲ್‌ಗಳ ಸ್ವಚ್ಛತೆ ಕಾಪಾಡುವುದು ಅದರ ಮಾಲೀಕರ ಮತ್ತು ವ್ಯವಸ್ಥಾಪಕರ ಹೊಣೆ. ಇವುಗಳಲ್ಲಿ ಕೊರೊನಾ ಸೋಂಕು ಹರಡಿದ್ದು ಪತ್ತೆಯಾದರೆ ಮಾಲೀಕರನ್ನು ಹಾಗೂ ವ್ಯವಸ್ಥಾಪಕರನ್ನೇ ಹೊಣೆಯಾಗಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

120ಕ್ಕೆ ಇಳಿದ ಸಾವಿನ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮೃತರ ಸಂಖ್ಯೆ ಇಳಿಕೆಯತ್ತ ಸಾಗಿದೆ. 24 ಗಂಟೆಗಳಲ್ಲಿ 120 ಮಂದಿ ಅಸುನೀಗಿದ್ದಾರೆ. ಇದು ಹಿಂದಿನ ಎರಡು ತಿಂಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣ. ಇದರೊಂದಿಗೆ ಮರಣ ಪ್ರಮಾಣ ದರ ಶೇ 1.75ಕ್ಕೆ ತಗ್ಗಿದೆ.

ಸೋಂಕಿತರ ಸಂಖ್ಯೆಯೂ ಮತ್ತಷ್ಟು ಇಳಿದಿದೆ. ಒಂದು ದಿನದಲ್ಲಿ 6,835 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ. ಕಳೆದ ಎರಡು ತಿಂಗಳಲ್ಲಿ ವರದಿಯಾದ ಅತಿ ಕಡಿಮೆ ಪ್ರಕರಣಗಳು ಇವಾಗಿವೆ. ರಾಜ್ಯಕ್ಕೆ ಕೋವಿಡ್ ಕಾಲಿಟ್ಟ ದಿನದಿಂದ ಈವರೆಗೆ ಒಟ್ಟು 27.71 ಲಕ್ಷ ಜನ ಸೋಂಕಿಗೊಳಗಾಗಿದ್ದಾರೆ. ಸೋಮವಾರ 15,409 ಜನರಿಗೆ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಚೇತರಿಸಿಕೊಂಡವರ ಒಟ್ಟು ಸಂಖ್ಯೆ 25.66 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.72 ಲಕ್ಷಕ್ಕೆ ಇಳಿದಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಒಂದು ದಿನದಲ್ಲಿ 1.49 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಕೋವಿಡ್ ದೃಢ ಪ್ರಮಾಣ ಶೇ 4.56ಕ್ಕೆ ಕುಸಿದಿದೆ.

ಕೋವಿಡ್ ಪೀಡಿತರ ಪೈಕಿ ಮೈಸೂರಿನಲ್ಲಿ (25) ಅಧಿಕ ಮಂದಿ ಮರಣ ಹೊಂದಿದ್ದಾರೆ. ಬೆಂಗಳೂರಿನಲ್ಲಿ 12 ಜನ ಮೃತರಾಗಿದ್ದಾರೆ. ದಾವಣಗೆರೆ ಹಾಗೂ ಧಾರವಾಡದಲ್ಲಿ ತಲಾ 10 ಮಂದಿ ಅಸುನೀಗಿದ್ದಾರೆ. ರಾಜ್ಯದಲ್ಲಿ ಈವರೆಗಿನ ಮೃತರ ಒಟ್ಟು ಸಂಖ್ಯೆ 33,033ಕ್ಕೆ ಹೆಚ್ಚಿದೆ.

ಬೆಂಗಳೂರಿನಲ್ಲಿ ಹೊಸದಾಗಿ 1,470 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ದಕ್ಷಿಣ ಕನ್ನಡ (648), ಹಾಸನ (507) ಹಾಗೂ ಮೈಸೂರಿನಲ್ಲಿ (670) ಅಧಿಕ ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಸೋಂಕು ಪಸರಿಸುವಿಕೆ ತಗ್ಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

11,98,158 ▲ ಒಟ್ಟು ಸೋಂಕಿತರು

85,044 ▲	10,97,794 ▲	15,319 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,470 ▲
ಗುಣಮುಖ	2,409 ▼
ಸಾವು	12 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಬ್ರಿಟನ್: ಜುಲೈ 19ಕ್ಕೆ ಲಾಕ್‌ಡೌನ್ ಅಂತ್ಯ

ಲಂಡನ್: ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣಕ್ಕಾಗಿ ಬ್ರಿಟನ್‌ನಲ್ಲಿ ವಿಧಿಸಲಾಗಿರುವ ಲಾಕ್‌ಡೌನ್ ನಿರ್ಬಂಧಗಳನ್ನು ನಾಲ್ಕು ವಾರಗಳು ತಡವಾಗಿ ಅಂದರೆ ಜುಲೈ 19ಕ್ಕೆ ತೆರವುಗೊಳಿಸಲಾಗುವುದು ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಸೋಮವಾರ ಪ್ರಕಟಿಸಿದ್ದಾರೆ.

ಈ ಹಿಂದೆ ಜೂನ್ 21ಕ್ಕೆ ಲಾಕ್‌ಡೌನ್ ನಿರ್ಬಂಧ ತೆರವುಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಸೋಂಕು ಮರುಕಳಿಸುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಹಾಗಾಗಿ, ಜುಲೈ 19ರ ತನಕ ಲಾಕ್‌ಡೌನ್ ನಿರ್ಬಂಧ ಮುಂದುವರಿಸಲಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.68 ಕೋಟಿ ▲	2.95 ಕೋಟಿ
ಸಕ್ರಿಯ ಪ್ರಕರಣ	1.20 ಕೋಟಿ	9.09ಲಕ್ಷ ▼
ಗುಣಮುಖ	16.10 ಕೋಟಿ ▲	2.82 ಕೋಟಿ ▲
ಸಾವು	38.22ಲಕ್ಷ ▲	3.77 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.00ಲಕ್ಷ ▼	58,814 ▼
ಗುಣಮುಖ	3.74 ಲಕ್ಷ ▼	1,14,668 ▼
ಸಾವು	6,803 ▼	2,708 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಕೊಲಂಬಿಯಾ	ರಷ್ಯಾ
36,998 ▼	28,519 ▼	14,723

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಅರ್ಜೆಂಟಿನಾ
53.05 ▼	11.31 ▼	3.17 ▼

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.12 ಲಕ್ಷ
ತಮಿಳುನಾಡು	29,801 ▲
ದೆಹಲಿ	24,839 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	59.17 ▲
ಕೇರಳ	27.35
ತಮಿಳುನಾಡು	23.66 ▲

ಪ್ರಜಾವಾಣಿ ಗ್ರಾಫಿಕ್ಸ್

'ಜನಾಗ್ರಹ ನಡಿಗೆ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಚಿಕಿತ್ಸೆ ಉಚಿತಗೊಳಿಸುವುದು, ವಿಶೇಷ ಪ್ಯಾಕೇಜ್ ಘೋಷಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಜನಾಗ್ರಹ ಆಂದೋಲನವು ಜೂ.15ರಂದು ಬೆಳಿಗ್ಗೆ 11 ಗಂಟೆಗೆ ಮೌರ್ಯ ವೃತ್ತದಿಂದ ಮುಖ್ಯಮಂತ್ರಿ ಮನೆಗೆ 'ಜನಾಗ್ರಹ ನಡಿಗೆ' ಹಮ್ಮಿಕೊಂಡಿದೆ.

'ಸೆಪ್ಟೆಂಬರ್ ವೇಳೆಗೆ ಎಲ್ಲರಿಗೂ ಉಚಿತ ಲಸಿಕೆ ಸಿಗಬೇಕು. ಬಿಪಿಎಲ್ ಕುಟುಂಬಗಳಿಗೆ ಸಮಗ್ರ ಪಡಿತರ ಹಾಗೂ ತಲಾ ₹10 ಸಾವಿರ ನೆರವು ನೀಡಬೇಕು. ದುಡಿಯುವವರನ್ನು ಕಳೆದುಕೊಂಡು ಅನಾಥಗೊಂಡ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಬೇಕು ಹಾಗೂ ರೈತರಿಗೆ ಬಿತ್ತನೆ ಬೀಜ, ಗೊಬ್ಬರಕ್ಕೆ ವಿಶೇಷ ಸಬ್ಸಿಡಿ ಘೋಷಿಸಬೇಕು' ಎಂದು ಸಂಘಟನೆ ಆಗ್ರಹಿಸಿದೆ.

ನೊಂದವರ ಜತೆಗಿರುವೆ: ಆರ್. ಅಶೋಕ

ಅನಾಥರಾದ ಮಕ್ಕಳ ಶಿಕ್ಷಣದ ಹೊಣೆ; ₹1 ಲಕ್ಷ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಹಲವರಿಗೆ ಚೇತರಿಸಿಕೊಳ್ಳಲಾಗದಷ್ಟು ಆಘಾತ ನೀಡಿದೆ. ಕ್ಷೇತ್ರದ ಯಾರೂ ಅನಾಥರಲ್ಲ, ಎಲ್ಲ ಕುಟುಂಬಗಳ ಜೊತೆ ಇರುತ್ತೇನೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ 1,600ಕ್ಕೂ ಹೆಚ್ಚು ಕುಟುಂಬಗಳಿಗೆ ಪಡಿತರ ಕಿಟ್ ವಿತರಿಸಿ ಮಾತನಾಡಿದ ಅವರು, 'ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವುದಾಗಿ ಪ್ರಧಾನಿ ಮೋದಿ ಘೋಷಣೆ ಮಾಡಿದ್ದಾರೆ. ಕೋವಿಡ್ ವಿರುದ್ಧ ಗೆಲುವು ಸಾಧಿಸಲು ಎಲ್ಲರೂ ಲಸಿಕೆ ಪಡೆಯಲೇಬೇಕು. ವಿರೋಧ ಪಕ್ಷಗಳ ಅಪಪ್ರಚಾರದಿಂದ ಲಸಿಕಾ ಕಾರ್ಯಕ್ರಮಕ್ಕೆ ಹಿನ್ನಡೆಯಾಯಿತು' ಎಂದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ₹1 ಲಕ್ಷ ಮೊತ್ತದ ಚೆಕ್ ಅನ್ನು ಆರ್. ಅಶೋಕ ನೀಡಿದರು. ಸಚಿವರಾದ ಭೈರತಿ ಬಸವರಾಜ್, ಬಸವರಾಜ ಬೊಮ್ಮಾಯಿ, ಲಕ್ಷ್ಮಣ ಸವದಿ, ಕೆ. ಸುಧಾಕರ ಇದ್ದರು

'ಕೋವಿಡ್‌ನಿಂದ ನೊಂದವರ ಜೊತೆ ನಿಲ್ಲಲು ನಿರ್ಧರಿಸಿದ್ದೇನೆ. ಪದ್ಮನಾಭನಗರ ಕ್ಷೇತ್ರದಲ್ಲಿ ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳ ವಿದ್ಯಾಭ್ಯಾಸದ ಹೊಣೆಯನ್ನು ನಾನೇ ಹೊರುತ್ತೇನೆ. ದುಡಿಯುವ ವ್ಯಕ್ತಿಗಳನ್ನ ಕಳೆದುಕೊಂಡ ಮೂರು ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ ₹1 ಲಕ್ಷ ನೆರವು ನೀಡುತ್ತಿದ್ದೇನೆ' ಎಂದು ಹೇಳಿದರು.

ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, 'ನೊಂದವರ ಮನದ ಕೂಗು ಕಾಳಜಿಯುತ ಹೃದಯ ಉಳ್ಳವರಿಗೆ ಮಾತ್ರ ಕೇಳಿಸುತ್ತದೆ. ಅಂಥವರು ಮಾತ್ರ ಈ ರೀತಿಯ ಕಾರ್ಯ ಮಾಡಲು ಸಾಧ್ಯ' ಎಂದರು.

ಆರೋಗ್ಯ ಸಚಿವ ಕೆ. ಸುಧಾಕರ ಮಾತನಾಡಿ, 'ಸೋಂಕಿನಿಂದ ಮೃತಪಟ್ಟ ನೂರಾರು ಜನರ ಅಸ್ಥಿಗಳ ವಿಸರ್ಜನೆಯನ್ನು ಅಶೋಕ ಮಾಡಿದರು. ಈ ರೀತಿಯ ಕಾರ್ಯ ಮಾಡಿದ್ದು ವಿಶ್ವದಲ್ಲೇ ಮೊದಲು' ಎಂದು ಬಣ್ಣಿಸಿದರು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್, 'ಕ್ಷೇತ್ರದಲ್ಲಿ ಯಾರೂ ಕೂಡಾ ಹಸಿವೆಯಿಂದ ಇರಬಾರದು ಎಂಬ ಅಶೋಕ ಅವರ ಕಾಳಜಿ ಈ ಕಾರ್ಯದಲ್ಲಿ ಕಾಣುತ್ತಿದೆ' ಎಂದು ಹೇಳಿದರು.

ಇನ್ಫೊಸಿಸ್‌ನಿಂದ ಆಂಬುಲೆನ್ಸ್ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಗಿಗಳಿಗೆ ತುರ್ತು ಸೇವೆ ಒದಗಿಸಲು ಇನ್ಫೊಸಿಸ್ ಪ್ರತಿಷ್ಠಾನವು ನಾರಾಯಣ ಹೃದಯಾಲಯ ದತ್ತಿ ಟ್ರಸ್ಟ್‌ಗೆ ಎರಡು ಆಂಬುಲೆನ್ಸ್‌ಗಳನ್ನು ದಾನವಾಗಿ ನೀಡಿದೆ.

ಆಂಬುಲೆನ್ಸ್‌ಗಳು ಎನ್‌ಎಚ್ ಹೆಲ್ತ್‌ಸಿಟಿಯ ಅಡ್ವಾನ್ಸ್ಡ್ ಲೈಫ್ ಸಪೋರ್ಟ್‌ನ (ಎಎಲ್‌ಎಸ್) ಭಾಗವಾಗಲಿದ್ದು, ಇವುಗಳಲ್ಲಿ ಅರೆ ವೈದ್ಯಕೀಯ ಸಿಬ್ಬಂದಿ ರೋಗಿಗಳಿಗೆ ಆರಂಭಿಕ ಚಿಕಿತ್ಸೆ ನೀಡಲಿದ್ದಾರೆ.

ಹೆಲ್ತ್‌ಸಿಟಿಯ 10 ಕಿ.ಮೀ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲಿರುವ ಆಂಬುಲೆನ್ಸ್‌ಗಳಲ್ಲಿ ಜಿಪಿಎಸ್ ತಂತ್ರಜ್ಞಾನವೂ ಇದ್ದು, ರೋಗಿಗಳಿಗೆ ಉಚಿತ ಸೇವೆ ಒದಗಿಸಲಿವೆ ಎಂದು ಸಂಸ್ಥೆ ತಿಳಿಸಿದೆ.

ಇನ್ಫೊಸಿಸ್ ಪ್ರತಿಷ್ಠಾನದ ಸಂಜಯ್ ಭಟ್ ಅವರು ನಾರಾಯಣ ಹೆಲ್ತ್ ಸಂಸ್ಥೆಯ ಅಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಅವರಿಗೆ ಆಂಬುಲೆನ್ಸ್‌ಗಳನ್ನು ಹಸ್ತಾಂತರಿಸಿದರು

'ಕೋವಿಡ್ ಎರಡನೇ ಅಲೆಯ ನಿಯಂತ್ರಣಕ್ಕಾಗಿ ಬೆಂಗಳೂರಿನಲ್ಲಿ 150 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರವನ್ನು ಸ್ಥಾಪಿಸಲು ಸಂಸ್ಥೆ ನೆರವಾಗಿದೆ. ಆರು ರಾಜ್ಯಗಳಲ್ಲಿ ಆಮ್ಲಜನಕ ಸ್ಥಾವರಗಳ ಸ್ಥಾಪನೆಗೂ ಸಹಾಯ ಮಾಡಿದೆ' ಎಂದು ಹೇಳಿದೆ.

ಆಶ್ರಯ ನಿವೇಶನ ಭೂಮಿಯ ನೀಲನಕ್ಷೆಯನ್ನು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಪರಿಶೀಲಿಸಿದರು. ತರಳು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಮುನಾ, ಪಿ.ಡಿ.ಒ.ಭಾರತಿ, ಪವನ್, ವಿನಯ್, ರಿಚರ್ಡ್, ಮಹೇಶ್ ಕುಮಾರ್ ಹಾಗೂ ಇತರರು ಇದ್ದರು

'ಕೋವಿಡ್: ಪರಿಹಾರ ₹ 5 ಲಕ್ಷಕ್ಕೆ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿ ಬಿಪಿಎಲ್ ಕುಟುಂಬದವರಾಗಿದ್ದರೆ, ಆ ಕುಟುಂಬಕ್ಕೆ ಮುಖ್ಯಮಂತ್ರಿ ₹ 1 ಲಕ್ಷ ಪರಿಹಾರ ಘೋಷಿಸಿದ್ದಾರೆ. ಆ ಪರಿಹಾರವನ್ನು ವಿಪತ್ತು ನಿರ್ವಹಣಾ ನಿಯಮಕ್ಕೆ ಒಳಪಡಿಸಿ ₹ 5 ಲಕ್ಷಕ್ಕೆ ಹೆಚ್ಚಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಕೊರೊನಾ ಸೋಂಕನ್ನು ಈಗಾಗಲೇ ರಾಷ್ಟ್ರೀಯ ವಿಪತ್ತು ಎಂದು ಪರಿಗಣಿಸಲಾಗಿದೆ. ಆದ್ದರಿಂದ, ವಿಪತ್ತು ಪರಿಹಾರದ ನಿಯಮಗಳಡಿ ಮೃತ ವ್ಯಕ್ತಿಗಳ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ಕೊಡಲು ಅವಕಾಶವಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು, ಅವಕಾಶವನ್ನು ಬಳಸಿಕೊಳ್ಳಬೇಕು' ಎಂದು ಮುಖ್ಯಮಂತ್ರಿಯನ್ನು ಆಗ್ರಹಿಸಿದ್ದಾರೆ.

395 ಫಲಾನುಭವಿಗಳಿಗೆ 'ಆಶ್ರಯ' ನಿವೇಶನ

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ತರಳು ಗ್ರಾಮ ಪಂಚಾಯಿತಿಯ ಗುಟ್ಟೆಪಾಳ್ಯದಲ್ಲಿ 395 ಅರ್ಹ ಫಲಾನುಭವಿಗಳಿಗೆ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ ಮಾಡಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಗುಟ್ಟೆಪಾಳ್ಯದಲ್ಲಿ ಆಶ್ರಯ ಯೋಜನೆಯಡಿ ಮಂಜೂರಾಗಿರುವ ಜಮೀನಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಸ್ವಂತ ಸೂರಿಲ್ಲದವರಿಗೆ ನಿವೇಶನ ಹಂಚಿಕೆ ಮಾಡಲು ಗುಟ್ಟೆಪಾಳ್ಯದಲ್ಲಿ 10 ಎಕರೆ ಗುರುತಿಸಲಾಗಿದೆ. ಕೆಲವು ಮಾನದಂಡಗಳ ಮೂಲಕ ಅರ್ಹ ಫಲಾನುಭವಿಗಳನ್ನು ಗುರುತಿಸಿ, ನಿವೇಶನ ಹಂಚಿಕೆ ಮಾಡಲಾಗುವುದು. ಬಡವರಿಗಾಗಿ ಬಹುಮಹಡಿ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ಹಂಚಿಕೆಯಾಗಲಿದೆ' ಎಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನಾಗವೇಣಿ, 'ಗ್ರಾಮ ಸಭೆಗಳ ಮೂಲಕ ಪಂಚಾಯಿತಿ ವ್ಯಾಪ್ತಿಯಲ್ಲಿರುವ ನಿವೇಶನ ರಹಿತರ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುವುದು. ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ವೇಳೆ ಭೂಮಿ ಕಳೆದುಕೊಂಡ ಕಗ್ಗಲೀಪುರ ವ್ಯಾಪ್ತಿಯ 17 ಮಂದಿಗೂ ಇದೇ ಸ್ಥಳದಲ್ಲಿ ನಿವೇಶನ ಕಲ್ಪಿಸಲಾಗುವುದು' ಎಂದರು.

'ಪತ್ರಿಕಾ ವಿತರಕರಿಗೆ ಶೀಘ್ರ ಲಸಿಕೆ'

'ಪ್ರಜಾವಾಣಿ', ಮಾರುತಿ ಮೆಡಿಕಲ್ಸ್ ಸಹಯೋಗದಲ್ಲಿ ಆಹಾರ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯಲ್ಲಿನ ಎಲ್ಲ ಪತ್ರಿಕಾ ವಿತರಕರಿಗೆ ಆದ್ಯತೆ ಮೇರೆಗೆ ಶೀಘ್ರದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ. ರಾಕೇಶ್‌ಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಕಚೇರಿಗಳ ಸಂಕೀರ್ಣದ ಮುಂಭಾಗ ಸೋಮವಾರ 'ಪ್ರಜಾವಾಣಿ' ಪತ್ರಿಕಾ ಸಮೂಹ ಹಾಗೂ ಬೆಂಗಳೂರಿನ ಮಾರುತಿ ಮೆಡಿಕಲ್ಸ್ ಸಹಯೋಗದಲ್ಲಿ ಜಿಲ್ಲೆಯ 85ಕ್ಕೂ ಹೆಚ್ಚು ಪತ್ರಿಕಾ ವಿತರಕರಿಗೆ ಆಹಾರ ಕಿಟ್ ವಿತರಿಸಿ ಅವರು ಮಾತನಾಡಿದರು. ಸದ್ಯ ಜಿಲ್ಲೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ 18ರಿಂದ 44ರ ವಯಸ್ಸಿನವರಿಗೂ ಆದ್ಯತಾ ವಲಯಗಳನ್ನು ಗುರುತಿಸಿ ಲಸಿಕೆ ನೀಡಲಾಗುತ್ತಿದೆ. ಅದಾದ ಬಳಿಕ ವಿತರಕರಿಗೂ ಲಸಿಕೆಗೆ ವ್ಯವಸ್ಥೆ ಮಾಡಲಾಗುವುದು ಎಂದರು.

ಪತ್ರಿಕಾ ವಿತರಕರಿಗೆ ಜಿಲ್ಲಾಧಿಕಾರಿ ರಾಕೇಶ್‌ಕುಮಾರ್ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಆಹಾರ ಕಿಟ್ ವಿತರಿಸಿದರು. ದಾನಿ ಮನೋಜ್ ಮುನ್ನೋತ್ ಇದ್ದರು

ದಾನಿ, ಮಾರುತಿ ಮೆಡಿಕಲ್ಸ್ ಮಾಲೀಕ ಮನೋಜ್ ಮುನ್ನೋತ್ ಮಾತನಾಡಿ ' ಕೋವಿಡ್ ನಿಯಂತ್ರಣ ಕೇವಲ ಸರ್ಕಾರ ಅಥವಾ ಅಧಿಕಾರಿಗಳ ಕೆಲಸ ಅಲ್ಲ. ಸಾರ್ವಜನಿಕರದ್ದೂ ಪ್ರಮುಖ ಪಾತ್ರ ಇದೆ. ಜನರ ಸುರಕ್ಷೆಗಾಗಿ ವಿಧಿಸಿರುವ ಲಾಕ್‌ಡೌನ್ ನಿಯಮಗಳನ್ನು ನಾವೆಲ್ಲರೂ ಪಾಲಿಸಬೇಕು. ತಪ್ಪದೇ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಿರೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರು ವಿತರಕರಿಗೆ ಆಹಾರದ ಕಿಟ್ ನೀಡಿದರು. 'ಪ್ರಜಾವಾಣಿ' ಪ್ರಸರಣ ವಿಭಾಗದ ವ್ಯವಸ್ಥಾಪಕ ಬಸವರಾಜು ಇದ್ದರು.

ಅಪಾರ್ಟ್‌ಮೆಂಟ್ ಸಮುಚ್ಚಯ ಸಮಾರಂಭಕ್ಕಿಲ್ಲ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಕೋವಿಡ್ ಹರಡದಂತೆ ತಡೆಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಬಂಧಿಸಿದಂತೆ ಬಿಬಿಎಂಪಿ ಸೋಮವಾರ ಮತ್ತೊಮ್ಮೆ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಅಪಾರ್ಟ್‌ಮೆಂಟ್ ಸಮುಚ್ಚಯಗಳ ಆವರಣಗಳಲ್ಲಿ ಹುಟ್ಟಿದ ಹಬ್ಬ ಮತ್ತಿತರ ಸಭೆ ಸಮಾರಂಭಗಳನ್ನು, ಕಿಟ್ಟಿ ಪಾರ್ಟಿಗಳನ್ನು ಏರ್ಪಡಿಸುವಂತಿಲ್ಲ. ವ್ಯಾಯಮಶಾಲೆ, ಕ್ರೀಡಾ ಸೌಕರ್ಯ, ಈಜುಕೊಳ, ಮನರಂಜನಾ ಕ್ಲಬ್‌ಗಳ ಬಳಕೆಗೂ ಅವಕಾಶವಿಲ್ಲ ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ.

ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ನಿಗದಿಪಡಿಸಿದ್ದ ನಿಯಮಗಳು ಈ ಮಾರ್ಗಸೂಚಿಯಲ್ಲೂ ಮುಂದುವರಿದಿವೆ. ಪ್ರಮುಖ ನಿಯಮಗಳೆಂದರೆ, ನಿವಾಸಿಗಳೆಲ್ಲರೂ ಬಳಸುವ ಸಾಮಾನ್ಯ ಪ್ರದೇಶಗಳನ್ನು, ಲಿಫ್ಟ್‌ಗಳನ್ನು ಆಗಾಗ ಸ್ವಚ್ಛಗೊಳಿಸುತ್ತಿರಬೇಕು, ಸ್ವಚ್ಛತಾ ಕಾರ್ಮಿಕರ ಆರೋಗ್ಯ ರಕ್ಷಣೆ ಬಗ್ಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳು (ಆರ್‌ಡಬ್ಲ್ಯುಎ) ಕಾಳಜಿವಹಿಸಬೇಕು, ನಿವಾಸಿಗಳಲ್ಲಿ ಆತಂಕ ಹುಟ್ಟಿಸುವಂತಹ ವದಂತಿಗಳನ್ನು ಹಬ್ಬಿಸಲು ಅವಕಾಶ ನೀಡಬಾರದು. ಏನೇ ಕ್ರಮಗಳ ಅಗತ್ಯವಿದ್ದರೂ ಆರೋಗ್ಯ ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಬೇಕು.

ಅಲ್ಲದೆ ಸೋಂಕು ಪತ್ತೆಯಾದ ಸಂದರ್ಭದಲ್ಲಿ ಕಂಟೈನ್‌ಮೆಂಟ್ ಯೋಜನೆ ಜಾರಿಗೆ ಸಹಕರಿಸಬೇಕು ಇವೇ ಮೊದಲಾದವು ನಿಯಮಗಳಲ್ಲಿ ಸೇರಿವೆ.

ನೆರವು ನೀಡಲು ಜನಪದ ಕಲಾವಿದೆ ಮಾರಕ್ಕ ಸಣ್ಣಚಿತ್ತಪ್ಪ ಮನವಿ • ಹುಣಸೆಮರದ ಕೆಳಗೆ ಆಶ್ರಯ ಪಡೆದ ಕುಟುಂಬ

ಸೋಲಿಗ ಕುಟುಂಬ ಹಸಿವಿನಿಂದ ಕಂಗಾಲು

• ದೊಡ್ಡಬಾಣಗೆರೆ ಮಾರಣ್ಣ

ಮಾಗಡಿ ಪಟ್ಟಣದ ರೇಷ್ಮೆ ಪಾರಮ್ ಹಿಂದೆ ಹುಣುಸೆ ಮರದ ಕೆಳಗೆ ಇರುವ ನಿರ್ಗತಿಕ ಸೋಲಿಗ ಭೀಮ, ಗೌರಿ ಕುಟುಂಬ

ಪ್ರಜಾವಾಣಿ ವಿಶೇಷ

ಮಾಗಡಿ: ಭಿಕ್ಷೆ ಬೇಡುವ ಮೂಲಕ ಅನ್ನದ ಮಾರ್ಗ ಕಂಡುಕೊಂಡಿದ್ದ ಗಿರಿಜನ ಕುಟುಂಬವೊಂದಕ್ಕೆ ಕೊರೊನಾ ಲಾಕ್‌ಡೌನ್‌ನಿಂದಾಗಿ ಭಿಕ್ಷೆ ಬೇಡುವುದಕ್ಕೂ ಅವಕಾಶವಿಲ್ಲದೆ ಹಸಿವಿನಿಂದ ಕಂಗಾಲಾಗಿದೆ.

ಪಟ್ಟಣದ ರೇಷ್ಮೆ ಇಲಾಖೆಯ ಫಾರಂ ಹಿಂದಿನ ಖಾಸಗಿ ಜಮೀನಿನಲ್ಲಿ ಇರುವ ಹುಣಸೆ ಮರವೊಂದು ದಿಕ್ಕಿಲ್ಲದ ನಿರ್ಲಕ್ಷಿತ ಕಡುಬಡ ಗಿರಿಜನ ಕುಟುಂಬಕ್ಕೆ ಆಶ್ರಯ ನೀಡಿದೆ. ಆದರೆ ಹಸಿವು ಇವರನ್ನು ಬಿಡದೆ ಕಾಡುತ್ತಿದೆ. ಸೋಲಿಗ ಜಾತಿಗೆ ಸೇರಿರುವ ಭೀಮ ಮತ್ತು ಗೌರಿ ಕುಟುಂಬದ ಕರುಣಾಜನಕ ಕಥೆ ಇದು.

ಅರಣ್ಯವನ್ನೇ ತಾಯಿತಂದೆ ಎಂದು ನಂಬಿಕೊಂಡು ವನವಾಸಿಗಳಾಗಿ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದ ಗಿರಿಜನರಿಗೆ ಅರಣ್ಯ ಭೂಮಿ ಅಕ್ರಮ ಒತ್ತುವರಿಯಿಂದಾಗಿ ಸ್ವಂತ ಊರು, ಸ್ವಂತದ್ದು ಎಂದು ಹೇಳಿಕೊಳ್ಳಲು ನಿವೇಶನ, ಮನೆ, ಭೂಮಿ ಏನೂ ಇಲ್ಲದಂತಾಗಿದೆ. ಭೀಮ ಅಲಿಯಾಸ್ ಮಂಜುನಾಥ, ಗೌರಿ ದಂಪತಿ ಪಟ್ಟಣದ ಹುಣಸೆಮರದ ಕೆಳಗೆ ಹಲವು ವರ್ಷಗಳಿಂದ ವಾಸವಾಗಿದ್ದಾರೆ. ಹಗಲೆಲ್ಲ ಭಿಕ್ಷೆ ಬೇಡುವುದು. ಸಿಕ್ಕಷ್ಟು ತಂಗಳು ತಿಂದು ಮರದ ನೆರಳಿನಲ್ಲಿ ಮಲಗುವುದು ಇವರ ದಿನಚರಿಯಾಗಿತ್ತು. ಲಾಕ್‌ಡೌನ್ ನಿರ್ಗತಿಕರ ಬದುಕನ್ನು ಲಾಕ್ ಮಾಡಿದೆ.

‘ರವಿ, ಕಬ್ಬಾಳು, ಚಿನ್ನಿ ಮಕ್ಕಳೊಂದಿಗೆ ಐದು ಜನರದ್ದು ಚಿಂತಾಜನಕ ಸ್ಥಿತಿ. ದಿನಸಿ ಕಿಟ್ ವಿತರಿಸಲಾಗುತ್ತಿದೆ. ನಿಜವಾದ ನಿರ್ಗತಿಕರಿಗೆ ದಾನಿಗಳು ನೀಡುವ ದಿನಸಿ ಕಿಟ್ ತಲುಪುತ್ತಿಲ್ಲ. ನಿರ್ಗತಿಕರತ್ತ ಯಾರೂ ನೋಡುವುದಿಲ್ಲ. ಒಂದು ತಿಂಗಳ ಹಿಂದೆ ಮೂರು ಪುಟಾಣಿಗಳು ಭಿಕ್ಷೆಗೆ ಬಂದಿದ್ದವು. ಮಕ್ಕಳನ್ನು ಅಕ್ಕರೆಯಿಂದ ಹತ್ತಿರ ಕರೆದು, ಮಕ್ಕಳಿಗೆ ಊಟಕ್ಕೆ ನೀಡಿ, ಮೊಮ್ಮಕ್ಕಳ ಮೂರು ಜೊತೆ ಬಟ್ಟೆ ನೀಡಿ ಕಳುಹಿಸಿದ್ದೆ’ ಎಂದು ಅವರ ಸ್ಥಿತಿಯನ್ನು ವಿವರಿಸಿದವರು ಇಳಿವಯಸ್ಸಿನ ಜನಪದ ಕಲಾವಿದೆ ಮಾರಕ್ಕ ಸಣ್ಣಚಿತ್ತಪ್ಪ.

ಭಿಕ್ಷೆ ಬೇಡಲು ಬಂದು ಪುಟಾಣಿಗಳ ಜಾಡುಹಿಡಿದು ಅವರ ಹಿಂದೆ ತೆರಳಿದಾಗ ನಾಗರಿಕ ಪ್ರಪಂಚದ ಅನಾಗರಿಕತೆಯೊಂದನ್ನು ಕಂಡು ಕಣ್ಣು ಮಂಜಾಯಿತು. ದಿಕ್ಕಿಲ್ಲದವರಿಗೆ ದೇವರಾದರೂ ಕರುಣೆ ತೋರಿ, ಪ್ರಪಂಚ ಅರಿಯದೆ ಮುಗ್ಧ ಮಕ್ಕಳ ಹಸಿವು ನೀಗಿಸಬಾರದೆ ಎಂದು ಕಲಾವಿದೆ ವಿವರಿಸಿದರು.

ಚಿಕ್ಕವಯಸ್ಸಿಗೆ ಮೂರು ಮಕ್ಕಳ ತಾಯಿಯಾಗಿರುವ ಗೌರಿ ಮಾತನಾಡಿ, ‘ನಾವು ಗಿರಿಜನ ಸೋಲಿಗರು. ಮಾಗಡಿಗೆ ತಾಲ್ಲೂಕಿನ ದುಡುಪನಹಳ್ಳಿ ನಮ್ಮ ಪೂರ್ವಜರಿದ್ದ ಕಾಡು ನಾಶವಾಗಿದೆ. ಪಟ್ಟಣದಲ್ಲಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಭಿಕ್ಷೆ ಬೇಡುತ್ತಾ 34 ವರ್ಷಗಳು ಕಳೆದಿವೆ. ನಮ್ಮ ದುಃಸ್ಥಿತಿ ಕಂಡೊಡನೆ ಜನ ನಮ್ಮನ್ನು ಪ್ರಾಣಿಗಳಿಗಿಂತ ಕಡೆಯಾಗಿ ಗದರಿಸಿ ಓಡಿಸುತ್ತಿದ್ದಾರೆ. ಹುಣಸೆ ಮರಮಾತ್ರ ನಮ್ಮೆಲ್ಲರ ತಾಯಿಯಂತೆ ಆಶ್ರಯ ನೀಡಿದೆ. ರಾತ್ರಿಯಾದೊಡನೆ ಹಾವು, ಇಲಿ, ಹೆಗ್ಗಣ, ಹರಿದಾಡುತ್ತಿವೆ. ವಿಷಜಂತುಗಳಾದರೂ ಸಹ ನಮ್ಮನ್ನು ಎಂದೂ ಕಚ್ಚಿಲ್ಲ. ಸೊಳ್ಳೆಗಳು ಮಾತ್ರ ನಮ್ಮನ್ನು ಕಚ್ಚದೆ ಬಿಡುವುದೇ ಇಲ್ಲ’ ಎನ್ನುತ್ತಾರೆ.

ಮಳೆ ಸುರಿಯುತ್ತಿದ್ದಾಗ ಹುಣಸೆಮರದ ಕೆಳಗೆ ಪುಟ್ಟಕಂದನೊಂದಿಗೆ ಕಂಬಿನಿ ಮಿಡಿಯುತ್ತಿದ್ದ ಗೌರಿ

‘ಪಡಿತರ ಚೀಟಿ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಇತರೆ ಯಾವುದೇ ದಾಖಲೆಗಳಿಲ್ಲ. ದಾಖಲೆಗಳನ್ನು ಮಾಡಿಸಿಕೊಳ್ಳುವ ದಾರಿ ನಮಗೆ ಗೊತ್ತಿಲ್ಲ. ನಮ್ಮ ದುಃಸ್ಥಿತಿ ಇರಲಿ. ನಮ್ಮ ಮೂರು ಮಕ್ಕಳಾದರು ಶಾಲೆಗೆ ಸೇರಲಿ ಎಂದರೆ ಯಾರೂ ನಮ್ಮತ್ತ ಸುಳಿಯುತ್ತಿಲ್ಲ. ಲಾಕ್‌ಡೌನ್‌ನಿಂದಾಗಿ ಭಿಕ್ಷೆ ಸಹ ದೊರೆಯುತ್ತಿಲ್ಲ’ ಎಂದು ಕಂಬನಿ ಮಿಡಿದರು.

ಭೀಮ ಮಾತನಾಡಿ, ‘ಸ್ವಾಮಿ ಬಡವರ ಬಗ್ಗೆ ಯಾರಿಗೂ ಕನಿಕರವಿಲ್ಲ. ಗಿರಿಜನರಿಗೆ ವಿಶೇಷ ಸವಲತ್ತಗಳು ಇವೆಯಂತೆ. ಅವುಗಳ ಬಗ್ಗೆ ಅನಕ್ಷರಸ್ಥನಾದ ನನಗೆ ಏನೂ ತಿಳಿಯದು. ವಿಶೇಷ ಸವಲತ್ತುಗಳು ಇಲ್ಲದಿದ್ದರೆ ಚಿಂತೆಇಲ್ಲ. ನಮ್ಮ ಪುಟಾಣಿ ಮಕ್ಕಳಿಗೆ ಕನಿಷ್ಠ ನೆರಳು ನೀಡಲು ಒಂದು ಪ್ಲಾಸ್ಟಿಕ್ ಟಾರ್ಪಾಲ್ ನೀಡಿ ಟೆಂಟ್ ಹಾಕಿಕೊಳ್ಳಲು ಸಹಾಯ ಮಾಡಿದರೆ ಸಾಕು. ವಾಸಕ್ಕೆ ಒಂದು ಮನೆ, ಪಡಿತರ ಚೀಟಿ ಮಾಡಿಸಿಕೊಟ್ಟರೆ ಸಾಕು ಎಂದು ಹಂಬಲಿಸುತ್ತಿದ್ದೇವೆ. ಲಾಕ್ ಡೌನ್ ತೆರವಾದ ಮೇಲೆ ಭಿಕ್ಷೆ ಬೇಡಿ ಮಕ್ಕಳ ಹೊಟ್ಟೆ ತುಂಬಿಸುತ್ತೇನೆ. ಪುಣ್ಯಾತ್ಮರು ನಮಗೆ ದಿನಸಿ ಕಿಟ್, ಹಳೆಯ ಬಟ್ಟೆ, ನೀಡಿದರೆ ಬದುಕುತ್ತೇವೆ. ಇಲ್ಲವಾದರೆ ಹಸಿವಿನಿಂದ ಸಾಯುತ್ತೇವೆ’ ಎಂದರು.

ಇವರು ವಾಸವಾಗಿರುವ ಸ್ಥಳಕ್ಕೆ ಹೋದಾಗ ಮಳೆ ಸುರಿಯುತ್ತಿತ್ತು. ಹುಣಸೆ ಮರದ ಕೆಳಗೆ ಪುಳ್ಳೆ ಸೌದೆ ಇಟ್ಟು ಒಲೆ ಉರಿಯುತ್ತಿತ್ತು. ಒಲೆಯ ಮೇಲೆ ಬೇಯುತ್ತಿದ್ದ ಅಕ್ಕಿ, ಮಳೆಯನೀರು ಬಿದ್ದು ಒಲೆಯಲ್ಲಿ ನೀರು ತುಂಬಿ ಹೊಗೆ ಏಳಲಾರಂಭಿಸಿತು. ಹಸಿವಿನಿಂದ ಪುಟಾಣಿ ಮಕ್ಕಳು ರೋದಿಸುತ್ತಿದ್ದವು.

ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು

ಅಗತ್ಯವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಶವಯಾತ್ರೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ನಿತ್ಯವೂ ಹೆಚ್ಚುತ್ತಿರುವ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ಬೊಮ್ಮನಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅಣಕು ಶವಯಾತ್ರೆ ನಡೆಸಿ ಪ್ರತಿಭಟನೆ ನಡೆಸಿದರು.

ಮೋದಿ ಪ್ರತಿಕೃತಿಯನ್ನು ಹೊತ್ತು ಮೆರವಣಿಗೆ ನಡೆಸಿದ ಕಾರ್ಯಕರ್ತರು, ರಸ್ತೆಯಲ್ಲಿ ಪ್ರತಿಕೃತಿ ಸುಟ್ಟು, ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳನ್ನು ಖಂಡಿಸಿ ಘೋಷಣೆ ಕೂಗಿದರು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ. ವಾಸುದೇವ ರೆಡ್ಡಿ 'ಸಾಮಾನ್ಯ ಜನ ಬೆಲೆ ಏರಿಕೆಯ ಬೆಂಕಿಯಲ್ಲಿ ಬೇಯುತ್ತಿದ್ದರೂ, ಈ ಬಗ್ಗೆ ಚಕಾರ ಎತ್ತದ ಪ್ರಧಾನಿ, ಕಾರ್ಪೊರೇಟ್ ಕುಳಗಳ ದಲ್ಲಾಳಿಯಂತೆ ನಡೆದುಕೊಳ್ಳುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಐಎನ್ ಟಿಯುಸಿ ರಾಜ್ಯ ಉಪಾಧ್ಯಕ್ಷ ರವೀಂದ್ರ, 'ಒಂದು ಕುಟುಂಬದ ದಿನದ ಜೀವನ ನಿರ್ವಹಣೆಗೆ ಕನಿಷ್ಠ # 750 ಅಗತ್ಯವೆಂದು ಅಧ್ಯಯನ ವರದಿಗಳು ಹೇಳುತ್ತವೆ. ಹೀಗಿರುವಾಗ ಕೊರೊನಾದಿಂದಾಗಿ ಆದಾಯ ನಷ್ಟಕ್ಕೊಳಗಾಗಿರುವ ಕಾರ್ಮಿಕರು ಜೀವನ ನಡೆಸುವುದಾದರೂ ಹೇಗೆ?' ಎಂದು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಕಾಂಗ್ರೆಸ್ ಸದಸ್ಯರು, ಎನ್‌ಎಸ್‌ಯುಐ ಹಾಗೂ ಯುವ ಕಾಂಗ್ರೆಸ್ ಸದಸ್ಯರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸಯ್ಯದ್ ಸರ್ದಾರ್, ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥ ನಾರಾಯಣ್, ಮಹಿಳಾ ಮುಖಂಡರಾದ ಪವಿತ್ರ ಗೌಡ, ಜಯಶ್ರೀ ಗೌಡ ಇದ್ದರು.

ತಿಪಟೂರಿನಲ್ಲಿ ವೀರಶೈವ ಲಿಂಗಾಯತ ಮಠಾಧೀಶರ ಒಕ್ಕೊರಲ ಬೆಂಬಲ

ಬಿಎಸ್‌ವೈ ಪರ ಹೋರಾಟಕ್ಕೂ ಸಿದ್ಧ

ಪ್ರಜಾವಾಣಿ ವಾರ್ತೆ

ತಿಪಟೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸ್ವಪಕ್ಷೀಯರೇ ಅಧಿಕಾರದ ಆಸೆಗೆ ಕಿರುಕುಳ ನೀಡಲು ಮುಂದಾಗಿರುವುದು ಖಂಡನೀಯ. ಚುನಾವಣಾ ಪೂರ್ವದಲ್ಲಿ ಹೈಕಮಾಂಡ್ ನೀಡಿದ ಭರವಸೆ ಈಡೇರಿಸಲು ಪೂರ್ಣಾವಧಿ ಅಧಿಕಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಠಾಧಿಪತಿಗಳ ವೇದಿಕೆಯ ಅಧ್ಯಕ್ಷ ಡಾ.ರುದ್ರಮುನಿ ಸ್ವಾಮೀಜಿ ಒತ್ತಾಯಿಸಿದರು.

ನಗರದಲ್ಲಿ ಸೋಮವಾರ ಕಂಚಘಟ್ಟದ ಷಡಕ್ಷರ ಮಠದಲ್ಲಿ ಎಂಟಕ್ಕೂ ಹೆಚ್ಚು ಮಂದಿ ಸ್ವಾಮೀಜಿಗಳು ಅಖಿಲ ಭಾರತ ವೀರಶೈವ ಲಿಂಗಾಯತ ಮಠಾಧಿಪತಿಗಳ ವೇದಿಕೆ ವತಿಯಿಂದ ಸುದ್ದಿಗೋಷ್ಠಿ ನಡೆಸಿದರು.

ಬಿಎಸ್‌ವೈ ಅವರು ವೀರಶೈವ ಲಿಂಗಾಯತ ಎನ್ನುವುದಕ್ಕಿಂತ ರಾಜ್ಯದ ಅಗತ್ಯತೆ ಅರಿತು ಅಭಿವೃದ್ಧಿ ಕಾರ್ಯ ಮಾಡುತ್ತಾ ಬಂದರೂ ಅಧಿಕಾರದ ಆಸೆಗೆ ಸ್ವಪಕ್ಷಿಯರೇ ತೊಂದರೆ ನೀಡುತ್ತಿರುವುದು ದುರಂತದ ಸಂಗತಿ. ದಕ್ಷಿಣ ಭಾರತದಲ್ಲಿ ಬಿಜೆಪಿ ನೆಲೆಗೊಳ್ಳಲು ಭದ್ರ ಬುನಾದಿ ಹಾಕಿಕೊಟ್ಟ ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಇಳಿಸುವ ಕುತಂತ್ರಕ್ಕೆ ಹೈಕಮಾಂಡ್ ತಲೆಬಾಗಬಾರದು ಎಂದರು.

ಬೀರೂರು ರಂಭಾಪುರಿ ಶಾಖೆ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬಿಎಸ್‌ವೈ ಅಧಿಕಾರ ಹಿಡಿದ 15 ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ನೆರೆ ಹಾವಳಿಯನ್ನು ಏಕಾಂಗಿಯಾಗಿ ನಿರ್ವಹಣೆ ಮಾಡಿದಾಗ ವಯಸ್ಸಾಗಿರಲಿಲ್ಲವೇ? ಎಂದರು.

ನುಗ್ಗೇಹಳ್ಳಿ ಹಿರೇಮಠದ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬಿಎಸ್‌ವೈ ಎಲ್ಲ ವರ್ಗ, ಧರ್ಮದವರನ್ನೂ ಒಗ್ಗೂಡಿಸಿಕೊಂಡು ನಡೆಯುತ್ತಿದ್ದಾರೆ ಎಂದರು.

ವನಕಲ್ಲು ಮಲ್ಲೇಶ್ವರ ಸಂಸ್ಥಾನಮಠದ ಡಾ.ಬಸವ ರಮಾನಂದ ಸ್ವಾಮೀಜಿ, ಹಂಬಲದೇವರಹಳ್ಳಿಯ ಉಜ್ಜನೀಶ್ವರ ಮಠದ ಉಜ್ಜನೀಶ್ವರ ಶಿವಾಚಾರ್ಯ ಸ್ವಾಮೀಜಿ, ಮಾದಿಹಳ್ಳಿ ಹಿರೇಮಠದ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ಡಿ.ಎಂ. ಕುರ್ಕೆಯ ಬೂದಿಹಾಳ್ ವಿರಕ್ತಮಠದ ಶಶಿಶೇಖರ್ ಸಿದ್ದಬಸವ ಸ್ವಾಮೀಜಿ, ತುರುವೇರೆಕೆ ಬಸವಕೇಂದ್ರದ ತಿಪ್ಪೇರುದ್ರ ಸ್ವಾಮೀಜಿ, ಕಲ್ಕೆರೆಯ ಪೂರ್ಣಾನಂದ ಸ್ವಾಮೀಜಿ ಹಾಜರಿದ್ದರು.

ಮುಖ್ಯಮಂತ್ರಿಗೆ ಅಡ್ಡಿಪಡಿಸಬೇಡಿ: ಪ್ರಲ್ಹಾದ್ ಜೋಶಿ

ಚಿತ್ರದುರ್ಗ: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಕೆಲಸಕ್ಕೆ ಯಾರೊಬ್ಬರೂ ಅಡ್ಡಿಪಡಿಸಬಾರದು ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಬದಲಾವಣೆ ಮಾಡುವ ಪ್ರಸ್ತಾವ ರಾಷ್ಟ್ರೀಯ ನಾಯಕರ ಮುಂದಿಲ್ಲ. ಕೋವಿಡ್ ಸಂದರ್ಭದಲ್ಲಿ ಜನರ ಆರೋಗ್ಯ ರಕ್ಷಣೆಯೇ ಆದ್ಯ ಕರ್ತವ್ಯ. ಮುಖ್ಯಮಂತ್ರಿಗೆ ಯಾರೂ ತೊಂದರೆ ನೀಡಬಾರದು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

‘ಕೋವಿಡ್‌ಗೆ ಬಲಿಯಾದವರ ಕುಟುಂಬಗಳು ಎದುರಿಸುತ್ತಿರುವ ನೋವು ಅರ್ಥವಾಗಿದೆ. ಕೋವಿಡ್ ಅನ್ನು ಸರ್ಕಾರ ಸಮರ್ಥವಾಗಿ ನಿರ್ವಹಿಸುತ್ತಿದೆ. ಆಮ್ಲಜನಕದ ಕೊರತೆ ಉಂಟಾಗದಂತೆ ನೋಡಿಕೊಳ್ಳುತ್ತಿದೆ. ಅಧಿಕಾರದ ಸಂದರ್ಭದಲ್ಲಿ ಭ್ರಷ್ಟಾಚಾರ ಮಾಡಿ ರೂಢಿ ಇರುವ ಕಾಂಗ್ರೆಸ್, ವಿನಾ ಕಾರಣ ಆರೋಪ ಮಾಡುತ್ತಿದೆ’ ಎಂದರು

ಆಕ್ಷೇಪ

ಅರವಿಂದ ಬೆಲ್ಲದ ಹಾಗೂ ಇತರರು ಹೈ ಕಮಾಂಡ್‌ನೊಂದಿಗೆ ಮಾತನಾಡಲು ದೆಹಲಿ ಪ್ರವಾಸ ಮಾಡುತ್ತಿದ್ದು ಶಾಶ್ವತವಾಗಿ ಹಾಗೆಯೇ ಪ್ರವಾಸದಲ್ಲಿಯೇ ಇರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದಾಗಿ ಷಡಕ್ಷರ ಮಠದ ರುದ್ರಮುನಿ ಸ್ವಾಮೀಜಿ ಹೇಳಿದರು.

‘ರಾಜ್ಯದಲ್ಲಿ ಅಧಿಕಾರ ಬದಲಾವಣೆ ಪ್ರಶ್ನೆ ಬಂದರೆ ಬಿಎಸ್‌ವೈ ಪರ ಹೋರಾಟಕ್ಕಿಳಿಯುವುದು ಅನಿವಾರ್ಯ’ ಎಂದು ಎಚ್ಚರಿಕೆ ನೀಡಿದರು.

ಜಿಎಸ್‌ಟಿ ಪರಿಹಾರ ಮುಂದುವರಿಸಲು ಕೇಂದ್ರ ಸರ್ಕಾರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರ ವ್ಯವಸ್ಥೆ 2022ಕ್ಕೆ ಅಂತ್ಯವಾಗಲಿದೆ. ಇದನ್ನು ಇನ್ನಷ್ಟು ವರ್ಷಗಳ ಕಾಲ ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ವಾಣಿಜ್ಯ ಮತ್ತು ಅಬಕಾರಿ ತೆರಿಗೆ ಸಂಗ್ರಹದ ಪ್ರಗತಿ ಕುರಿತು ಎರಡೂ ಇಲಾಖೆಗಳ ಅಧಿಕಾರಿಗಳ ಜೊತೆ ಸೋಮವಾರ ಅವರು ಸಭೆ ನಡೆಸಿದರು.

‘ಜಿಎಸ್‌ಟಿ ಸಂಗ್ರಹದಲ್ಲಿ ದೇಶದಲ್ಲಿಯೇ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಎಸ್‌ಜಿಎಸ್‌ಟಿ (ರಾಜ್ಯ ಜಿಎಸ್‌ಟಿ) ಸಂಗ್ರಹದಲ್ಲಿ ದ್ವಿತೀಯ ಸ್ಥಾನದಲ್ಲಿದೆ’ ಎಂದು ವಿವರಿಸಿದ ಅಧಿಕಾರಿಗಳು, ಪ್ರಸಕ್ತ ಸಾಲಿನಲ್ಲಿ ಈವರೆಗೆ ಸಂಗ್ರಹವಾದ ತೆರಿಗೆಯ ಮಾಹಿತಿ ನೀಡಿದರು.

‘ಕೋವಿಡ್ ನಡುವೆಯೂ ರಾಜ್ಯದಲ್ಲಿ ವಾಣಿಜ್ಯ ಮತ್ತು ಅಬಕಾರಿ ತೆರಿಗೆ ಸಂಗ್ರಹ ತೃಪ್ತಿಕರವಾಗಿದೆ. ಕೋವಿಡ್ ನಿಯಂತ್ರಣ ನಿರ್ಬಂಧಗಳನ್ನು ಹಿಂಪಡೆದ ಬಳಿಕ ತೆರಿಗೆ ಸಂಗ್ರಹ ಪ್ರಮಾಣ ಹೆಚ್ಚಳವಾಗುವ ನಿರೀಕ್ಷೆ ಇದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದ ಮುಖ್ಯಮಂತ್ರಿ, ‘ತೆರಿಗೆ ಸೋರಿಕೆ ಆಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು’ ಎಂದೂ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ತೆರಿಗೆ ಸಂಗ್ರಹ 2021–22 (₹ ಕೋಟಿಗಳಲ್ಲಿ)

ತೆರಿಗೆ	ವಾರ್ಷಿಕ ಗುರಿ	ಏಪ್ರಿಲ್–ಮೇ
ವಾಣಿಜ್ಯ	76,473	11,409
ಅಬಕಾರಿ	24,580	4,284

ವಾಣಿಜ್ಯ ತೆರಿಗೆ: 2020-21ನೇ ಸಾಲಿನಲ್ಲಿ ₹ 82,443 ಕೋಟಿ ತೆರಿಗೆ ಸಂಗ್ರಹದ ಗುರಿಗೆ ಎದುರಾಗಿ ₹ 82,462 ಕೋಟಿ ಸಂಗ್ರಹವಾಗಿತ್ತು. ಇದರಲ್ಲಿ ಜಿಎಸ್‌ಟಿ ಮೂಲಕ ₹ 65,659 ಕೋಟಿ, ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ₹ 15,861 ಕೋಟಿ ಹಾಗೂ ವೃತ್ತಿ ತೆರಿಗೆ ಮೂಲಕ ₹ 942 ಕೋಟಿ ಸಂಗ್ರಹವಾಗಿದೆ. ಪ್ರಸ್ತುತ ಸಾಲಿನ ವಾರ್ಷಿಕ ಗುರಿಯಲ್ಲಿ ಈವರೆಗೆ ಶೇ 14.92ರಷ್ಟು ಸಾಧನೆಯಾಗಿದೆ.

ಅಬಕಾರಿ ಇಲಾಖೆ: 2020-21ನೇ ಸಾಲಿನಲ್ಲಿ ₹ 23,332.10 ಕೋಟಿ ಅಬಕಾರಿ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಿಗೆ ಹೋಲಿಸಿದರೆ, ಈ ವರ್ಷ ಹೆಚ್ಚಿನ ತೆರಿಗೆ ಸಂಗ್ರಹವಾಗಿದೆ. ಬೆಳವಣಿಗೆ ದರ ಶೇ 8.10ರಷ್ಟಿದೆ ಎಂದು ಅಧಿಕಾರಿಗಳು ವಿವರಿಸಿದರು.

ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣರೆಡ್ಡಿ, ಆರ್ಥಿಕ ಇಲಾಖೆ ಕಾರ್ಯದರ್ಶಿಗಳಾದ ಏಕ್ ರೂಪ್ ಕೌರ್ ಮತ್ತು ಪಿ.ಸಿ. ಜಾಫರ್, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ ಎಂ.ಎಸ್. ಶ್ರೀಕರ್ ಮತ್ತು ಅಬಕಾರಿ ಇಲಾಖೆ ಆಯುಕ್ತ ಬಿ. ಲೋಕೇಶ್ ಅವರು ಸಭೆಯಲ್ಲಿದ್ದರು.

ಚಿತ್ರಾವಳಿ

ಕತಾರ್‌ನಲ್ಲಿರುವ ಕನ್ನಡ ಸಂಘದ ವತಿಯಿಂದ ವಿಶ್ವಪರಿಸರ ದಿನಾಚರಣೆ ಪ್ರಯುಕ್ತ ಗಲ್ಫಾರ್ ಅಲ್ ಮಿಸ್ನಾದ್ ಸಂಸ್ಥೆಯ ಆವರಣದಲ್ಲಿ ಗಿಡ ನೆಡಲಾಯಿತು. ಭಾರತೀಯ ಸಾಂಸ್ಕೃತಿಕ ಕೇಂದ್ರದ ಅಧ್ಯಕ್ಷ ಬಾಬುರಾಜನ್, ಗಲ್ಫಾರ್ ಅಲ್ ಮಿಸ್ನಾದ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ (ಮೂಲ ಸೌಕರ್ಯ) ಹೇಮಚಂದ್ರನ್, ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಮುರಳೀಧರ್ ರಾವ್ ಇದ್ದರು.

ದಾಸನಪುರ ಹೋಬಳಿಯ ಗೋಪಾಲಪುರ ಗ್ರಾಮದ ಬಡವರಿಗೆ ಕಾಂಗ್ರೆಸ್ ಮುಖಂಡ ಕೇಶವ ರಾಜಣ್ಣ ದಿನಸಿ ಕಿಟ್‌ಗಳನ್ನು ವಿತರಿಸಿದರು. ವಾತ್ಸಲ್ಯ ಮಹಿಳಾ ಸೇವಾ ಸಂಸ್ಥೆಯ ಅಧ್ಯಕ್ಷೆ ವೀಣಾ ರಮೇಶ್, ಮುಖಂಡರಾದ ರವಿಕುಮಾರ್, ಪ್ರೇಮಲತಾ ಇದ್ದರು.

‘ಹಳ್ಳದ ಮೇಲೆ ಸಾ.ರಾ.ಚೌಲ್ಟ್ರಿ ನಿರ್ಮಿಸಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ದಟ್ಟಗಳ್ಳಿ ಗ್ರಾಮದ ಸರ್ವೆ ಸಂಖ್ಯೆ 130/3ರಲ್ಲಿರುವ ಸಾ.ರಾ.ಚೌಲ್ಟ್ರಿಯನ್ನು (ಕಲ್ಯಾಣ ಮಂಟಪ) ಹಳ್ಳದ ಮೇಲೆ ನಿರ್ಮಿಸಿಲ್ಲ ಹಾಗೂ ಹಳ್ಳದ ಯಾವುದೇ ಪ್ರದೇಶ ಒತ್ತುವರಿ ಆಗಿಲ್ಲ ಎಂಬುದಾಗಿ ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ಜಿಲ್ಲಾಧಿಕಾರಿ ಮೂಲಕ ಸೋಮವಾರ ವರದಿ ಸಲ್ಲಿಸಲಾಗಿದೆ.

ವರದಿ ಸಲ್ಲಿಕೆಯಾಗಿರುವ ವಿಚಾರವನ್ನು ತುರ್ತು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಶಾಸಕ ಸಾ.ರಾ.ಮಹೇಶ್, ತಮಗೆ ಲಭಿಸಿರುವ ವರದಿ ಪ್ರತಿಯನ್ನು ಬಿಡುಗಡೆ ಮಾಡಿದರು.

‘ಅನಿತಾ ಮಹೇಶ್ ಹೆಸರಿನಲ್ಲಿ 2–15 ಎಕರೆ ಜಾಗವಿದ್ದು, ಸಾ.ರಾ. ಚೌಲ್ಟ್ರಿಯನ್ನು ಹಳ್ಳ ಪ್ರದೇಶದಿಂದ ಕೆಲವು ಕಡೆ 74, 72, 73 ಮೀಟರ್ ಅಂತರದಲ್ಲಿ ನಿರ್ಮಿಸಿರುವುದು ಕಂಡುಬಂದಿದೆ’ ಎಂದು ಈ ವರದಿಯಲ್ಲಿ ತಿಳಿಸಲಾಗಿದೆ.

ರಾಜಕಾಲುವೆ ಒತ್ತುವರಿ ಮಾಡಿಕೊಂಡು ಸಾ.ರಾ.ಚೌಲ್ಟ್ರಿ ನಿರ್ಮಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್. ಮಂಜುನಾಥಸ್ವಾಮಿ ನೇತೃತ್ವದಲ್ಲಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಅವರು ತಂಡ ರಚಿಸಿದ್ದರು.

‘ರಾಜಕಾಲುವೆ ಒತ್ತುವರಿಯಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಮಾತ್ರ ವರದಿ ನೀಡಲಾಗಿದೆ. ಇತರೆ ವಿಷಯಗಳ ಕುರಿತು ಅಗತ್ಯವಿದ್ದಲ್ಲಿ ಸರ್ವೆ ನಂ. 130/3ರ ಭೂ ಮಾಲೀಕರು ಮತ್ತು ಬಾಜು ಸರ್ವೆ ಸಂಖ್ಯೆಗಳ ಭೂ ಮಾಲೀಕರಿಗೆ ನೋಟಿಸ್ ನೀಡಿ ಹೆಚ್ಚುವರಿ ದಾಖಲೆಗಳನ್ನು ಪರಿಶೀಲಿಸಿ ಅಳತೆ ಕೈಗೊಳ್ಳಬಹುದಾಗಿರುತ್ತದೆ’ ಎಂದು ತಂಡವು ವರದಿಯಲ್ಲಿ ಉಲ್ಲೇಖಿಸಿದೆ.

ಉಪವಿಭಾಗಾಧಿಕಾರಿ ವೆಂಕಟರಾಜು, ತಹಶೀಲ್ದಾರ್ ರಕ್ಷಿತ್, ಭೂ ದಾಖಲೆ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರು ಸರ್ವೆ ಕಾರ್ಯ ನಡೆಸಿದ್ದರು. ಇವರು ನೀಡಿದ ವರದಿಯನ್ನು ಜಿಲ್ಲಾಧಿಕಾರಿ ಪರಿಶೀಲಿಸಿ, ತಮ್ಮ ಟಿಪ್ಪಣಿ ಬರೆದು ಪ್ರಾದೇಶಿಕ ಆಯುಕ್ತರಿಗೆ ಸಲ್ಲಿಸಿದ್ದಾರೆ. ರಾಜಕಾಲುವೆ ಒತ್ತುವರಿ ಮಾಡಿ ಚೌಲ್ಟ್ರಿ ನಿರ್ಮಿಸಲಾಗಿದೆ ಎಂದು ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಆರೋಪಿಸಿದ್ದರು. ಹೀಗಾಗಿ, ತನಿಖೆ ನಡೆಸುವಂತೆ ಸಾ.ರಾ.ಮಹೇಶ್ ಒತ್ತಾಯಿಸಿದ್ದರು. ವರದಿ ಕುರಿತು ಪ್ರತಿಕ್ರಿಯೆಗಾಗಿ ಪ್ರಾದೇಶಿಕ ಆಯುಕ್ತರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಕರೆ ಸ್ವೀಕರಿಸಲಿಲ್ಲ.

ನೀಚ ಕೆಲಸಕ್ಕೆ ಇಳಿದಿದ್ದಾರೆ: ಸಾ.ರಾ.ಮಹೇಶ್

‘ಸಾ.ರಾ.ಚೌಲ್ಟ್ರಿಯನ್ನು ಹಳ್ಳದ ಮೇಲೂ ನಿರ್ಮಿಸಿಲ್ಲ, ಹಳ್ಳದ ಒತ್ತುವರಿಯೂ ನಡೆದಿಲ್ಲ ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆರೋಪ ಮಾಡಿದವರಿಗೆ ಕನಿಷ್ಠ ಪ್ರಜ್ಞೆಯೂ ಇಲ್ಲ. ಬೇರೆ ಯಾವುದೋ ಸರ್ವೆ ನಂಬರ್‌ನ ಮ್ಯಾಪ್‌ಗೆ ಬಣ್ಣ ಹಚ್ಚಿ ಬಫರ್ ಜೋನ್ ಬಿಡದೆ ಒತ್ತುವರಿ ಮಾಡಲಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಇಂಥ ನೀಚ ಕೆಲಸಕ್ಕೆ ಸಿಂಧೂರಿ ಇಳಿದಿದ್ದಾರೆ’ ಎಂದು ಶಾಸಕ ಸಾ.ರಾ.ಮಹೇಶ್ ಹರಿಹಾಯ್ದರು.

ವೇದಾಂತ: ನೌಕರರ ಕುಟುಂಬಕ್ಕೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕ ರೋಗಕ್ಕೆ ಬಲಿಯಾದ ತನ್ನ ವಾಣಿಜ್ಯ ಪಾಲುದಾರರ ಕುಟುಂಬದ ಸದಸ್ಯರಿಗೆ ವೇದಾಂತ ಕಂಪನಿಯು ₹ 10 ಲಕ್ಷ ಪರಿಹಾರ ನೀಡಲಿದೆ. ಅಲ್ಲದೆ, ಮೃತ ನೌಕರರ ಕಡೆಯ ತಿಂಗಳ ಸಂಬಳದ ಮೊತ್ತವನ್ನು ಅವರ ಕುಟುಂಬಕ್ಕೆ, ನೌಕರ ಜೀವಂತವಾಗಿದ್ದಿದ್ದರೆ ಎಷ್ಟು ವರ್ಷ ಕೆಲಸ ಮಾಡುತ್ತಿದ್ದನೋ ಅಷ್ಟು ವರ್ಷದವರೆಗೆ ಕಂಪನಿ ನೀಡಲಿದೆ.

ಮೃತ ನೌಕರರ ಇಬ್ಬರು ಮಕ್ಕಳಿಗೆ ಅವರ ಪದವಿ ಶಿಕ್ಷಣದವರೆಗೆ ಕಂಪನಿ ನೆರವು ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ. ‘ನಮ್ಮ ನೌಕರರು ಹಾಗೂ ವಾಣಿಜ್ಯ ಪಾಲುದಾರರು ನಮ್ಮ ಪಾಲಿನ ಅತಿದೊಡ್ಡ ಸಂಪನ್ಮೂಲ. ಅವರ ಸುರಕ್ಷತೆ ಹಾಗೂ ಕ್ಷೇಮ ನಮಗೆ ಬಹಳ ಮುಖ್ಯ’ ಎಂದು ಕಂಪನಿಯ ಅಧ್ಯಕ್ಷ ಅನಿಲ್ ಅಗರ್ವಾಲ್ ಹೇಳಿದ್ದಾರೆ.

ತನ್ನ ನೌಕರರು ಹಾಗೂ ವಾಣಿಜ್ಯ ಪಾಲುದಾರರಿಗೆ ಲಸಿಕೆ ನೀಡಲು ಕಂಪನಿಯು ಒಟ್ಟು ₹ 12.6 ಕೋಟಿ ವೆಚ್ಚ ಮಾಡುತ್ತಿದೆ.

‘ಕೇಂದ್ರದ ನೀತಿಯಿಂದ ಶ್ರೀಮಂತರ ಆದಾಯ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಗತ್ಯ ವಸ್ತುಗಳ ಬೆಲೆ ಶೇ 40ರಷ್ಟು ಹೆಚ್ಚಾಗಿದೆ. ಬಡವರು ಇನ್ನಷ್ಟು ಬಡತನಕ್ಕೆ ಸಿಲುಕುತ್ತಿದ್ದಾರೆ. ಅದೇ ವೇಳೆ ಶ್ರೀಮಂತರ ಸಂಪತ್ತು ಶೇ 35ರಷ್ಟು ಹೆಚ್ಚಳವಾಗಿದ್ದು, ಅವರು ಇನ್ನಷ್ಟು ಶ್ರೀಮಂತರಾಗಿದ್ದಾರೆ’ ಎಂದು ಕಾಂಗ್ರೆಸ್ ಶಾಸಕ ಅಧ್ಯಕ್ಷ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕುಟುಂಬವೊಂದರ ಜೀವನ ನಿರ್ವಹಣೆಗೆ ಈ ಹಿಂದೆ ₹ 4 ಸಾವಿರ ಸಾಕಾಗುತ್ತಿತ್ತು. ಬೆಲೆ ಏರಿಕೆಯಿಂದ ಅದೀಗ ₹ 10 ಸಾವಿರಕ್ಕೆ ತಲುಪಿದೆ. ಅದಾನಿ ಅವರ ಸಂಪತ್ತು ಕಳೆದೊಂದು ವರ್ಷದಲ್ಲಿ ₹ 3 ಲಕ್ಷ ಕೋಟಿ ಹೆಚ್ಚಾಗಿದೆ’ ಎಂದರು.

‘ತೈಲ ದರ ಇಳಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಇಂಧನ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಜನಸಾಮಾನ್ಯರು ಸುಮ್ಮನೆ ಕುಳಿತುಬಿಟ್ಟಿದ್ದಾರೆ. ಕಾರ್ಮಿಕರ, ಕೃಷಿಕರ, ವ್ಯಾಪಾರಿಗಳ, ಸೇವಾ ವಲಯದಲ್ಲಿ ಇರುವವರ ಆದಾಯ ಕಡಿಮೆಯಾಗುತ್ತಿದೆ. ಕಾರ್ಪೊರೇಟ್ ಕಂಪನಿಗಳಿಗೆ ತೆರಿಗೆ ವಿನಾಯಿತಿ ನೀಡಿರುವ ಕೇಂದ್, ಬಡವರಿಗೆ ಯಾವುದೇ ವಿನಾಯಿತಿ ನೀಡಿಲ್ಲ’ ಎಂದು ದೂರಿದರು.

ದಿನೇಶ್ ಗುಂಡೂರಾವ್

‘ಜನರು ಜೀವನ ನಿರ್ವಹಿಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ವಿದ್ಯುತ್ ಶುಲ್ಕಹೆಚ್ಚಿಸಿದೆ. ರಸಗೊಬ್ಬರದ ಬೆಲೆ ಹೆಚ್ಚಳವಾಗಿದೆ. ಇಂಥ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರ ಸಹಾಯಕ್ಕೆ ನಿಲ್ಲಬೇಕು. ಪ್ರತಿಯೊಬ್ಬ ಬಿಪಿಎಲ್ ಕಾರ್ಡ್‌ದಾರರಿಗೆ ತಲಾ ₹ 10 ಸಾವಿರ ಪರಿಹಾರ ನೀಡಬೇಕು. ಆಸ್ತಿ ತೆರಿಗೆ ಪಾವತಿದಾರರಿಗೆ ಶೇ 50ರಷ್ಟು ವಿನಾಯಿತಿ ನೀಡಬೇಕು’ ಎಂದು ಒತ್ತಾಯಿಸಿದರು.

ನಗರದಲ್ಲಿ ಇಂದು

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವೈದ್ಯರಿಗೆ ಸನ್ಮಾನ ಹಾಗೂ ಶುಶ್ರೂಷಕರು, ಆಶಾ ಕಾರ್ಯಕತರಿಗೆ ದಿನಸಿ ಕಿಟ್ ವಿತರಣೆ: ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಸಂಸದ ಡಿ.ಕೆ. ಸುರೇಶ್, ಬಿ.ವಿ.ಶ್ರೀನಿವಾಸ್, ರಕ್ಷಾ ರಾಮಯ್ಯ, ಜಿ.ಕೃಷ್ಣಪ್ಪ, ಸ್ಥಳ–ಲಯೋಲ ಕಾಲೇಜು, ಕಾಳೇನ ಅಗ್ರಹಾರ, ಬನ್ನೇರು ಘಟ್ಟ ಮುಖ್ಯರಸ್ತೆ, ಮಧ್ಯಾಹ್ನ 3.

ಇತ್ತೀಚೆಗೆ ನಿಧನರಾದ ಎಚ್.ಎಸ್. ದೊರೆಸ್ವಾಮಿ, ಸಿದ್ದಲಿಂಗಯ್ಯ, ಜರಗನಹಳ್ಳಿ ಶಿವಶಂಕರ್ ಅವರಿಗೆ ನುಡಿ ನಮನ: ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ,ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕವಿ ದೊಡ್ಡರಂಗೇಗೌಡ, ಮನು ಬಳಿಗಾರ್, ಆಯೋಜನೆ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ, ಮಧ್ಯಾಹ್ನ 3.30.

ಮೂಡ್ನಾಕೂಡು ಚಿನ್ನಸ್ವಾಮಿ

‘ಬಸವ – ಅಂಬೇಡ್ಕರ್–ಅನನ್ಯತೆಯ ನೆಲೆಗಳು’ ವಿಚಾರ ಸಂಕಿರಣ: ಉದ್ಘಾಟನೆ–ಬಿಎಂಎಸ್ ಮಹಿಳಾ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಶೀಲಾದೇವಿ ಎಸ್. ಮಳಿಮಠ, ಅತಿಥಿ–ಶಿವಪ್ರಕಾಶ್, ವಿಚಾರ ಮಂಡನೆ–ಗೋಪಾಲ್, ಸುಬ್ರಹ್ಮಣ್ಯ ಸ್ವಾಮಿ, ಭಾಗವಹಿಸುವವರು–ಸೌಂದರ್ಯ ಪಿ. ಮಂಜಪ್ಪ, ಎನ್.ಸಂಜೀವ್ ರಾಜ್, ಭೀಮ್ ನೀಲಕಂಠರಾವ್ ಹಂಗರಗೆ, ಆಯೋಜನೆ–ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಸೈನ್ಸ್ ಕಾಲೇಜು, ಬೆಂಗಳೂರು ವಿ.ವಿಯ ಅಂಬೇಡ್ಕರ್ ಅಧ್ಯಯನ ಕೇಂದ್ರ, ಬಸವಬಳಗ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ವಿಶ್ವ ಯೋಗ ದಿನದ ಅಂಗವಾಗಿ ಉಪನ್ಯಾಸ ಸರಣಿ: ವಿಷಯ–ಸಮಾಜ ಯೋಗ, ಮಾತನಾಡುವವರು–ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕ ಜಿ.ಬಿ ಹರೀಶ್, ಆಯೋಜನೆ–ರಾಷ್ಟ್ರೋತ್ಥಾನ ಪರಿಷತ್, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ಸನ್ನದು ಶುಲ್ಕ: ಕಂತುಗಳಲ್ಲಿ ಪಾವತಿಸಲು ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಉತ್ಪಾದನೆ ಮತ್ತು ಮಾರಾಟ ಸನ್ನದು ನವೀಕರಣ ಶುಲ್ಕವನ್ನು ಎರಡು ಕಂತುಗಳಲ್ಲಿ ಪಾವತಿಸಲು ಸರ್ಕಾರ ಅನುಮತಿ ನೀಡಿದೆ.

ಈ ಸಂಬಂಧ ಅಬಕಾರಿ ಇಲಾಖೆ ಸುತ್ತೋಲೆ ಹೊರಡಿಸಿದ್ದು, ನವೀಕರಣ ಶುಲ್ಕ ಮತ್ತು ಹೆಚ್ಚುವರಿ ಶುಲ್ಕಗಳಲ್ಲಿ ಶೇ 50ರಷ್ಟನ್ನು ಜೂನ್ 30ರೊಳಗೆ, ಉಳಿದ ಶೇ 50ರಷ್ಟನ್ನು ಡಿಸೆಂಬರ್ 31ರೊಳಗೆ ಪಾವತಿಸುವುದು ಕಡ್ಡಾಯ ಎಂದು ತಿಳಿಸಿದೆ.

ಪ್ರಾತಿನಿಧಿಕ ಚಿತ್ರ

2020–21ನೇ ಅಬಕಾರಿ ಸಾಲಿನ ಸನ್ನದುಗಳ ಅವಧಿ ಜೂ.30ಕ್ಕೆ ಮುಕ್ತಾಯಗೊಳ್ಳಲಿದೆ. ನಿಗದಿತ ಶುಲ್ಕ ಪಾವತಿಸಿ 2021–22ನೇ ಸಾಲಿನ ಸನ್ನದು ನವೀಕರಣ ಮಾಡಿಕೊಳ್ಳಬೇಕಿದೆ. ಲಾಕ್‌ಡೌನ್ ಇದ್ದ ಕಾರಣ ಮದ್ಯ ತಯಾರಿಕೆ ಮತ್ತು ಮಾರಾಟ ವಹಿವಾಟು ಕುಂಠಿತವಾಗಿದೆ. ಹೀಗಾಗಿ, ಎರಡು ಕಂತುಗಳಲ್ಲಿ ಪಾವತಿಸಲು ಅನುಮತಿ ನೀಡುವಂತೆ ‘ದಿ ಕರ್ನಾಟಕ ಬ್ರೀವರ್ಸ್ ಮತ್ತು ಡಿಸ್ಟಿಲರ್ಸ್ ಅಸೋಸಿಯೇಷನ್, ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ ಮನವಿ ಸಲ್ಲಿಸಿತ್ತು.

‘ವಹಿವಾಟು ಕುಸಿತಗೊಂಡು ಮದ್ಯ ಮಾರಾಟಗಾರರು ಸಂಕಷ್ಟದಲ್ಲಿದ್ದರು. ಎರಡು ಕಂತುಗಳಲ್ಲಿ ನವೀಕರಣ ಶುಲ್ಕ ಪಾವತಿಗೆ ಸರ್ಕಾರ ಅನುಮತಿ ನೀಡಿರುವುದರಿಂದ ಅನುಕೂಲವಾಗಿದೆ’ ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಗೋವಿಂದರಾಜ್ ಹೆಗ್ಡೆ ಅವರು ತಿಳಿಸಿದರು.

ಕೋವಿಡ್ ಕಾಲದಲ್ಲಿ ಜನಸೇವೆಯಲ್ಲಿ ನಿರತವಾಗಿರುವ ರಾಜಕಾರಣಿ ಕುಟುಂಬ

ಪುಟ್ಟನರಸಮ್ಮ ಆರೋಗ್ಯ ಕೇಂದ್ರದಿಂದ ಉಚಿತ ಸೇವೆ

• ಮಹಾಂತೇಶ್ ನೆಗಳೂರ

ನೆಲಮಂಗಲ: ಆಸ್ಪತ್ರೆ ನಿರ್ಮಿಸುವುದೇ ವ್ಯಾಪಾರಕ್ಕಾಗಿ, ವೈದ್ಯರಾಗುವುದೇ ಹಣ ಗಳಿಸುವುದಕ್ಕಾಗಿ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಇಲ್ಲಿಗೆ ಸಮೀಪದ ಅಡಕಿಮಾರನಹಳ್ಳಿಯಲ್ಲಿರುವ ‘ಪುಟ್ಟನರಸಮ್ಮ ಆರೋಗ್ಯ ಕೇಂದ್ರ’ವು ಸುತ್ತಮುತ್ತಲ ಗ್ರಾಮಸ್ಥರಿಗೆ ಉಚಿತ ಆರೋಗ್ಯ ಸೇವೆ ಒದಗಿಸುತ್ತಿದೆ.

ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ ಅವರು ತಮ್ಮ ತಾಯಿ ಪುಟ್ಟನರಸಮ್ಮ ಅವರ ಸ್ಮರಣಾರ್ಥ ಸಾಯಿ ಧಾಮ ಟ್ರಸ್ಟ್‌ನ ಏಕಶಿಲಾ ಆಂಜನೇಯ ದೇವಸ್ಥಾನದ ಹಿಂಭಾಗ ಉಚಿತ ಆರೋಗ್ಯ ಕೇಂದ್ರವನ್ನು ನಿರ್ಮಿಸಿದ್ದಾರೆ. ಸೊಸೆ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ.ಪ್ರಕೃತಿ ತಮ್ಮ ತಂಡದೊಂದಿಗೆ ಜನರಿಗೆ ಜನವರಿಯಿಂದ ಉಚಿತ ಚಿಕಿತ್ಸೆ ನೀಡುತ್ತಿದ್ದಾರೆ. ಅವರ ಮಗ ಎ.ಜಿ.ಶಿವಕುಮಾರ್ ಅವರು ಕೇಂದ್ರದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಅವರ ಇಡೀ ಕುಟುಂಬವೇ ಆರೋಗ್ಯ ಸೇವೆಯಲ್ಲಿ ನಿರತವಾಗಿದೆ.

ಪುಟ್ಟನರಸಮ್ಮ ಉಚಿತ ಆರೋಗ್ಯ ಕೇಂದ್ರ.

ಆರೋಗ್ಯ ಕೇಂದ್ರದಲ್ಲಿ ಪ್ರಯೋಗಾಲಯ, ಔಷಧಾಲಯ, ಮೂರು ಹಾಸಿಗೆಗಳಿವೆ. ಡಾ.ಪ್ರಕೃತಿ ಸೇರಿದಂತೆ ಡಾ.ದಿವಾಕರ್, ಡಾ.ಅಶ್ವತ್ಥನಾರಾಯಣ ಗೌಡ, ಇಬ್ಬರು ಶುಶ್ರೂಷಕಿಯರು, ಒಬ್ಬ ಪ್ರಯೋಗಾಲಯ ತಂತ್ರಜ್ಞ, ಸ್ವಾಗತಕಾರರು, ಇಬ್ಬರು ಸಾರ್ವಜನಿಕ ಸಂಪರ್ಕಾಧಿಕಾರಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ. ಪ್ರಕೃತಿ, ‘ವೈದ್ಯ ಪದವಿ ಪಡೆದಿರುವುದೇ ಜನ ಸೇವೆ ಮಾಡುವುದಕ್ಕಾಗಿ. ನನ್ನ ಮಾವನವರು ಆಸ್ಪತ್ರೆ ನಿರ್ಮಿಸಿ ಕೊಟ್ಟಿದ್ದಾರೆ. ಇದರ ನಿರ್ವಹಣೆಗೆ ತಿಂಗಳಿಗೆ ಅಂದಾಜು ₹ 4ಲಕ್ಷ ನಿರ್ವಹಣಾ ವೆಚ್ಚ ತಗುಲುತ್ತಿದ್ದು ಅದನ್ನು ಇ.ಕೃಷ್ಣಪ್ಪ ಅವರೇ ಭರಿಸುತ್ತಿದ್ದಾರೆ’ ಎಂದರು.

ಡಾ.ಪ್ರಕೃತಿ



ಇ. ಕೃಷ್ಣಪ್ಪ

ಎ.ಜಿ. ಶಿವಕುಮಾರ

ಎ.ಜಿ.ಶಿವಕುಮಾರ, ‘ಚಿಕ್ಕಪ್ಪನವರ ಆಶಯದಂತೆ ಚಿಕಿತ್ಸೆ, ಪ್ರಯೋಗಾಲಯ ಸೌಲಭ್ಯ, ಔಷಧ ಎಲ್ಲವನ್ನೂ ಉಚಿತವಾಗಿ ನೀಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ 10 ಸಾವಿರ ಚದರ ಅಡಿ ಜಾಗದಲ್ಲಿ 25 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಆರಂಭಿಸಲು ಯೋಜಿಸಿದ್ದೇವೆ. ಇಲ್ಲಿ ನಿತ್ಯ 150ಕ್ಕೂ ಹೆಚ್ಚು ಗ್ರಾಮಸ್ಥರು ಆರೋಗ್ಯ ಸೇವೆ ಪಡೆಯುತ್ತಾರೆ. ಅವರಲ್ಲಿ ಊರಿನ ಬಡವರು, ಕೂಲಿ ಕಾರ್ಮಿಕರು, ಅಪಘಾತಕ್ಕೀಡಾದವರು, ಸುತ್ತಮುತ್ತಲ ಗೋದಾಮುಗಳ ನೌಕರರೇ ಹೆಚ್ಚಾಗಿ ಇದರ ಪ್ರಯೋಜನ ಪಡೆಯುತ್ತಿದ್ದಾರೆ’ ಎಂದರು.

ನಿಧನ ವಾರ್ತೆ

ಚಂದ್ರಶೇಖರ್

ಬೆಂಗಳೂರು: ಹಿರಿಯ ಚಿತ್ರ ನಿರ್ಮಾಪಕ, ಪ್ರದರ್ಶಕ ಕೆ.ಸಿ.ಎನ್. ಚಂದ್ರಶೇಖರ್ (69) ಸೋಮವಾರ ನಿಧನರಾದರು.

'ಬಬ್ರುವಾಹನ', 'ದಾರಿ ತಪ್ಪಿದ ಮಗ', 'ಹುಲಿಯ ಹಾಲಿನ ಮೇವು', 'ಅಂತ' ಸೇರಿ ಐವತ್ತಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದ ಅವರು ಬೆಂಗಳೂರು, ದೊಡ್ಡಬಳ್ಳಾಪುರದ ಒಟ್ಟು 5 ಚಿತ್ರಮಂದಿರಗಳ ಮಾಲೀಕರಾಗಿದ್ದರು. ತಂದೆ ಕೆ.ಸಿ.ಎನ್. ಗೌಡರೂ ಚಿತ್ರ ವಿತರಕರಾಗಿದ್ದರು. ಅವರ ಮಾರ್ಗದರ್ಶನದಲ್ಲಿ 500ಕ್ಕೂ ಹೆಚ್ಚು ಚಿತ್ರಗಳ ವಿತರಕರಾಗಿದ್ದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಎರಡು ಬಾರಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಗೆ ಎರಡು ಬಾರಿ ಅಧ್ಯಕ್ಷರಾಗಿದ್ದರು. ಸೆನ್ಸಾರ್ ಮಂಡಳಿಯ ಸದಸ್ಯರಾಗಿ ಎಂಟು ವರ್ಷ ಕಾಲ ಕಾರ್ಯನಿರ್ವಹಿಸಿದ್ದರು. ಮುಂಬೈನ ಭಾರತೀಯ ಚಲನಚಿತ್ರ ಒಕ್ಕೂಟದ ಉಪಾಧ್ಯಕ್ಷರಾಗಿದ್ದರು. ಪನೋರಮಾ ಹಾಗೂ ರಾಜ್ಯ ಚಲನ ಚಿತ್ರ ಪ್ರಶಸ್ತಿ ಸಮಿತಿ ತೀರ್ಪುಗಾರಾಗಿದ್ದರು. ಡಾ.ರಾಜ್ ಕುಟುಂಬಕ್ಕೆ ಆಪ್ತರಾಗಿದ್ದರು. ಶೇಷಾದ್ರಿಪುರದ ಶಿಕ್ಷಣ ದತ್ತಿಯ ಉಪಾಧ್ಯಕ್ಷರಾಗಿದ್ದರು.

ಅವರಿಗೆ ಇಬ್ಬರು ಪುತ್ರಿಯರು ಹಾಗೂ ಪುತ್ರ, ನಿರ್ಮಾಪಕ ಕೆ.ಸಿ.ಎನ್. ಮೋಹನ್ ಇದ್ದಾರೆ. ಸೋಮವಾರ ಅಂತ್ಯಕ್ರಿಯೆ ನಡೆಯಿತು.

ಸುತ್ತೂರು ಶ್ರೀಗಳ ಪೂರ್ವಾಶ್ರಮದ ತಾಯಿ ಶಿವನಾಗಮ್ಮ

ಮೈಸೂರು: ಸುತ್ತೂರು ಶ್ರೀಗಳ ಪೂರ್ವಾಶ್ರಮದ ತಾಯಿ, ವಕೀಲರಾಗಿದ್ದ ದಿವಂಗತ ಎಸ್.ಎಂ.ಪ್ರಭುಸ್ವಾಮಿ ಅವರ ಪತ್ನಿ ಶಿವನಾಗಮ್ಮ (90) ಸೋಮವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ನಾಲ್ವರು ಪುತ್ರರು ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಎಸ್.ಪಿ.ಶಶಿಕಲಾ ಹಾಗೂ ಪ್ರೊ.ಎಸ್.ಪಿ.ಉಮಾದೇವಿ ಪುತ್ರಿಯರು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಷಡಕ್ಷರಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಹಾಗೂ ಸುತ್ತೂರು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಉದಯ ಶಂಕರ್ ಪುತ್ರರು.

ಮೈಸೂರು ಜಿಲ್ಲೆಯ ಸುತ್ತೂರಿನ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಸುತ್ತೂರು ಮಠದ ಮೂಲಗಳು ತಿಳಿಸಿವೆ.

ನಿಜಲಿಂಗಪ್ಪ ಪುತ್ರಿ ಗೌರಮ್ಮ

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಮೂರನೇ ಪುತ್ರಿ ಪಿ.ಗೌರಮ್ಮ (85) ಅನಾರೋಗ್ಯದಿಂದ ಬೆಂಗಳೂರಿನಲ್ಲಿ ನಿಧನರಾದರು.

ಇವರಿಗೆ ಇಬ್ಬರು ಪುತ್ರ ಹಾಗೂ ಒಬ್ಬ ಪುತ್ರಿ ಇದ್ದಾರೆ. ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಗಿದೆ ಎಂದು ಕುಟುಂಬದ ಮೂಲಗಳು ಮಾಹಿತಿ ನೀಡಿವೆ.

ಎಸ್.ವಿ.ಪರಮೇಶ್ವರಪ್ಪ ಅವರನ್ನು ವಿವಾಹವಾಗಿದ್ದ ಗೌರಮ್ಮ ಬೆಂಗಳೂರಿನ ವಿದ್ಯಾರಣ್ಯಪುರಂನಲ್ಲಿ ನೆಲೆಸಿದ್ದರು.

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ ಧಾರವಾಡ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ, ವಿಭಾಗ, ಧಾರವಾಡ

ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.1/ಇ–ಟೆಂಡರ/2021–22/390

ದಿನಾಂಕ : 10–06–2021

ಅಲ್ಪಾವಧಿ ಟೆಂಡರ ಮುಂದೂಡಿಕೆ ಪ್ರಕಟಣೆ /2021–22 (ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ : ಅಲ್ಪಾವಧಿ ಟೆಂಡರ 3, 4, 5 ಹಾಗೂ 6ನೇ ಕರೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯಿಂದ ಪ್ರಕಟಿಸಿದ ಧಾರವಾಡ ಹಾಗೂ ಕುಂದಗೋಳ ತಾಲೂಕಿನ ಈ ಕೆಳಗಿನ ಕಾಮಗಾರಿಗಳ ಟೆಂಡರ 3, 4, 5 ಹಾಗೂ 6 ನೇ ಕರೆ ದಿನಾಂಕವನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಧಾರವಾಡ ತಾಲೂಕ : Indent No. 28524, 32624, 28512, 28302, 28422, 32574, 28500, 26537, 28514, 28582.

ಕುಂದಗೋಳ ತಾಲೂಕ : Indent No. 27832, 27862

ಗುತ್ತಿಗೆದಾರರ ಅರ್ಹತೆ : ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಗುತ್ತಿಗೆ ಕಾರ್ಯಕ್ರಮದ ವಿವರಗಳು ಇಂತಿವೆ (Calander of Events) (1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೊಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ, ಸಲ್ಲಿಸುವ ದಿನಾಂಕ : **22–06–2021** ಸಾಯಂಕಾಲ 4.00 ಘಂಟೆಯವರೆಗೆ (2) ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : **23–06–2021** ಸಾಯಂಕಾಲ 4.30 ಘಂಟೆಗೆ

ಟೆಂಡರ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು.

ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.

ನಂ.ವಾಸಾಸಂಇ/ಧಾ/ಎಂಸಿಎ/170/2021–22

ಕರ್ನಾಟಕ ಸರಕಾರ

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

(ಸ್ವಾಯತ್ತ ಸಂಸ್ಥೆ)

ಡಾ|| ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ–590 001, (ಆಸ್ಪತ್ರೆ) ದೂರವಾಣಿ ಸಂಖ್ಯೆ: 0831–2420320, ಫ್ಯಾಕ್ಸ್ ಸಂ: 0831–2420173 (ಕಾಲೇಜ) ದೂರವಾಣಿ ಸಂಖ್ಯೆ: 0831–2421464 ಫ್ಯಾಕ್ಸ್ ಸಂ: 0831–2403126

ವೆಬ್‌ಸೈಟ್: www.bimsbelgaum.org ಇ–ಮೇಲ್ : belgaum.bims@gmail.com

ಸಂ: ಬಿಮ್ಸ್/ಟೆಂಡರ್/ನಿರ್ವಹಣೆ/ಸಿಆರ್/–02/2021–22 ದಿನಾಂಕ: 14–06–2021

SHORT TERM TENDER NOTIFICATION

(ಅಲ್ಪಾವಧಿ ಟೆಂಡರ್) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ ಇಲ್ಲಿಗೆ ನೋಂದಾಯಿತ ಮಾನವ ಸಂಪನ್ಮೂಲ ಗುತ್ತಗೆದಾರರಿಂದ ಹೊರಗುತ್ತಿಗೆ ಒಪ್ಪಂದದ ಮೇರೆಗೆ ಈ ಕೆಳಗೆ ನಮೂದಿಸಿದ ಸಿಬ್ಬಂದಿಯವರನ್ನು ಒದಗಿಸಲು 11 ತಿಂಗಳ ಅವಧಿಗೆ ಪೂರೈಸಲು ಈ ಕೆಳ ಕಾಣಿಸಿದಂತೆ ಕೆ.ಟಿ.ಪಿ.ಪಿ. ನಿಯಮಾವಳಿ 1999 & 2000 ಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಇ–ಟೆಂಡರ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

Sl. No.	TENDER NOTIFICATION	Description of Tender	Tender Value (Approximate) (Rs. In Lakhs)	Downloading of Tender Document
1	No: BIMS/Tender/ office Services/CR-02/2021-22	Office Services (59 Posts)	Rs: 98.50 Lakhs	15-06-2021

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://www.e-proc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್‌ನ್ನು ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

DIPO/RO No. 179/2021-22

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ–04/2021–22 ದಿನಾಂಕ: 11.06.2021 (ದ್ವಿ–ಲಕೋಟೆ ಪದ್ಧತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಐಟಂವಾರು ಟೆಂಡರ್‌ನ್ನು ಕರ್ನಾಟಕ ಲೋಕೋಪಯೋಗಿ/ ಕೇಂದ್ರ ಲೋಕೋಪಯೋಗಿ/ ಜಲ ಸಂಪನ್ಮೂಲ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಒಂದನೇ ದರ್ಜೆಯಲ್ಲಿ ಹಾಗೂ ಕಾವೇರಿ ನೀರಾವರಿ ನಿಗಮದಲ್ಲಿ ಒಂದನೇ 'ಎ' ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ, ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ. Remodelling of Tumkur branch canal from Ch: 70.360 Km to 166.90 Km (CNNL/2020-21/CN/WORK_INDENT - 34342) ಟೆಂಡರ್ ಮೊತ್ತ **ರೂ. 478.06/–** ಕೋಟಿಗಳು, ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿ–24 ತಿಂಗಳು (ಮಳೆಗಾಲ ಮತ್ತು ನಾಲೆಯಲ್ಲಿ ನೀರು ಹರಿಯುವ ಸಮಯವನ್ನು ಒಳಗೊಂಡಂತೆ) ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **15.06.2021** ರಿಂದ **22.06.2021** ಸಂಜೆ 4.00 ಗಂಟೆ ರವರೆಗೆ, ಪ್ರಿ–ಬಿಡ್ ಮೀಟಿಂಗ್ ದಿನಾಂಕ: **18.06.2021** ಬೆ:11.00. ಮುಖ್ಯ ಅಭಿಯಂತರವರ ಕಛೇರಿ, ಹೇಮಾವತಿ ನಾಲಾ ವಲಯ, ಕುಣಿಗಲ್ ರಸ್ತೆ, ತುಮಕೂರು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23.06.2021** ಸಂಜೆ 5.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.06.2021** ಬೆ: 10.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ) ಇ.ಎಂ.ಡಿ ವಿವರ, ಕಾಮಗಾರಿಯ ವಿವರ, ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ https://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/91/MCA/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 08212420810

ಅಲ್ಪಾವಧಿ ಐಟಂವಾರ್ ಟೆಂಡರು ಅಧಿಸೂಚನೆ ಸಂ. 04/2021–22; ದಿನಾಂಕ: 11.06.2021

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ **ನಂಜನಗೂಡು ತಾಲ್ಲೂಕಿನಲ್ಲಿ ಕಾಮಗಾರಿಗೆ** ಕೆ.ಡಬ್ಲ್ಯೂ–4 ನಿಬಂಧನೆ ಮತ್ತು ಷರತ್ತುಗಳನ್ವಯ ಐಟಂವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(http://eproc.karnataka.gov.in)** ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯ ಕಾಮಗಾರಿಗೆ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:30.06.2021ರ ಸಂಜೆ: 16.00 ಗಂಟೆ** ಆಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 200.00 ಲಕ್ಷಗಳು ಹಾಗೂ ಇ.ಎಂ.ಡಿ ರೂ.3.00 ಲಕ್ಷಗಳಾಗಿರುತ್ತದೆ. 3ನೇ **ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು** ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವವರು ಭಾಗವಹಿಸಬಹುದು. ಕಾಮಗಾರಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ ಕಛೇರಿಯ ಇ–ಮೇಲ್ **(eemys@kpwd.gov.in)** ಮೂಲಕ ಪಡೆಯಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(http://eproc.karnataka.gov.in)** ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ. 49, ಪರಿಸರ ಭವನ, 1ರಿಂದ 5ನೇ ಮಹಡಿಗಳು, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001, ಕರ್ನಾಟಕ, ಭಾರತ. ದೂರವಾಣಿ : 080–25581383, 25589112, 25588151, 25588270, 25588142, 25586520 ಫ್ಯಾಕ್ಸ್:080–25586321,

ಇ–ಮೇಲ್ : ho@kspcb.gov.in ವೆಬ್‌ಸೈಟ್ : http://kspcb.gov.in

ಸಂ.: ಪಿಸಿಬಿ/ಐಎನ್‌ಎಫ್‌ಆರ್‌ಎ/2021–22/709 ದಿನಾಂಕ:11.06.2021

ಅಲ್ಪಾವಧಿ ಟೆಂಡರ್ ವಿಧಾನದ ಮೂಲಕ ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ (ಇಓಐ)

(ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ www.eproc.karnataka.gov.in ಮೂಲಕ)

ವಾಯುಮಾಲಿನ್ಯ ಕಡಿಮೆ ಮಾಡುವಿಕೆ ವಿಚಾರದ ಸಂಬಂಧದಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ನೀಡಿರುವ ನಿರ್ದೇಶನಗಳ ಅನುಸಾರ ಡೀಸೆಲ್ ಜನರೇಟರ್‌ಗಳು ಮತ್ತು ಭಾರೀ ವಾಹನಗಳ ರೆಟ್ರೊ ಫಿಟ್ಟಿಂಗ್ ಮಾಡಲು ಲಭ್ಯವಿರುವ ತಂತ್ರಜ್ಞಾನವನ್ನು ಪರಿಶೀಲಿಸಲು ಅರ್ಹ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಕರಾಮಾನಿಮಂ ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ಪರಿವೀಕ್ಷಿಸಿ.

ಸಹಿ/- ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.

ಸಂಖ್ಯೆ: ಉಗ್ರಾಣ/Covid-19/42/2021–22 ದಿನಾಂಕ: 12.06.2021

ಇ–ಪ್ರಕ್ಯೂರಮೆಂಟ್ ಟೆಂಡರ್ ಅಧಿಸೂಚನೆ

ಕೋವಿಡ್–19ಗೆ ಸಂಬಂಧಪಟ್ಟಂತೆ, Tablets, Injectables & Fluids ಗಳನ್ನು ಕೊಪ್ಪಳ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ.

1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : **24.06.2021 ರಂದು ಸಾಯಂಕಾಲ 5–00 ಗಂಟೆಯೊಳಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **26.06.2021 ರಂದು ಬೆಳಿಗ್ಗೆ 11–00 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **28.06.2021 ರಂದು ಬೆಳಿಗ್ಗೆ 11–00 ಗಂಟೆಗೆ.** E-Mail:dhokoppal@gmail.com

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.

ಡಿಐಪಿಆರ್/ಕೊಪ್ಪಳ/110/ಎಂಸಿಎ/2021–22

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ

ಕಾರ್ಯನಿರ್ವಾಹಕ ಇಂಜಿನೀಯರ್‌ರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ

ಸಂ: ಕಾನಿಇಂ/ಪಂರಾಇಂ/ವಿಕೊ/:ಟೆಂ/2021–22/379 ದಿನಾಂಕ : 09.06.2021

ಟೆಂಡರ್ ಪಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW- 1,2,3 ಮತ್ತು 4 ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 5054, ಆರ್.ಎಮ್.ಎಸ್.ಎ, ಜಲಾಮೃತ ಮತ್ತು ರಾಜ್ಯ ವಲಯ ಯೋಜನೆಯಡಿ ಅನುದಾನದ ಅಡಿಯಲ್ಲಿನ ಕೊಪ್ಪಳ ಜಿಲ್ಲೆ ಯಲಬುರ್ಗಾ, ಕುಷ್ಟಗಿ, ಕೊಪ್ಪಳ ಮತ್ತು ಗಂಗಾವತಿ ತಾಲೂಕಿನ ರಸ್ತೆ ಕಾಮಗಾರಿ / ಕೆರೆ ಅಭಿವೃದ್ಧಿ/ ಶಾಲಾ ಕಟ್ಟಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ **http://eproc.karnataka.gov.in** ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 15.06.2021 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ : ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : **ರಸ್ತೆ ಹಾಗೂ ಕೆರೆ ಕಾಮಗಾರಿಗಳಿಗೆ 06 ತಿಂಗಳು.** ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : **14.06.2021 ಸಮಯ 16:00 ಗಂಟೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **23.06.2021 ಸಮಯ 16:00 ಗಂಟೆ.** ಟೆಂಡರ್ ತೆರೆಯುವ ದಿನಾಂಕ **:25..06.2021 ಕಚೇರಿ ಸಮಯದಲ್ಲಿ.** ಕೆಡಬ್ಲ್ಯೂ 4 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ.ವಿಭಾಗ,ಕೊಪ್ಪಳ

ಡಿಐಪಿಆರ್/ಕೊಪ್ಪಳ/108/ಎಂಸಿಎ/2021–22

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಇವರ ಕಚೇರಿ, ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ವಿವ–1/2021–22 ದಿನಾಂಕ: 09–06–2021

ಪ್ರಕಟಣೆ

5 ಅರಣ್ಯ ವ್ಯವಸ್ಥಾಪನಾಧಿಕಾರಿ (FOREST SETTLEMENT OFFICER) ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 171 ಅಪಸೆ 2018, ಬೆಂಗಳೂರು ದಿನಾಂಕ: 31.07.2019 ರಂತೆ ಅರಣ್ಯ ಇಲಾಖೆಯಲ್ಲಿ **10 ಅರಣ್ಯ ವ್ಯವಸ್ಥಾಪನಾಧಿಕಾರಿ (Forest Settlement Officer)** ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಕ್ರಮವಾಗಿ ದಿನಾಂಕ: 20.08.2019, 15.11.2019 ಹಾಗೂ 01.04.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಗಳಲ್ಲಿ ನಿಗಧಿಪಡಿಸಿದ ಅರ್ಹತೆಯಂತೆ 5 ಹುದ್ದೆಗಳಿಗೆ ಮಾತ್ರ ಅರ್ಹ ಅರ್ಜಿದಾರರು ಲಭ್ಯವಾಗಿರುತ್ತದೆ. **ಉಳಿದಂತೆ 5 ಹುದ್ದೆಗಳ ಭರ್ತಿಗಾಗಿ ನೇಮಕಾತಿ ಅಧಿಸೂಚನೆಯನ್ನು** ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾಗಿದೆ.

ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾದ ಅಧಿಸೂಚನೆಯ ಅನುಬಂಧದಲ್ಲಿನ ಕರ್ತವ್ಯಗಳನ್ನು ನಿರ್ವಹಿಸಲು **ನಿವೃತ್ತ ಕೆ.ಎ.ಎಸ್. ಅಧಿಕಾರಿಗಳಿಂದ (ನಿವೃತ್ತ ಸಹಾಯಕ ಆಯುಕ್ತರು (ಕಂದಾಯ))** ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಹಾಗೂ ಮುದ್ದಾಂ ಆಗಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003 ರವರ ಕಚೇರಿಗೆ ದಿನಾಂಕ: **15.06.2021 ರಿಂದ 15.07.2021ರ ಸಂಜೆ 4.30 ಗಂಟೆಯೊಳಗಾಗಿ** ಸಲ್ಲಿಸಬಹುದಾಗಿರುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್: **www.aranya.gov.in** ಅನ್ನು ನೋಡಬಹುದು.

ಬೆಂಗಳೂರು
ದಿನಾಂಕ: 09.06.2021

ಸಹಿ/– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು)

DIPR/DDU/YC/506/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

BANGALORE UNIVERSITY

NAAC Accredited with 'A' GRADE

Jnana Bharathi Campus, Bengaluru – 560 056

No. EST-II:TP:Remaining BL(14):NOTIFICATION:2017-18 Dated: 14.06.2021

NOTIFICATION (Re-Advertisement)

Sub: Filling up of Backlog Teaching vacancies – reg.

Ref:
1. G.O. No. DPAR 13 SBC 2001, Dated 21.11.2001 and 01.06.2002
2. University Notification No. EST-II:TP:NOTI:2017-18,dated 21.03.2018.
3. W.P No. 21973/2019(S-Reg.) filed by Dr. C M Ravi kumar and Others
4. U.O.No.EST-IIE3:UGC:REVISEDPAYASCALES:2019, Dated: 13.05.2019 and 09.04.2020
5. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06.07.2020.
6. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಆಇ 03 ಬಿಇ ಎಂ 2020, (ಭಾಗ), ದಿನಾಂಕ: 30.03.2021.
7. ಸರ್ಕಾರದ ಉಪ ಕಾರ್ಯದರ್ಶಿ–1, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಇವರ ಅ.ಸ.ಪತ್ರ, ಸಂಖ್ಯೆ: ಸಕಇ 03 ಎಸ್‌ಟಿಸಿ 2021, ದಿನಾಂಕ: 15.04.2021.
8. ಬೆಂ.ವಿ.ವಿ ಪತ್ರ ಸಂಖ್ಯೆ: ಸಿಬ್ಬಂದಿ ವಿಭಾಗ–2:ಇ9:ಬ್ಯಾಕ್‌ಲಾಗ್ ನೇರ ನೇಮಕಾತಿ: 2021–22. ದಿನಾಂಕ: 17.04.2021.
9. ಸರ್ಕಾರದ ಉಪ ಕಾರ್ಯದರ್ಶಿ–1, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಇವರ ಅ.ಸ.ಪತ್ರ, ಸಂಖ್ಯೆ: ಇಡಿ 4 ಯುಬಿವಿ 2020, ದಿನಾಂಕ: 20.04.2021.
10. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಇವರ ಅ.ಸ.ಪತ್ರ, ಸಂಖ್ಯೆ: ಇಡಿ 4 ಯುಬಿವಿ 2020, ದಿನಾಂಕ: 29.04.2021.
11. SLP (C) No: 5972-5973/2021 in the Hon'ble Supreme Court of India.
12. Resolution of the Syndicate meetings held on 04.05.2021 & 19.05.2021.
13. ಸರ್ಕಾರದ ಉಪಕಾರ್ಯದರ್ಶಿಗಳ ಅ.ಸ.ಪತ್ರ ಸಂಖ್ಯೆ: ಇಡಿ 4 ಯುಬಿವಿ 2020, ದಿನಾಂಕ: 09.06.2021.
14. Approval of Hon'ble Vice-Chancellor on 11.06.2021.

Applications in eight (08) sets in the prescribed format are invited from the qualified candidates belonging to Scheduled Caste and Scheduled Tribes of Karnataka State for the following Backlog Teaching Posts in the Post Graduate Departments of Bangalore University, Jnanabharathi Campus, and also constituent College - U.V.C.E (University Visvesvaraya College of Engineering). The said candidates residing outside the Karnataka State and abroad may also apply. The prescribed application format, minimum eligibility qualifications and also general instructions etc., can be downloaded from the University website: **www.bangaloreuniversity.ac.in** from **23.06.2021 onwards.**

The processing fee of Rs. 250/- for the Post of Assistant Professor and Rs. 500/- for Post of Associate Professor and Professor (Non-Refundable) alongwith application fee of Rs.100/- shall be paid through online services provided in the above University website.

1. PROFESSOR (Academic Level - 14: Rs.1,44,200 – Rs,2,18,200)

Sl. No.	Subject	Posts to be filled SC	ST
(A) Subject-wise reservation before 22.02.1994			
1.	Chemistry	--	01 (O)
2.	Zoology	--	01 (O)
	TOTAL	**00**	**02**
(B) Clubbed Roster			
1.	Mechanical Engineering	01	--
2.	Electrical Engineering	--	01
3.	Philosophy	--	01
	TOTAL	**01 (W)**	**02 -01(R),01 (W)**
	Grand Total (A + B)	**01**	**02+02 = 04**

2. ASSOCIATE PROFESSOR (Academic Level – 13 A: Rs.1,31,400 – Rs.2,17,100)

Sl. No.	Subject	Posts to be filled SC	ST
(A) Subject-wise reservation before 22.02.1994			
1.	English	--	01 (O)
2.	Physics	01 (O)	--
3.	Mathematics	--	01 (O)
4.	Zoology	--	01 (O)
	TOTAL	**01**	**03**
(B) Clubbed Roster			
1.	Mechanical Engineering	--	01
2.	Electrical Engineering	--	01
	TOTAL	**00**	**02 – 01 (W), 01(R)**
	Grand Total (A + B)	**01**	**03+02 = 05**

3. ASSISTANT PROFESSOR (Academic Level – 10: Rs. 57, 700 – Rs.1,82,400)

Sl. No.	Subject	Posts to be filled SC	ST
1.	Physics	--	01 (O)
2.	Apparel Technology and Management	--	01(O)
3.	Library & Information Science	--	01 (O)
	TOTAL	**00**	**03**

The duly filled in applications shall be submitted to the Registrar, Bangalore University, Bengaluru – 560 056. The last date for Submission is **30.07.2021, (30th July 2021) before 5.00 p.m.**

BY ORDER
Sd/-
REGISTRAR

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು) ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.14/2020–21 ದಿನಾಂಕ: 14.06.2021

2021–22 ನೇ ಸಾಲಿಗೆ ಕರ್ನಾಟಕದ ರಾಜ್ಯದಲ್ಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ

1. ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ, 2006 ನಿಯಮಗಳು (ತಿದ್ದುಪಡಿಗಳು) ನಿಯಮ 3, ನಿಯಮ 6 (3) ಮತ್ತು ನಿಯಮ (7) ರ ಅನ್ವಯ ಹಾಗು ಸರ್ಕಾರದ ಆದೇಶದ ಅನುಸಾರವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, **ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ–2021ಕ್ಕೆ,** ಅರ್ಹತೆ / ಮೆರಿಟ್‌ಅನ್ನು ಆಧರಿಸಿ, ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ/ ವಿಶ್ವವಿದ್ಯಾಲಯ/ ಖಾಸಗಿ ಅನುದಾನಿತ/ ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿರುವ ಇಂಜಿನಿಯರಿಂಗ್, ತಂತ್ರಜ್ಞಾನ, ಯೋಗ ಮತ್ತು ನ್ಯಾಚುರೋಪತಿ, ಬಿ–ಫಾರ್ಮ, 2ನೇ ವರ್ಷದ ಬಿ.ಫಾರ್ಮ ಮತ್ತು ಫಾರ್ಮಾ–ಡಿ, ಕೃಷಿ ವಿಜ್ಞಾನ ಕೋರ್ಸುಗಳು ಹಾಗು ವೆಟರಿನರಿ ಕೋರ್ಸುಗಳಲ್ಲಿ ಲಭ್ಯವಿರುವ ಸರ್ಕಾರದ ಪಾಲಿನ ಸೀಟುಗಳಿಗೆ ಸಂಬಂಧಿಸಿದಂತೆ, ಪೂರ್ಣಾವಧಿ ಕೋರ್ಸುಗಳ ಮೊದಲನೇ ವರ್ಷಕ್ಕೆ ಅಥವಾ ಮೊದಲನೇ ಸೆಮಿಸ್ಟರ್‌ಗೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ 2021–22ನೇ ಸಾಲಿಗೆ ಅನ್ವಯಿಸುವಂತೆ ಪ್ರವೇಶ ನೀಡುವುದಕ್ಕೆ ಅರ್ಹ ಕರ್ನಾಟಕದ ವಿದ್ಯಾರ್ಥಿಗಳಿಂದ ಹಾಗೂ ಜಮ್ಮು ಮತ್ತು ಕಾಶ್ಮೀರದಿಂದ ವಲಸೆ ಬಂದಿರುವವರ ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈ ಮೇಲಿನ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯುವುದಕ್ಕೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ನೊಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ನಂತರ ಕೆಇಎ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ 2021ಕ್ಕೆ ಹಾಜರಾಗಬೇಕಿರುತ್ತದೆ.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸರ್ಕಾರದ ಪಾಲಿನ ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳ ಪ್ರವೇಶಕ್ಕಾಗಿ, ಅಭ್ಯರ್ಥಿಗಳು, ಎನ್‌ಟಿಎ, ನವದೆಹಲಿ ಇವರು ನಡೆಸುವ ರಾಷ್ಟ್ರೀಯ ಅರ್ಹತಾ ಕಮ್ ಪ್ರವೇಶ ಪರೀಕ್ಷೆ (**NEET**) – **2021** ರಲ್ಲಿ ಅರ್ಹತೆಯನ್ನು ಪಡೆದಿರಬೇಕು
4. ಆರ್ಕಿಟೆಕ್ಚರ್ ಸೀಟುಗಳ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ರವರು ನಡೆಸುವ **NATA–2021ರಲ್ಲಿ ಅಥವಾ 2021ರ JEE Paper–2** ಪರೀಕ್ಷೆಯಲ್ಲಿ ಕಡ್ಡಾಯವಾಗಿ ಅರ್ಹತೆಯನ್ನು ಪಡೆದಿರಬೇಕು. (ಸಿಇಟಿ–2021ಕ್ಕೆ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು, ಆನ್‌ಲೈನ್ ಅರ್ಜಿ ಸಲ್ಲಿಸಿ, ಅರ್ಜಿ ಶುಲ್ಕ ಪಾವತಿಸುವುದು ಕಡ್ಡಾಯವಾಗಿರುತ್ತದೆ)
5. ಅರ್ಹತೆ: ನಿಯಮ 5 (1) ರ Karnataka Selection of Candidates for Admission to Government seats in Professional Educational Institutions Rules, 2006, ಅನ್ವಯ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು ಮತ್ತು ನಿಗದಿ ಪಡಿಸಿರುವ ಅರ್ಹತಾ ಕಂಡಿಕೆಗಳಲ್ಲಿ ಯಾವುದಾದರು ಒಂದರಲ್ಲಿ ಅರ್ಹತೆ ಹೊಂದಿರಬೇಕು, ಇಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಸರ್ಕಾರಿ ಕೋಟದ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪಡೆಯಲು ಅರ್ಹತೆಯನ್ನು ಹೊಂದುವುದಿಲ್ಲ.
6. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ, ಅರ್ಹತಾ ಕಂಡಿಕೆಗಳು, ಶೈಕ್ಷಣಿಕ ಅರ್ಹತೆ ಹಾಗು ಇತರೆ ವಿವರಗಳನ್ನು ಒಳಗೊಂಡ "ಯುಜಿಸಿಇಟಿ–2021–ಮಾಹಿತಿ ಪುಸ್ತಕ" ವನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಅಭ್ಯರ್ಥಿಗಳು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳು ಕೆಇಎ ನಡೆಸುವ ಸಿಇಟಿ ಮೂಲಕ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಪಡೆಯಲು ತಮ್ಮ ಅರ್ಜಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು.
7. **ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ – ಶುಲ್ಕ ಪಾವತಿ – ವಿಶೇಷ ಪ್ರವರ್ಗಗಳ ಮೂಲ ಪ್ರಮಾಣ ಪತ್ರಗಳ ಸಲ್ಲಿಸುವ ವೇಳಾಪಟ್ಟಿ.**

01	ಸಿಇಟಿ–2021ಕ್ಕೆ ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು	ದಿನಾಂಕ 15–06–2021ರ ಮಧ್ಯಾಹ್ನ 12:00 ರಿಂದ 10–07–2021 ರ ಸಂ. 5:30ರ ವರೆಗೆ
02	ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	13–07–2021
03	ವಿಶೇಷ ಪ್ರವರ್ಗಗಳ ಮೂಲ ಪ್ರಮಾಣ ಪತ್ರಗಳನ್ನು ನಿಗದಿತ ದಿನಾಂಕಗಳಂದು ಸಲ್ಲಿಸುವುದು (ಇ–ಮಾಹಿತಿ ಪುಸ್ತಕದಲ್ಲಿ ನೀಡಿರುವ ವೇಳಾಪಟ್ಟಿಯಂತೆ)	14–07–2021 ರಿಂದ 20–07–2021
04	ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯಲ್ಲಿನ ಮಾಹಿತಿಗಳನ್ನು ಅವಶ್ಯವಿದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು (ಶುಲ್ಕ ಪಾವತಿ ಮಾಡುವವರಿಗೆ ಮಾತ್ರ)	ದಿನಾಂಕ 19–07–2021ರ ಬೆ.11.00 ರಿಂದ 22–07–2021 ರ ಸಂ. 5.30ರ ವರೆಗೆ
05	ಸಿಇಟಿ–2021ಕ್ಕೆ ಪ್ರವೇಶ ಪತ್ರಗಳನ್ನು ಡೌನ್‌ಮಾಡಿಕೊಳ್ಳುವುದು	13–08–2021ರ ಬೆಳಿಗ್ಗೆ 11.00 ರಿಂದ

ಸಾಮಾನ್ಯ ಪ್ರವೇಶ ಪರೀಕ್ಷೆ – 2021ರ ವೇಳಾಪಟ್ಟಿ

ದಿನಾಂಕ	ದಿನ	ಸಮಯ	ವಿಷಯ	ಅಂಕಗಳು
28–08–2021	ಶನಿವಾರ	ಬೆಳಿಗ್ಗೆ 10.30 ರಿಂದ 11.50ರ ವರೆಗೆ	ಜೀವಶಾಸ್ತ್ರ	60
		ಮಧ್ಯಾಹ್ನ 02.30 ರಿಂದ 03.50ರ ವರೆಗೆ	ಗಣಿತಶಾಸ್ತ್ರ	60
29–08–2021	ಭಾನುವಾರ	ಬೆಳಿಗ್ಗೆ 10.30 ರಿಂದ 11.50ರ ವರೆಗೆ	ಭೌತಶಾಸ್ತ್ರ	60
		ಮಧ್ಯಾಹ್ನ 02.30 ರಿಂದ 03.50ರ ವರೆಗೆ	ರಸಾಯನ ಶಾಸ್ತ್ರ	60
ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ – ಬೆಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ವಿಜಯಪುರ, ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ				
30–08–2021	ಸೋಮವಾರ	ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30ರ ವರೆಗೆ	4ನೇ ತರಗತಿಯಮಟ್ಟದ	50

ಕೃಷಿಕ ಕೋಟದ ಅಡಿಯಲ್ಲಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಪ್ರಾಯೋಗಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಸದ್ಯದಲ್ಲಿಯೇ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಸೂಚನೆ:

(ಎ)ಕ.ಪ.ಪ್ರಾ (ಸಿಇಟಿ ಸೆಲ್) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡು ಆಯಾ ವಿಭಾಗದ ಅಂತಿಮ ಸುತ್ತಿನ ಸೀಟು ಹಂಚಿಕೆಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಒಳಗೆ ಸೀಟನ್ನು ರದ್ದು ಪಡಿಸದೇ ಇರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆ–2021ಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಗಳು 2021ನೇ ಸಾಲಿನಲ್ಲಿ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

(ಬಿ) ನಿಗದಿಪಡಿಸಿರುವ ಶೈಕ್ಷಣಿಕೆ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು ಎಂಸಿಐ/ ಡಿಸಿಐ/ ಎಐಸಿಟಿಇ/ ಸಿಓಎ/ ಸಿಸಿಐಎಂ/ ಪಿಸಿಐ / ಸರ್ಕಾರ/ ವಿಶ್ವವಿದ್ಯಾಲಯ/ಅಪೆಕ್ಸ್ ಸಂಸ್ಥೆಗಳ ಅನುಮೋದನೆಯ ಷರತ್ತಿಗೆ ಒಳಪಟ್ಟಿರುತ್ತವೆ;

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್: http://kea.kar.nic.in ಅನ್ನು ನೋಡಲು ಕೋರಿದೆ. ಕೆಇಎ ಸಹಾಯವಾಣಿ ಸಂಖ್ಯೆಗಳು: 080 – 23 460 460 – (ಐದು ಲೈನುಗಳು – ಬೆ. 9.30 ರಿಂದ ಸಂ. 6.00 – ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)

ಸಹಿ/–
(ವೆಂಕಟ್ ರಾಜಾ, ಭಾ.ಆ.ಸೇ.)
ಕಾರ್ಯನಿರ್ವಾಹಕ ನಿರ್ದೇಶಕರು.

ವಾಸಾಸಂಇ/ಬೆಂ.ನ/545/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ಷೇಮ ಕುಶಲ

ಭಯ ಬೇಡ, ಮುಂದೆ ಸಾಗಿರಿ...

ಶ್ರೀವತ್ಸ ಅನಂತ ರಾವ್

ಮನಸ್ಸು. ಇದು ನಮ್ಮ ಉಪಯೋಗಕ್ಕಾಗಿ ಸಿದ್ಧವಾಗಿರುವ ಉತ್ತಮ ಸಾಧನವೇನೋ ಹೌದು; ಆದರೆ ತಪ್ಪಾಗಿ ಬಳಸಿದರೆ ಅದು ನಮ್ಮ ಅಂಕೆಯಲ್ಲಿ ಉಳಿಯುವುದಿಲ್ಲ. ನಾವು ನಮ್ಮ ಮನಸ್ಸನ್ನು ತಪ್ಪಾಗಿ ಬಳಸುವುದಿಲ್ಲ, ಯಾವಾಗಲೂ ಅದೇ ನಮ್ಮನ್ನು ಬಳಸಿಕೊಳ್ಳುತ್ತದೆ. ಇಂದು ಕೋವಿಡ್ ಸೃಷ್ಟಿಸುತ್ತಿರುವ ಆತಂಕದಲ್ಲಿ ನಿಮ್ಮ ಮನಸ್ಸು ಭಯದ ದಾಳಿಗೆ ತುತ್ತಾಗುತ್ತಲೇ ಇರುವುದು ಸುಳ್ಳಲ್ಲ. ಹಾಗಾದರೆ ಭಯದ ಮೂಲ ಏನು? ಅವರ ನಿರ್ವಹಣೆ ಹೇಗೆ?

ಭಯದ ಮೂಲ: ಇದು ಆತಂಕ, ಒತ್ತಡ, ಚಿಂತೆ, ಚಡಪಡಿಕೆಯ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಇದು ವರ್ತಮಾನವನ್ನು ಕುರಿತು ಅಲ್ಲ, ಮುಂದೆ ಆಗಬಹುದಾದ್ದರ ಕುರಿತಾಗಿ ಇರುವ ಭಯ. ನೀವು ಇಲ್ಲೇ ವರ್ತಮಾನದಲ್ಲಿ ಇರುತ್ತೀರಿ; ಆದರೆ ನಿಮ್ಮ ಮನಸ್ಸು ಮಾತ್ರ ಭವಿಷ್ಯದಲ್ಲಿರುತ್ತದೆ. ಇದೇ ಆತಂಕಕ್ಕೆ ಕಾರಣ.

ಭಯದ ಉದ್ದೇಶ: ಭಯ ನಿಮ್ಮನ್ನು ಅಪಾಯದ ಕುರಿತಾಗಿ ಎಚ್ಚರಿಸುತ್ತದೆ. ಸಮಾಧಾನವಾಗಿ ಯೋಚಿಸಿ, ಇದು ವರ್ತಮಾನದಿಂದ ಪ್ರೇರಿತವೇ, ನಿಜವೇ ಅಥವಾ ಮುಂದೆ ಜರುಗಲಿರುವ ಸನ್ನಿವೇಶವನ್ನು ಕುರಿತು ಬರೀ ನನ್ನ ಕಲ್ಪನೆಯೇ ಎಂದು. ನೀವೇ ತೀರ್ಮಾನಿಸಿ, ಇದರ ಬಗ್ಗೆ ಎಷ್ಟು ತಲೆಕೆಡಿಸಿಕೊಳ್ಳಬೇಕೆಂದು.

ಭಯದ ನಿರ್ವಹಣೆ: ವಿಭಿನ್ನ ವಿಷಯಗಳು ನಿಮ್ಮನ್ನು ತಲ್ಲಣಗೊಳಿಸುತ್ತವೆ. ನಿಮ್ಮ ನಿರೀಕ್ಷೆಗಳೇ ನಿಮ್ಮ ಭಯಕ್ಕೆ ಕಾರಣವಾಗಿರುತ್ತವೆ. ಉದಾ: ನೌಕರಿ ಹೋಗಬಹುದು, ಜೀವಹಾನಿ, ಅನಾರೋಗ್ಯ, ಒಂಟಿತನ, ವ್ಯಾಪಾರನಷ್ಟ – ಇಂಥವು ನಿಮ್ಮನ್ನು ಆತಂಕಕ್ಕೆ ತಳ್ಳಬಹುದು. ಕೋವಿಡ್ ಅನ್ನು ಕುರಿತ ಆಲೋಚನೆಯೇ ನಿಮ್ಮನ್ನು ಅಸ್ವಸ್ಥರನ್ನಾಗಿಸುತ್ತದೆ.

ಇಂದಿನ ಭಯದ ಆಯಾಮಗಳು

ನೌಕರಿ ಕಳೆದುಕೊಳ್ಳುವ ಭಯ: ಇಂದಿನ ಅಸ್ಥಿರ ಪರಿಸ್ಥಿತಿಯಲ್ಲಿ ಕೆಲಸವನ್ನು ಕಳೆದುಕೊಳ್ಳುವುದೆಂದರೆ ಅತಿ ಒತ್ತಡದ ವಿಷಯವೇ ಸರಿ. ನಿಮ್ಮ ಕೌಶಲದ ಮೇಲೆ ನಿಮಗೆ ವಿಶ್ವಾಸವಿರಲಿ.

ಸೋಂಕು ತಗಲುವ ಭಯ: ಸೋಂಕಿನಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನೀವು ಒಪ್ಪಿಕೊಳ್ಳಲೇಬೇಕು, ಅದು ನಿಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸುವುದರ ಕಡೆಗೆ ಗಮನಹರಿಸುವಂತೆ ಮಾಡುತ್ತದೆ. ರೋಗನಿರೋಧಕ ಶಕ್ತಿಯನ್ನು ಮಾನಸಿಕ ನೆಲೆಯಲ್ಲಿ ಕಂಡುಕೊಳ್ಳಿ.

> ಕೋವಿಡ್ ಇಂದು ನಮ್ಮೆಲ್ಲರನ್ನೂ ಭಯದ ಸಾಗರಕ್ಕೆ ತಳ್ಳಿದೆ, ನಿಜ. ಆದರೆ ನಾವು ವಾಸ್ತವಕ್ಕೆ ಮುಖಾಮುಖಿಯಾಗಬೇಕು; ಸದ್ಯದ ಭಯವನ್ನು ಎದುರಿಸಲೇ ಬೇಕು.

ವೈರಸ್ ಬಗ್ಗೆ ಆತಂಕ, ಲಸಿಕೆ ಪಡೆಯಲು ಹಿಂಜರಿಕೆ: ರೂಪಾಂತರಗೊಳ್ಳುತ್ತಿರುವ ರೋಗಾಣುಗಳು ಶರೀರದ ರೋಗನಿರೋಧಕ ಶಕ್ತಿಯಿಂದ ನುಣುಚಿಕೊಳ್ಳುತ್ತಿವೆ. ಜೊತೆಗೆ ಲಸಿಕೆಯಿಂದ ಪ್ರಯೋಜನ ಇದೆಯೋ ಇಲ್ಲವೋ ಎಂಬ ಅನುಮಾನ; ಮುಂದಾಗುವ ಅಡ್ಡ ಪರಿಣಾಮಗಳ ಬಗ್ಗೆ ತಿಳಿವಳಿಕೆ ಇಲ್ಲದಿರುವುದು.

ಒಂಟಿತನದ ಭಯ: ತನ್ನಿಂದ ಇನ್ನೊಬ್ಬರಿಗೆ ಸೋಂಕು ಹರಡೀತೆಂಬ ಭಯದಿಂದ ಜನ ನಗರದಿಂದ ಚಿಕ್ಕ ಊರುಗಳ ಕಡೆಗೆ ವಾಸಕ್ಕೆ ಹೊರಟಿದ್ದಾರೆ. ಸ್ನೇಹಿತರು, ಬಂಧುಗಳಿಂದ ದೂರವಾಗಿ ಪ್ರೀತಿಯನ್ನು ಕಳೆದುಕೊಂಡು ಏಕಾಂಗಿಯಾಗಿ ಜೀವಿಸಬೇಕಾಗಿರುವುದಕ್ಕೆ ಭಯಗೊಂಡಿದ್ದಾರೆ. ಈ ಏಕಾಂಗಿತನದ ಭಯವು ನಿಮ್ಮನ್ನು ನೀವು ಪ್ರೀತಿಸಿಕೊಳ್ಳುವುದಕ್ಕೆ, ಹೊಂದಿಕೊಳ್ಳುವುದಕ್ಕೆ, ಸಂತೋಷವಾಗಿರುವುದಕ್ಕೆ ಸಹಕಾರಿಯಾಗಲಿ.

ಆಸ್ಪತ್ರೆಯ ಭಯ: ಮನೆಯಲ್ಲೇ ನಿಗಾ ವಹಿಸಲು ಸಾಧ್ಯವಿಲ್ಲದೆ ಆಸ್ಪತ್ರೆ ಸೇರುತ್ತಿರುವೆ, ಆರೋಗ್ಯದ ಚೇತರಿಕೆಗೆ ಇದು ಉತ್ತಮ ನಿರ್ಧಾರ ಎಂದು ವಾಸ್ತವಸತ್ಯವನ್ನು ತಿಳಿದುಕೊಳ್ಳಿ.

ಸಾವಿನ ಭಯ: ನಿಮ್ಮ ತಂದೆ–ತಾಯಿಗೆ, ಸಂಗಾತಿಗೆ, ಸ್ನೇಹಿತರಿಗೆ, ಮಕ್ಕಳಿಗೆ ಏನಾದರೂ ಆಗಿಬಿಟ್ಟರೆ ಎನ್ನುವ ಅಭದ್ರತೆಯ ಭಯ. ಈ ಭಯವೇ ನಿಮ್ಮ ಜೀವನದ ನಿಜವಾದ ಬೆಲೆಯನ್ನು ಗುರುತಿಸುವಂತಾಗಲಿ.

ಶೋಕದಲ್ಲೂ ಒಂಟಿಯಾಗುವ ಭಯ: ಹತ್ತಿರದವರು ತೀರಿಹೋದರೆ, ಸಾವಿನ ನಂತರದ ವಿಧಿ-ವಿಧಾನಗಳು ಕೆಲವರಿಗೆ ಸಮಾಧಾನ ನೀಡುತ್ತವೆ. ಆದರೆ ಈಗ ಅದನ್ನೂ ಸರಿಯಾಗಿ ಮಾಡಲು ಸಾಧ್ಯವಾಗುತ್ತಿಲ್ಲ

ಭಯಕ್ಕೆ ಮುಖಾಮುಖಿಯಾಗುವುದು: ನಿಮಗಿರುವ ಭಯ ಸವಾಲಿನದಾದರೂ ಅದನ್ನು ಎದುರಿಸಲೇಬೇಕಾಗಿದೆ ಎಂಬುದನ್ನು ಅರಿತು, ನೀವು ಕಾರ್ಯೋನ್ಮುಖರಾಗಬೇಕಿದೆ. ಇದು ರಾತ್ರೋರಾತ್ರಿ ಆಗುವ ಕೆಲಸವಲ್ಲ. ದಿನನಿತ್ಯದ ಕಾರ್ಯ ಚಟುವಟಿಕೆಗಳ ಮೂಲಕವೇ ಈ ಭಯವನ್ನು ನಿರ್ವಹಿಸುವ ಕೌಶಲವನ್ನು ರೂಢಿಸಿಕೊಳ್ಳಿ.

ಭಯವನ್ನು ಸಮರ್ಥವಾಗಿ ಎದುರಿಸಲು ಹೀಗೆ ಮಾಡಿ

- **ಭಯವನ್ನು ಅನುಭವಿಸಿ:** ಯಾವುದನ್ನು ಕಳೆದುಕೊಳ್ಳುವ ಭಯವಿದೆಯೋ ಅದನ್ನು ಗುರುತಿಸಿ, ಉಳಿಸಿಕೊಳ್ಳುವ ಪ್ರಯತ್ನದತ್ತ ಕಾರ್ಯೋನ್ಮುಖರಾಗಿ.
- **ಒಪ್ಪಿಕೊಳ್ಳಿ:** ಭಯವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ತವಕನ್ನು ಬಿಟ್ಟುಬಿಡಿ, ಸನ್ನಿವೇಶಕ್ಕೆ ತಕ್ಕಂತೆ ಮುಂದೆ ಸಾಗಿ. ಭಯ ತಾತ್ಕಾಲಿಕವಾದುದು.
- **ಪ್ರಾಣಾಯಾಮವನ್ನು ಅಭ್ಯಾಸ ಮಾಡಿ:** ಉಸಿರಾಟದ ವ್ಯಾಯಾಮ ಮನಸ್ಸನ್ನು ಪ್ರಶಾಂತಗೊಳಿಸಲು ಸಹಕಾರಿಯಾಗುತ್ತದೆ.
- **ಗೊತ್ತಾದ ದಿನಚರಿಯನ್ನು ಅನುಸರಿಸಿ:** ನಿಮ್ಮ ದೇಹ–ಮನಸ್ಸುಗಳನ್ನು ನಿತ್ಯದ ಚಟುವಟಿಕೆಗಳಲ್ಲಿ ಎಷ್ಟೆಷ್ಟು ತೊಡಗಿಸಿ. ಇದರಿಂದ ಮೈಮನಗಳು ಉಲ್ಲಾಸದಿಂದ ಇರುತ್ತವೆ.
- **ಆತ್ಮೀಯರ ಸಂಪರ್ಕದಲ್ಲಿರಿ:** ಈಗಿನ ಸಂದಿಗ್ಧ ಪರಿಸ್ಥಿತಿ ಇರುವುದು ನಿಮಗೊಬ್ಬರಿಗೆ ಅಲ್ಲ ಎನ್ನುವುದನ್ನು ನೆನಪಿಡಿ. ಬಂಧುಗಳು, ಸ್ನೇಹಿತರು, ಸಹೋದ್ಯೋಗಿಗಳು, ನೆರೆಹೊರೆಯವರು ಎಲ್ಲರೊಂದಿಗೆ ಸ್ನೇಹಸಂಬಂಧವನ್ನು ಜೀವಂತವಾಗಿಟ್ಟುಕೊಳ್ಳಿ.
- **ಧೈರ್ಯವಾಗಿರಿ:** ನೇರವಾಗಿ ನಿಮ್ಮ ಭಾವನೆಗಳನ್ನು ಮುಕ್ತವಾಗಿ ಸಹಜವಾಗಿ ವ್ಯಕ್ತಪಡಿಸಿ. ಇತರರಿಗಿಂತ ನಿಮ್ಮ ಅಭಿಪ್ರಾಯ ಭಿನ್ನವಾಗಿದ್ದರೆ, ವ್ಯಕ್ತಪಡಿಸಲು ಹಿಂಜರಿಯಬೇಡಿ. ಭಯದಿಂದ ನಿಮ್ಮ ಕೆಲಸಕಾರ್ಯಗಳು ನಿಂತು ಹೋಗದಿರಲಿ.
- **ದಾರಿ ಮುಂದಿದೆ:** ಕೋವಿಡ್ ಅನ್ನು ಎದುರಿಸುವುದು ಮತ್ತು ಅದರ ಮೇಲೆ ಜಯ ಸಾಧಿಸುವುದು ಎಂದರೆ ಮ್ಯಾರಥಾನ್ ಓಟದ ಹಾಗೆ. ಆತಂಕವನ್ನು ಎದುರುಗೊಳ್ಳಲು ಭಯ ಬೇಡ. ಕೂಡಲೇ ಫಲಿತಾಂಶ ಸಿಕ್ಕೀತೆಂಬ ನಿರೀಕ್ಷೆಯೂ ಬೇಡ, ಸಿಗಲಿಲ್ಲವೆಂಬ ಉದ್ವೇಗವೂ ಬೇಡ. ಮನರಂಜನೆಗೂ ಸಮಯ ಮೀಸಲಿಡಿ. ಕುಟುಂಬದ ಸದಸ್ಯರಿಗೆ, ಸ್ನೇಹಿತರಿಗೆ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಕೃತಜ್ಞರಾಗಿರಿ. ಮುಂದೆ ಸಾಗಿರಿ. ❖



ಸೋತೆ ಎನಬೇಡ!

ರಘು ವಿ.

ಒಂದಾನೊಂದು ಕಾಲದಲ್ಲಿ ಮಕ್ಕಳ ಅಂಕಪಟ್ಟಿಯಲ್ಲಿ ಅನುತ್ತೀರ್ಣರಾದ ವಿಷಯಗಳ ಪಕ್ಕ 'ಫೇಲ್' ಎಂದು ನಮೂದಿಸಲಾಗುತ್ತಿತ್ತು; ಅದೂ ಕೆಂಪು ಶಾಯಿಯಲ್ಲಿ. ಅದನ್ನು ಪಡೆದುಕೊಳ್ಳುವಾಗಲೇ ಅನೇಕ ಕೈಗಳು ನಡುಗುತ್ತಿದ್ದವು. ಇತ್ತೀಚೆಗೆ ಈ ಪದ್ಧತಿ ಬದಲಾಗಿದೆ. ಕೆಂಪುಶಾಯಿಯ ಬಳಕೆ ನಿಂತಿದೆ, ಜೊತೆಗೆ 'ರಿ-ಅಪಿಯರ್' ಎಂದು ನಮೂದಿಸಲಾಗುತ್ತಿದೆ. ಇದರಿಂದ ಏನು ಮಹಾ ಬದಲಾವಣೆ ಆಯಿತು ಎಂದು ಕುಹಕವಾಡುವವರಿಗೆ ನನ್ನ ಬಳಿ ಉತ್ತರವಿಲ್ಲ. ಆದರೆ ಈ ಬದಲಾವಣೆಯ ಫಲಾನುಭವಿಗಳನ್ನು ಕಂಡಾಗ ನನಗೆ ಸಂತೋಷವಾಗುತ್ತದೆ. ಮಾನಸಿಕ ನೆಲೆಯಲ್ಲಿ ಇದೊಂದು ಸಕಾರಾತ್ಮಕವಾದ ಪರಿಣಾಮ ಬೀರುವಂತಹ ವಿಚಾರ. ಈ ವಿಚಾರ ಕೇವಲ ವಿಷಯಗಳ ಪರೀಕ್ಷೆಗೆ ಅಥವಾ ಕಲಿಕೆಗೆ ಸಂಬಂಧಿಸಿದ್ದಲ್ಲ, ಇದು ನಿತ್ಯಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯ.

ಬದುಕಿನಲ್ಲಿ ಏರಿಳಿತ ಸಹಜ. ಸಾವು ಕೂಡ ಸಹಜವೇ. ನಕ್ಕ ದಿನಗಳೆಷ್ಟೋ ಅಳುವ ದಿನಗಳೂ ಅಷ್ಟೇ. ಹಾಗೆಂದ ಮಾತ್ರಕ್ಕೆ ಜೀವನೋತ್ಸಾಹವನ್ನು ಕಳೆದುಕೊಳ್ಳಬೇಕಿಲ್ಲ. ಕ್ಯಾನ್ಸರ್‌ನಂಥ ಕಾಯಿಲೆಗಳನ್ನು ಎದುರಿಸಿ ಗೆದ್ದವರಿದ್ದಾರೆ. ಕಷ್ಟ-ನಷ್ಟಗಳನ್ನು ಮೀರಿ ನಿಂತವರಿದ್ದಾರೆ. ಕಾಯಿಲೆಯಿಂದ ಸಾಯುವುದಕ್ಕಿಂತ ಅದರ ಭಯದಿಂದಲೇ ಹೆಚ್ಚು ಜನರು ಸಾಯುತ್ತಾರೆ ಎಂಬುದು ಹಳೆಯ ಜೋಕ್. ಇದು ನಿಜವೂ ಎನಿಸುತ್ತದೆ.

ಉದಾಹರಣೆಗೆ ಒಂದು ಆತಂಕದ ವಿಷಯ ಕೇಳಿದಾಗ ಉಸಿರಾಟವೂ ಮೊದಲುಗೊಂಡಂತೆ ದೇಹದ, ಆರೋಗ್ಯದ ಎಲ್ಲ ಸೂಚಕಗಳೂ ಬದಲಾಗುತ್ತವೆ. ನೆನ್ನೆ ಮೊನ್ನೆ ನಮ್ಮನ್ನು ಕಾಡಿದ ಕೋವಿಡ್ ವಿಷಯದಲ್ಲೂ ಅಷ್ಟೆ. ಎಷ್ಟೋ ಜನ ತಮಗೆ ಕೊರೊನಾ ಪಾಸಿಟಿವ್ ಎಂದು ತಿಳಿದ ಕೂಡಲೇ ಉಸಿರಾಟದ ತೊಂದರೆಗೆ ಒಳಗಾಗಿದ್ದಾರೆ. ಇದು ಆತಂಕದಿಂದ ಆದದ್ದೇ ಹೊರತು ಅಷ್ಟೊಂದು ತೀವ್ರಗತಿಯ ಬದಲಾವಣೆ ಕ್ಷಣಮಾತ್ರದಲ್ಲಿ ಆಗುವುದಿಲ್ಲ. ಇನ್ನು ಕೆಲವರಿದ್ದಾರೆ ಕೊರೊನಾ ಕಾರಣದಿಂದ ಕ್ವಾರಂಟೈನ್‌ಗೆ ಒಳಪಟ್ಟವರು, ಇವರು ಗೋಳಾಡುತ್ತಲೇ ಹದಿನಾಲ್ಕು ದಿನಗಳನ್ನು ಅದು ವನವಾಸವೋ ಎಂಬಂತೆ ಕಳೆದಿದ್ದಾರೆ. ಮತ್ತೆ ಕೆಲವರು ಆ ದಿನಗಳನ್ನು ಬಹಳ ರಚನಾತ್ಮಕವಾಗಿ ಬಳಸಿಕೊಂಡಿದ್ದಾರೆ. ಲಾಕ್‌ಡೌನ್ ಕಾರಣದಿಂದ ಮನೆಯಲ್ಲೇ ಉಳಿಯಬೇಕಾಗಿ ಬಂದವರಲ್ಲಿ ಸಿಡುಕುತ್ತ ಬೇಸರದಿಂದ ಇದ್ದವರು ಹಲವರಾದರೆ ಈ ಅವಧಿಯನ್ನು ಕಲಿಕೆಗೆ ಬಳಸಿಕೊಂಡವರು ಕೆಲವರು. ಈ ಒಂದೂವರೆ ತಿಂಗಳಲ್ಲಿ ಹೊಸ ಭಾಷೆ ಕಲಿತವರಿದ್ದಾರೆ, ಹೊಸದೊಂದು ಯೋಜನೆ ಸಿದ್ಧಪಡಿಸಿದವರಿದ್ದಾರೆ; ಇಂಟರ್‌ನೆಟ್ ಆಧಾರಿತ ತರಗತಿಗಳನ್ನು ನಡೆಸಿ ಲಕ್ಷಗಟ್ಟಲೆ ಸಂಪಾದಿಸಿದವರೂ ಇದ್ದಾರೆ.

ನನ್ನ ಗೆಳೆಯನೊಬ್ಬ ಪ್ರಖ್ಯಾತ ಕಂಪನಿಯ ಮ್ಯಾನೇಜರ್ ಹುದ್ದೆಯಲ್ಲಿದ್ದ. ವೀಣೆ ನುಡಿಸುವುದು ಅವನ ಹವ್ಯಾಸ, ಕಾಲೇಜು ದಿನಗಳಿಂದಲೂ. ಉದ್ಯೋಗದಲ್ಲಿದ್ದುಕೊಂಡೇ ವೀಣೆಯ ಪರೀಕ್ಷೆಗಳನ್ನು ಕಟ್ಟಿ ತೇರ್ಗಡೆಯಾಗುತ್ತ ಅದರಲ್ಲಿ ವಿದ್ವಾನ್ ಕೂಡ ಆದ. ಬಳಿಕ ಪಾಠ ಮಾಡಲಾರಂಭಿಸಿದ. ವಿದೇಶಗಳಲ್ಲಿಯೂ ಅವನ ಶಿಷ್ಯರು ವೃದ್ಧಿಸಿದರು. ಐದು ವರ್ಷಗಳ ಹಿಂದೆ ಉದ್ಯೋಗಕ್ಕೆ ರಾಜಿನಾಮೆ ನೀಡಿ ಪೂರ್ಣಾವಧಿ ವೀಣಾ ಗುರುವಾದ. ಆಗೆಲ್ಲ ಅವನು ಆನ್‌ಲೈನ್ ತರಗತಿ ನಡೆಸುತ್ತೇನೆ ಎಂದಾಗ ನಾವು ಅಚ್ಚರಿಪಡುತ್ತಿದ್ದೆವು. ಈಗ ಅವನಿಂದಲೇ ಕೆಲವು ಸೂಕ್ಷ್ಮಗಳನ್ನು ಕಲಿತು ನಮ್ಮ ಪಾಠಗಳನ್ನು ನಡೆಸುತ್ತಿದ್ದೇವೆ. ಇಲ್ಲಿ ಗಮನಿಸಬೇಕಾದ್ದು, ಏನೋ ಸವಾಲು ಬಂತೆಂದು ಬೇಸರಪಡದೆ ಹೊಸ ರೀತಿಯ ಬದುಕಿಗೆ ನಮ್ಮನ್ನು ತೆರೆದುಕೊಳ್ಳಬೇಕಾದ ಉತ್ಸಾಹ. ಜಗತ್ತಿನ ಹೊಸ ಅನ್ವೇಷಣೆಗಳೆಲ್ಲ ಸಮಕಾಲೀನ ಸವಾಲಿಗೆ, ಆ ಒತ್ತಡಕ್ಕೆ ವಿಕಾಸಗೊಂಡಂತಹವೇ. ಅಣುಬಾಂಬಿನಿಂದ ಹಿಡಿದು ಇತ್ತೀಚಿನ ಕೊರೊನಾ ಲಸಿಕೆಯವರೆಗೆ ವಿಜ್ಞಾನದ ಕೊಡುಗೆಗಳೆಲ್ಲ ಒತ್ತಡದ ಕುಲುಮೆಯಲ್ಲಿ ಬೆಂದವೇ ಆಗಿವೆ. ಜಗತ್ತಿನ ಇಂಧನ ಮುಗಿಯಬಹುದೆನ್ನುವ ಆತಂಕ ಎದುರಾದಾಗ ಸೌರಶಕ್ತಿಯ ಬಳಕೆಯನ್ನು ಕಂಡುಹಿಡಿಯಲಾಯಿತು. ಪೆಟ್ರೋಲಿನ ದಾಸ್ತಾನು ಖಾಲಿಯಾಗುವ ಭಯದಲ್ಲಿ ಎಲೆಕ್ಟ್ರಿಕ್ ಕಾರು ರೋಡಿಗಿಳಿಯಿತು. ಕೊರೊನಾ ಸಹ ನಮ್ಮೊಳಗಿನ ಹೊಸ ಚೈತನ್ಯವನ್ನು ಶಕ್ತಿಯನ್ನು ಹೊರಸೆಳೆಯಿತು. ಭಾರತ ಕೂಡ ತನ್ನದೇ ಲಸಿಕೆಗಳನ್ನು ಸಿದ್ಧಪಡಿಸಿದ್ದು ಕಡಿಮೆ ಸಾಧನೆಯಲ್ಲ.

ಸೋಲೊಪ್ಪುವುದು ಸುಲಭಮಾರ್ಗ. ನಮ್ಮ ಮನಸ್ಸು ಕೂಡ ಹೆಚ್ಚಾಗಿ ಅದನ್ನೇ ಆಯ್ಕೆ ಮಾಡಿಕೊಂಡುಬಿಡುತ್ತದೆ. ಕೊನೆಗೆ ಅದು ಅಭ್ಯಾಸವೂ ಆಗಿಬಿಡುತ್ತದೆ. ಆದರೆ ಗೆಲುವನ್ನು ಕೂಡ ನಮ್ಮ ಅಭ್ಯಾಸವನ್ನಾಗಿ ಮಾಡಿಕೊಳ್ಳಬಹುದು. ಬದುಕಿನ ಸೊಗವಿರುವುದು, ವೈಭವವಿರುವುದು ಅದರ ತೋರಾಣಿಕೆಯಲ್ಲಲ್ಲ, ಅದನ್ನು ಆಸ್ವಾದಿಸುವ ಕ್ರಮದಲ್ಲಿ. ಡಿವಿಜಿಯವರ ಜ್ಞಾಪಕಚಿತ್ರಶಾಲೆಯ ಒಂದೆಡೆಯಲ್ಲಿ ಅವರು ವೃದ್ಧ ಭಿಕ್ಷುಕ ದಂಪತಿಗಳ ದಿನಚರಿಯ ಸೊಗಸನ್ನು ಕಟ್ಟಿಕೊಟ್ಟಿದ್ದಾರೆ. ಆ ರಮ್ಯತೆಯನ್ನು ಭಾವಿಸುವಾಗ ಬದುಕಿನ ಶ್ರೀಮಂತಿಕೆ ಅನಾವರಣಗೊಳ್ಳುತ್ತದೆ. ಸೋತೆ ಎಂದುಕೊಂಡ ಕ್ಷಣದಲ್ಲಿಯೇ ಸೋಲು ನಮ್ಮನ್ನು ಆವರಿಸಿಕೊಳ್ಳುತ್ತದೆ. ಆದುದರಿಂದ ಗೆಲುವನ್ನು ಕುರಿತು ಧ್ಯಾನಿಸಬೇಕು. ಆಗ ನಮ್ಮ ಮನಸ್ಸೇ ನಮಗೆ ಗೆಲುವಿನ ದಾರಿಯನ್ನು ತೋರುತ್ತದೆ. ನಮ್ಮ ಮನಸ್ಸು ಏನನ್ನು ಭಾವಿಸುತ್ತದೋ ಅದೇ ನಾವಾಗುತ್ತೇವೆ. ❖

ಸಿಇಟಿ ದಿಕ್ಸೂಚಿ

Physics_Motion In A Straight Line_3

PHYSICS_P3

1. A particle shows distance-time curve as shown in the figure. The maximum instantaneous velocity of the particle is around the point



(1) P (2) S (3) R (4) Q

2. The displacement-time graph of two moving particles make angles 30^0 & 45^0 of with the X-axis. The ratio of their velocities is [KCET-2011]



1) $\sqrt{3}:2$ 2) 1 : 1 3) 1 : 2 4) $1:\sqrt{3}$

3. A car moves from A to B with a speed of 30 kmph and from B to A with a speed of 20 kmph. What is the average speed of the car?

(1) 25 kmph (2) 24 kmph
(3) 50 kmph (4) 10 kmph

4. A body starts from rest and moves with constant acceleration for t s. It travels a distance x_1 in first half of time and x_2 in next half of time, then

(1) $x_2 = x_1$ (2) $x_2 = 2x_1$
(3) $x_2 = 3x_1$ (4) $x_2 = 4x_1$

5. In a lift moving up with an acceleration of $5 ms^{-2}$ a ball is dropped from a height of 1.25 m. The time taken by the ball to reach the floor of the lift is .... (nearly) ($g = 10ms^{-2}$)

1) 0.3 second 2) 0.2 second
3) 0.16 second 4) 0.4 second

6. A body falls freely for 10 sec. Its average velocity during this journey (take g = 10 ms-2)

(1) 100 ms-1 (2) 10 ms-1
(3) 50 ms-1 (4) 5 ms-1

7. The given graph shows the variation of velocity (v) with position (x) for a particle moving along a straight line. Which of the following graph shows the variation of acceleration (a) with position (x)?





8. A car moving with a velocity of 20 ms-1 is stopped in a distance of 40 m. If the same car is travelling at double the velocity, the distance travelled by it for same retardation is [KCET-2017]

(1) 640 m (2) 320 m
(3) 1280 m (4) 160 m

9. A person throws balls into air vertically upward in regular intervals of time of one second. The next ball is thrown when the velocity of the ball thrown earlier becomes zero. The height to which the balls rise is .... (Assume, $g = 10ms^{-2}$) [KCET-2012]

(1) 5m (2) 10m
(3) 7.5 m (4) 20 m

10. The velocity – time graph for two bodies A and B are shown. Then the acceleration of A and B are in the ratio



$\tan 25^\circ$ to $\tan 40^\circ$ (2) $\tan 25^\circ$ to $\tan 50^\circ$
$\sin 25^\circ$ to $\sin 50^\circ$ (4) $\cos 25^\circ$ to $\cos 50^\circ$

Answers

1. Answer (3)
Solution:
Slope of the graph $v = \tan\theta$

2. Answer: (4)
Sol.: By the definition, the slope of displacement-time graph is velocity. i.e.,

$$\frac{v_1}{v_2} = \frac{\tan\theta_1}{\tan\theta_2}$$

$$\frac{v_1}{v_2} = \frac{\tan 30^\circ}{\tan 45^\circ}$$

$$\frac{v_1}{v_2} = \frac{1}{\sqrt{3}}$$

3. Answer (2)
Hint:Given, speed of car from A to B = 30 km h-1 = v1Speed of car from B to A = 20 km h-1 =
Average speed of car =

$$\frac{2s}{\frac{s}{v_1}+\frac{s}{v_2}} = \frac{2v_1v_2}{v_1+v_2} = \frac{2\times30\times20}{30+20} = \frac{1200}{50} = 24$$

Average speed of car = 24 kmph

4. Answer (3)
Hint:Initial velocity = 0 and acceleration is constant.
Distance travelled in first half of time = x_1
Distance travelled in next half of time = x_2
Now $x_1 = \frac{1}{2}at^2$ be Now because initial velocity is zero.

$$\Rightarrow x_2 = at^2 + \frac{1}{2}at^2$$

$$\Rightarrow x_2 = 3\times\frac{1}{2}at^2$$

Thus, $x_2 = 3x_1$

5. Answer: (4)

Sol : $h = \frac{1}{2}(g+a)t^2$

$$\Rightarrow t = \sqrt{\frac{2h}{(g+a)}} = \sqrt{\frac{2\times1.25}{5+10}} = \sqrt{\frac{2.5}{15}} = 0.4\,\text{sec}$$

6. Answer (3)
Sol: Given:-
$g = 10\ m/s^2$
$t = 10\ s$
Initial velocity (u) = 0 m/s
$S = ut + \left(\frac{1}{2}\right)gt^2$
S = 500
$V_{avg.} = 500 / 10 = 50\ m/s$

7. Answer: (1)
Hint: Given line have positive intercept but negative slope.
So its equation can be written as,

$v = mx + v_0$ ...(1) where m = $\tan\theta = \frac{v_0}{x_0}$

By differentiating with respect to time we get,

$$\frac{dv}{dt} = -m\frac{dx}{dt} = -mv$$

Now substituting the value of 'v' from equation (1) we get

$$\frac{dy}{dx} = -m[-mx+v_0] = m^2x - mv_0$$

$$a = m^2x - mv_0$$

i.e., the graph between a and x should have positive slope but negative intercept on acceleration axis. Hence option (A) is correct.

8. Answer: (4)
Sol: Sol: $u^2 = 2as \Rightarrow s \propto u^2$

$$\therefore \frac{s_2}{40\ m} = \left(\frac{2\times20}{20}\right)^2 \quad \therefore s_2 = 160\ m$$

9. Answer: (1)
Sol:- AB $\Delta t = 1s$ and velocity is zero. This time is time of ascent.

$$h = \frac{1}{2}gt^2 = 5m\left(g = 10ms^{-2}\right)$$

10. Answer (2)
Hint : Acceleration $a = \frac{\Delta v}{\Delta t}$
So, acceleration of body $A = a_A = \tan 25^\circ$
Line B makes an angle of 50°. So its slope is equal to tan 50°.
$a_B : a_B = \tan 25^\circ : \tan 50^\circ$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 6

66. 'ಬ್ರಿಕ್ಸ್'ನ ಪ್ರಧಾನ ಕಚೇರಿ ಇರುವುದು ಎಲ್ಲಿ?
ಎ) ನವದೆಹಲಿ
ಬಿ) ಕಠ್ಮಂಡು
ಸಿ) ಶಾಂಘೈ
ಡಿ) ಢಾಕಾ

67. Entomology (ಎಂಟೊಮಾಲಜಿ) ಎಂದರೇನು?
ಎ) ಭೂಕಂಪನದ ಬಗ್ಗೆ ಅಧ್ಯಯನ
ಬಿ) ಶಿಲೆಗಳ ಬಗ್ಗೆ ಅಧ್ಯಯನ
ಸಿ) ಮಣ್ಣಿನ ಬಗ್ಗೆ ಅಧ್ಯಯನ
ಡಿ) ಕೀಟಗಳ ಬಗ್ಗೆ ಅಧ್ಯಯನ

68. ಭಾರತದಲ್ಲಿ ವೇಳೆ ನಿರ್ಧಾರಕ ರೇಖಾಂಶ ಯಾವುದು?
ಎ) 82.5 ಪೂರ್ವ
ಬಿ) 82.5 ಪಶ್ಚಿಮ
ಸಿ) 82.5 ಉತ್ತರ
ಡಿ) 82.5 ದಕ್ಷಿಣ

69. ರಾಜ್ಯಸಭೆಯ ಪ್ರಸ್ತುತ ಸಭಾಧ್ಯಕ್ಷರು ಯಾರು?
ಎ) ಹರಿವಂಶ್ ನಾರಾಯಣ್ ಸಿಂಗ್
ಬಿ) ಓಂ ಬಿರ್ಲಾ
ಸಿ) ಎಂ.ವೆಂಕಯ್ಯ ನಾಯ್ಡು
ಡಿ) ವೀರೇಂದ್ರಕುಮಾರ್

70. ಭಾರತದ ಅತ್ಯುನ್ನತ ಸೇನಾ ಪುರಸ್ಕಾರ ಯಾವುದು?
ಎ) ಪರಮಸೇನಾ ಚಕ್ರ
ಬಿ) ಪರಮಸೇವಾ ಚಕ್ರ
ಸಿ) ಮಹಾವೀರ ಚಕ್ರ
ಡಿ) ಪರಮವೀರ ಚಕ್ರ

71. ಬೆಂಗಳೂರು ನಗರದ ಪ್ರಥಮ ಪ್ರಜೆ ಯಾರು ಆಗಿರುತ್ತಾರೆ?
ಎ) ರಾಜ್ಯಪಾಲರು
ಬಿ) ಮುಖ್ಯಮಂತ್ರಿಗಳು
ಸಿ) ಮುಖ್ಯ ನ್ಯಾಯಾಧೀಶರು
ಡಿ) ಮಹಾಪೌರರು

72. ಈ ಮೊದಲು ಜಾರಿಯಲ್ಲಿದ್ದ ಒಂದು ರೂಪಾಯಿ ನೋಟನ್ನು ಯಾರು ಮುದ್ರಿಸುತ್ತಿದ್ದರು?
ಎ) ಆರ್.ಬಿ.ಐ
ಬಿ) ಹಣಕಾಸು ಸಚಿವಾಲಯದ ಪರವಾಗಿ ಆರ್.ಬಿ.ಐ
ಸಿ) ಎಸ್.ಬಿ.ಐ
ಡಿ) ವಾಣಿಜ್ಯ ಸಚಿವಾಲಯದ ಪರವಾಗಿ ಆರ್.ಬಿ.ಐ

73. ಕೇಂದ್ರ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಇರುವುದು ಎಲ್ಲಿ?
ಎ) ಬೆಂಗಳೂರು
ಬಿ) ಮೈಸೂರು
ಸಿ) ಮಂಗಳೂರು
ಡಿ) ಬೆಳಗಾವಿ

74. ಅಡಿಗೆ ಉಪ್ಪಿನ ರಾಸಾಯನಿಕ ಹೆಸರು ಏನು?
ಎ) ಸೋಡಿಯಂ ಕಾರ್ಬೊನೇಟ್
ಬಿ) ಸೋಡಿಯಂ ಬೈ ಕಾರ್ಬೊನೇಟ್
ಸಿ) ಸೋಡಿಯಂ ಕ್ಲೋರೈಡ್
ಡಿ) ಕ್ಯಾಲ್ಸಿಯಂ ಕ್ಲೋರೈಡ್

75. ದ್ವೈತ ಸಿದ್ಧಾಂತವನ್ನು ಯಾರು ಪ್ರತಿಪಾದಿಸಿದರು?
ಎ) ಶಂಕರಾಚಾರ್ಯ
ಬಿ) ರಾಮಾನುಜಾಚಾರ್ಯ
ಸಿ) ಮಧ್ವಾಚಾರ್ಯ
ಡಿ) ಮೇಲಿನ ಎಲ್ಲರೂ

76. ಮೊಘಲರ ಕಾಲದ ಆಡಳಿತ ಭಾಷೆ ಯಾವುದಾಗಿತ್ತು?
ಎ) ಪರ್ಶಿಯನ್
ಬಿ) ಉರ್ದು
ಸಿ) ಹಿಂದಿ
ಡಿ) ಹಿಂದಿ ಮತ್ತು ಉರ್ದು

77. 'ಆರ್ಯ ಸಮಾಜ' ಸ್ಥಾಪಿಸಿದವರು ಯಾರು?
ಎ) ದಯಾನಂದ ಸರಸ್ವತಿ
ಬಿ) ರಾಜಾರಾಮ್ ಮೋಹನ್‌ರಾಯ್
ಸಿ) ಸ್ವಾಮಿ ವಿವೇಕಾನಂದ
ಡಿ) ರಾಮಕೃಷ್ಣ ಪರಮಹಂಸ

78. ಮಾನವನ ರಕ್ತದಲ್ಲಿ ಯಾವ ಲೋಹದ ಅಂಶ ಇದೆ?
ಎ) ಕ್ಯಾಲ್ಸಿಯಂ
ಬಿ) ಹೈಡ್ರೋಜನ್
ಸಿ) ಇಂಗಾಲ
ಡಿ) ಕಬ್ಬಿಣ

79. ವಿಟಮಿನ್ 'ಸಿ' ಕೊರತೆಯಿಂದ ಬರುವ ರೋಗ ಯಾವುದು?
ಎ) ಇರುಳು ಕುರುಡು
ಬಿ) ಸ್ಕರ್ವಿ
ಸಿ) ರಿಕೆಟ್ಸ್
ಡಿ) ಬೆರಿಬೆರಿ

80. 'ಕರೆನ್ಸಿ ಚೆಸ್ಟ್' ಯಾರ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ?
ಎ) ಆರ್‌ಬಿಐ
ಬಿ)ಎಸ್‌ಬಿಐ
ಸಿ) ಕೆನರಾ ಬ್ಯಾಂಕ್
ಡಿ) ಯೂನಿಯನ್ ಬ್ಯಾಂಕ್

ಭಾಗ-5ರ ಉತ್ತರ: 56. ಬಿ, 57. ಎ, 58. ಬಿ, 59. ಬಿ, 60. ಬಿ, 61. ಡಿ, 62. ಸಿ, 63. ಬಿ, 64. ಡಿ, 65. ಬಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನೀವು ನಿರ್ಧರಿಸುವವರೆಗೆ ಏನೂ ಆಗದು. ನಿರ್ಧಾರ ಕೈಗೊಳ್ಳಿ ಮತ್ತು ನಿಮ್ಮ ಜೀವನವು ಪ್ರಗತಿ ಕಾಣುವುದನ್ನು ನೋಡಿ. -ಓಪ್ರಾ ವಿನ್‌ಫ್ರೇ

ಲಾಕ್‌ಡೌನ್ ಭಾಗಶಃ ತೆರವು ಇದು ಮತ್ತಷ್ಟು ಎಚ್ಚರದ ಸಮಯ

ಕೊರೊನಾ ಸೋಂಕಿನ ಎರಡನೇ ಅಲೆಯನ್ನು ನಿಯಂತ್ರಿಸುವ ಉದ್ದೇಶದಿಂದ ವಿಧಿಸಲಾಗಿದ್ದ ಲಾಕ್‌ಡೌನ್ ಅನ್ನು ರಾಜ್ಯ ಸರ್ಕಾರವು 20 ಜಿಲ್ಲೆಗಳಲ್ಲಿ ಸಡಿಲಿಸಿದೆ. ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳು ಮರಳಿ ಹಳಿಗೆ ಬರುವ ದೃಷ್ಟಿಯಿಂದ ನಿರ್ಬಂಧಗಳ ತೆರವು ಅಗತ್ಯವಾಗಿದ್ದರೂ ಮಾರ್ಗಸೂಚಿಯಲ್ಲಿನ ಕೆಲವು ಅಂಶಗಳು ವಿರೋಧಾಭಾಸಗಳಿಂದ ಕೂಡಿವೆ. ಸೋಂಕಿನ ಸರಣಿಯನ್ನು ತುಂಡರಿಸುವುದಕ್ಕಾಗಿ ಹೇರಿದ್ದ ನಿರ್ಬಂಧಗಳನ್ನು ಆರ್ಥಿಕ ಪುನಶ್ಚೇತನದ ಉದ್ದೇಶಕ್ಕಾಗಿ ಭಾಗಶಃ ತೆರವುಗೊಳಿಸಲಾಗಿದೆ. ಆದರೆ, ಮಾರ್ಗಸೂಚಿಯ ಕೆಲವು ಅಂಶಗಳು ಆರ್ಥಿಕ ಪುನಶ್ಚೇತನಕ್ಕೆ ಪೂರಕವಾಗಿಲ್ಲ. ಬೆಳಿಗ್ಗೆ 6ರಿಂದ 10 ಗಂಟೆವರೆಗೆ ಸೀಮಿತವಾಗಿದ್ದ ಅಗತ್ಯ ವಸ್ತುಗಳ ಮಾರಾಟದ ಅವಧಿಯನ್ನು ಮಧ್ಯಾಹ್ನ 2 ಗಂಟೆಯವರೆಗೂ ವಿಸ್ತರಿಸಲಾಗಿದೆ. ಶೇಕಡ 50ರಷ್ಟು ಸಿಬ್ಬಂದಿಯೊಂದಿಗೆ ಕೈಗಾರಿಕೆಗಳು ಹಾಗೂ ಶೇ 30ರಷ್ಟು ನೌಕರರೊಂದಿಗೆ ಸಿದ್ಧ ಉಡುಪು ಕಾರ್ಖಾನೆಗಳು ಕಾರ್ಯನಿರ್ವಹಿಸಲು ಸರ್ಕಾರ ಅವಕಾಶ ಕಲ್ಪಿಸಿದೆ. ಕೈಗಾರಿಕೆಗಳಿಗೆ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿರುವ ಸರ್ಕಾರವೇ, ಬಿಎಂಟಿಸಿ ಮತ್ತು ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳ ಸಂಚಾರಕ್ಕೆ ಅವಕಾಶ ಕಲ್ಪಿಸದಿರುವ ಮೂಲಕ ಕೈಗಾರಿಕೆಗಳ ಕಾರ್ಯಚಟುವಟಿಕೆಗಳಿಗೆ ತೊಡಕು ಉಂಟುಮಾಡಿದೆ. ಬಸ್‌ಗಳೇ ಇಲ್ಲದಿದ್ದ ಮೇಲೆ ಕಾರ್ಮಿಕರು ತಾವು ಕೆಲಸ ಮಾಡುವ ಸ್ಥಳಗಳಿಗೆ ಹೋಗುವುದು ಹಾಗೂ ಅಲ್ಲಿಂದ ಮನೆಗೆ ಹಿಂದಿರುಗುವುದು ಸುಲಭಸಾಧ್ಯವಲ್ಲ. ಬೆಂಗಳೂರಿನಂಥ ನಗರಗಳಲ್ಲಿ ಸಣ್ಣ ಕೈಗಾರಿಕೆಗಳು ಮತ್ತು ಗಾರ್ಮೆಂಟ್‌ಗಳ ಬಹುತೇಕ ನೌಕರರು ಸಾರ್ವಜನಿಕ ಸಾರಿಗೆ ಅವಲಂಬಿಸಿರುವುದನ್ನು ಸರ್ಕಾರ ಮರೆತಂತಿದೆ ಅಥವಾ ಟ್ಯಾಕ್ಸಿ ಹಾಗೂ ಆಟೊಗಳಲ್ಲಿ ಓಡಾಡುವ ಸಾಮರ್ಥ್ಯ ಕಾರ್ಮಿಕರಲ್ಲಿದೆ ಎಂದು ಭಾವಿಸಿರುವಂತಿದೆ. ಮಾರ್ಗಸೂಚಿಯಲ್ಲಿರುವ ಇಂತಹ ಗೊಂದಲಗಳು ಉದ್ದೇಶಿತ ಪ್ರಯೋಜನಗಳು ಪೂರ್ಣಪ್ರಮಾಣದಲ್ಲಿ ದಕ್ಕದಂತೆ ಮಾಡಿವೆ. ಕಳೆದ ವಾರ ರಫ್ತು ಆಧಾರಿತ ಘಟಕಗಳಿಗೆ ಕಾರ್ಯನಿರ್ವಹಿಸಲು ಸರ್ಕಾರ ಅನುಮತಿ ನೀಡಿದ್ದರೂ ಈವರೆಗೂ ಅನೇಕ ಉದ್ಯಮಗಳು ಬಾಗಿಲು ತೆರೆದಿಲ್ಲ. ಕಚ್ಚಾ ವಸ್ತುಗಳನ್ನು ತರಿಸಿಕೊಳ್ಳುವುದು ಕಷ್ಟವಾಗಿರುವ ಸಂದರ್ಭದಲ್ಲಿ ಬಾಗಿಲು ತೆಗೆಯುವುದರಿಂದ ಕಾರ್ಖಾನೆಗಳಿಗೆ ಪ್ರಯೋಜನವಿಲ್ಲ.

ಲಾಕ್‌ಡೌನ್ ಸಡಿಲಿಕೆ ಸಹಜ ಜೀವನಕ್ಕೆ ಮಾಡಿಕೊಟ್ಟ ಅವಕಾಶವೇ ವಿನಾ ಮೋಜು ಮನರಂಜನೆಗಾಗಿ ಅಲ್ಲ ಎನ್ನುವ ಕಟು ವಾಸ್ತವವನ್ನು ಅರಿತು ನಾಗರಿಕರು ಜವಾಬ್ದಾರಿಯಿಂದ ವರ್ತಿಸಬೇಕು

ಲಾಕ್‌ಡೌನ್ ಸಡಿಲಿಕೆಯಿಂದಾಗಿ ಹಳ್ಳಿಗಳಿಂದ ನಗರಗಳಿಗೆ ಜನ ದೊಡ್ಡ ಸಂಖ್ಯೆಯಲ್ಲಿ ಮರಳುತ್ತಿದ್ದಾರೆ. ಇದರಿಂದಾಗಿ ಸೋಂಕಿನ ಪ್ರಸರಣದ ಸಾಧ್ಯತೆ ಹೆಚ್ಚಾಗುವ ಅಪಾಯ ಇರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ನಗರಕ್ಕೆ ಹಿಂದಿರುಗಿದವರನ್ನು ಗಮನದಲ್ಲಿಟ್ಟುಕೊಂಡು ಸೋಂಕು ಪತ್ತೆ ಪರೀಕ್ಷೆಗಳನ್ನು ಹೆಚ್ಚಿಸಬೇಕು. ಪರೀಕ್ಷೆಗಳ ಜೊತೆ ಜೊತೆಯಲ್ಲೇ ಲಸಿಕೆ ಆಂದೋಲನವನ್ನು ಮತ್ತಷ್ಟು ಚುರುಕುಗೊಳಿಸಬೇಕು. ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿರುವ ಸಂದರ್ಭದಲ್ಲಿ ಆರೋಗ್ಯ ಸೇವಾ ವಲಯದ ಮೇಲಿನ ಒತ್ತಡ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ. ಈ ಅವಧಿಯಲ್ಲಿ ಆರೋಗ್ಯ ಸೇವಾ ಕ್ಷೇತ್ರದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಸರ್ಕಾರ ಒತ್ತು ಕೊಡಬೇಕು. ಕೊರೊನಾದ ಎರಡನೇ ಅಲೆಯನ್ನು ಎದುರಿಸುವ ಸಂದರ್ಭದಲ್ಲಿ ಉಂಟಾದ ಒತ್ತಡ ಹಾಗೂ ಗೊಂದಲ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಜನರ ಆರೋಗ್ಯದ ಜೊತೆಗೆ ಆರ್ಥಿಕ ವ್ಯವಸ್ಥೆಯ ಪುನಶ್ಚೇತನದ ಬಗ್ಗೆಯೂ ಗಮನಹರಿಸಬೇಕಾಗಿದೆ. ಲಾಕ್‌ಡೌನ್‌ಗೆ ಸಂಬಂಧಿಸಿದಂತೆ ಗೊಂದಲಗಳಿಗೆ ಆಸ್ಪದವಿಲ್ಲದಂತೆ ನೀತಿ–ನಿಲುವುಗಳನ್ನು ರೂಪಿಸಬೇಕು. ಇಂತಹ ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ಬೇರೆ ಬೇರೆ ಕ್ಷೇತ್ರಗಳ ಪರಿಣತರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೊರೊನಾ ವಿರುದ್ಧದ ಹೋರಾಟದಲ್ಲಿ ಯಶಸ್ಸು ಪಡೆಯಬೇಕಿದ್ದರೆ ಸರ್ಕಾರದ ಜೊತೆಗೆ ಸಾರ್ವಜನಿಕರೂ ತಮ್ಮ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಲಾಕ್‌ಡೌನ್ ಸಡಿಲಿಕೆ ಎನ್ನುವುದು ಸಹಜ ಜೀವನಕ್ಕೆ ಮಾಡಿಕೊಟ್ಟ ಅವಕಾಶ ಎಂದು ಭಾವಿಸಿ ಸಂಭ್ರಮ–ಉತ್ಸವಗಳಲ್ಲಿ ಮೈಮರೆತರೆ ಅಪಾಯ ಕಟ್ಟಿಟ್ಟ ಬುತ್ತಿ. ಲಾಕ್‌ಡೌನ್ ನಿರ್ಬಂಧಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಆರ್ಥಿಕ ಪುನಶ್ಚೇತನದ ಉದ್ದೇಶ ಹೊಂದಿದೆಯೇ ಹೊರತು ಮೋಜು ಮನರಂಜನೆಯನ್ನಲ್ಲ. ಈ ಕಟು ವಾಸ್ತವವನ್ನು ಮರೆಯದೆ ನಾಗರಿಕರು ಜವಾಬ್ದಾರಿಯಿಂದ ವರ್ತಿಸುವುದು ಅಗತ್ಯ. ಕೊಂಚ ಎಚ್ಚರ ತಪ್ಪಿದರೂ ಕೊರೊನಾ ಸೋಂಕಿನ ಮತ್ತೊಂದು ಅಲೆಯನ್ನು ಆಹ್ವಾನಿಸಿದಂತಾಗುತ್ತದೆ ಮತ್ತು ಆಗ ಸರ್ಕಾರವು ಮತ್ತೆ ಲಾಕ್‌ಡೌನ್ ಮೊರೆಹೋಗುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಆ ಅಪಾಯಕ್ಕೆ ಎಡೆ ಮಾಡಿಕೊಡದ ವಿವೇಕವನ್ನು ಸಮಾಜ ಮತ್ತು ಸರ್ಕಾರ ಪ್ರದರ್ಶಿಸಬೇಕಾಗಿದೆ.

ದಿನದ ಟ್ವೀಟ್

ನಿರ್ಲಕ್ಷ್ಯ ಸಲ್ಲದು

ಹೌದು, ಆಗಿರುವುದು ಅನ್‌ಲಾಕ್ ಅಷ್ಟೆ. ಆದರೆ, ಕೋವಿಡ್ ವಿರುದ್ಧದ ಹೋರಾಟ ಇನ್ನೂ ಮುಂದುವರಿದಿದೆ.
#MaskUp #StaySafe

ಶ್ರೀನಿವಾಸಾಚಾರ್ ವೈದ್ಯ, ಜಿಲ್ಲಾ ಸಂಚಾಲಕ, ಬಿಜೆಪಿ ಐಟಿ ಸೆಲ್, ಕೊಪ್ಪಳ

25 ವರ್ಷಗಳ ಹಿಂದೆ

ಶನಿವಾರ, 15-6-1996

- **ಬಿಕ್ಕಟ್ಟು ಪರಿಹರಿಸಲು ಪಟೇಲ್ ರಾಜಿಸೂತ್ರ**

ಬೆಂಗಳೂರು, ಜೂನ್ 14– ಜನತಾದಳದ ಹಿರಿಯ ನಾಯಕ ರಾಮಕೃಷ್ಣ ಹೆಗಡೆ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವ ಪರಿಣಾಮವಾಗಿ ಉದ್ಭವಿಸಿರುವ ಬಿಕ್ಕಟ್ಟು ಪರಿಹಾರಕ್ಕೆ ರಾಜಿಸೂತ್ರ ಕಂಡು ಹಿಡಿಯಲು ಇಂದು ನಡೆದ ಮಂತ್ರಿ ಮಂಡಲ ಸಭೆಯು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ಸಂಪೂರ್ಣ ಅಧಿಕಾರ ನೀಡಿತು.

- **ಉಚ್ಚಾಟನೆಗೆ ದೇವೇಗೌಡರೇ ಕಾರಣ: ಹೆಗಡೆ ಆರೋಪ**

ನವದೆಹಲಿ, ಜೂನ್ 14 (ಪಿಟಿಐ, ಯುಎನ್‌ಐ)– ಪಕ್ಷದಿಂದ ತಮ್ಮನ್ನು ಉಚ್ಚಾಟಿಸಲು ಪ್ರಧಾನಿ ಎಚ್.ಡಿ. ದೇವೇಗೌಡ ಅವರೇ ಕಾರಣ ಎಂದು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ಜನತಾದಳದಿಂದ ಉಚ್ಚಾಟಿತರಾದ ರಾಮಕೃಷ್ಣ ಹೆಗಡೆ ಇಂದು ನೇರ ಆರೋಪ ಮಾಡಿದ್ದಾರೆ.

ಲೋಕಸಭೆಯಲ್ಲಿ ವಿಶ್ವಾಸಮತ ಪಡೆಯುವುದೇ ತಡ, ದೇವೇಗೌಡರು ತರಾತುರಿಯಲ್ಲಿ ತಮ್ಮನ್ನು ಪಕ್ಷದಿಂದ ಹೊರಹಾಕುವುದೇ ಅತ್ಯಂತ ಆದ್ಯತೆಯ ವಿಷಯವೆನ್ನುವ ಹಾಗೆ ಹಿರಿಯ ನಾಯಕರ ಮನವೊಲಿಸಲು ಅವರ ಮನೆಯಿಂದ ಮನೆಗೆ ಅಲೆದಾಡಿದರು ಎಂದು ಹೆಗಡೆ ದೂರಿದರು.

- **ಬೆಂಗಳೂರಿನಲ್ಲಿ ಕಟ್ಟಡ ಕುಸಿದು 8 ಸಾವು**

ಬೆಂಗಳೂರು, ಜೂನ್ 14– ಬೆಂಗಳೂರು ಮಹಾನಗರಪಾಲಿಕೆಗೆ ಸೇರಿದ ಜೆ.ಪಿ ನಗರ ಮಾರೇನಹಳ್ಳಿಯ ಪೌರ ಕಾರ್ಮಿಕ ವಸತಿ ಸಮುಚ್ಚಯದ ಒಂದು ಭಾಗ ಇಂದು ಬೆಳಿಗ್ಗೆ ಸಂಪೂರ್ಣ ಕುಸಿದು ಬಿದ್ದು, ಒಂದೇ ಕುಟುಂಬದ ಏಳು ಮಂದಿ ಸೇರಿ ಒಟ್ಟು 8 ಜನ ಸಜೀವ ಸಮಾಧಿಯಾದರು.

50 ವರ್ಷಗಳ ಹಿಂದೆ

ಮಂಗಳವಾರ, 15-6-1971

- **ಯುವಜನರ ಅಶಿಸ್ತಿಗೆ ಗುರು–ಶಿಷ್ಯ ಸಂಪರ್ಕ, ಮಾರ್ಗದರ್ಶನದ ಅಭಾವವೇ ಕಾರಣ– ಧರ್ಮವೀರ**

ಬೆಂಗಳೂರು, ಜೂನ್ 14– ಜಗತ್ತಿನಲ್ಲಿ ಸಣ್ಣ ವಿಚಾರಕ್ಕೂ ಯುವಜನರು ಅಶಿಸ್ತಿನಿಂದ ವರ್ತಿಸುವುದಕ್ಕೆ ಶಾಲಾ ಕಾಲೇಜುಗಳಲ್ಲಿ ಗುರು–ಶಿಷ್ಯ ಸಂಪರ್ಕ ಸರಿಯಾಗಿ ಇಲ್ಲದೆ ಅವರಿಗೆ ಸೂಕ್ತ ಮಾರ್ಗದರ್ಶನ ದೊರಕದಿರುವುದೇ ಕಾರಣವೆಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ಇಲ್ಲಿ ನುಡಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಮಂದಿರದಲ್ಲಿ ಪ್ರಥಮ ಏಷ್ಯನ್ ಶಿಕ್ಷಕ ಬೋಧಕರ ಸಮ್ಮೇಳನವನ್ನು ಉದ್ಘಾಟಿಸಿದ ಅವರು ವಿಜ್ಞಾನದ ಲೇಪ ಹೊಂದಿ ಮಾನವತೆ ಭಾವನೆ ಮತ್ತು ಪ್ರಜಾಸತ್ತಾತ್ಮಕ ಧ್ಯೇಯಗಳನ್ನು ಮಕ್ಕಳಲ್ಲಿ ರೂಪಿಸುವ ಶಿಕ್ಷಣ ಕ್ರಮದ ಅಗತ್ಯ ಒತ್ತಿಹೇಳಿದರು. ಮಕ್ಕಳಿಗೆ ಮಾರ್ಗದರ್ಶನ ನೀಡುವ ಹೊಣೆ ಗುರುವಿನ ಮೇಲಿದೆಯೆಂದ ಅವರು ಹಿಂದೆ ಭಾರತದಲ್ಲಿದ್ದ ಗುರುಕುಲ ಪದ್ಧತಿಯನ್ನು ಸ್ಮರಿಸಿದರು.

- **ಹೇಮಾವತಿ ಜಲಾಶಯ: ಪರಮಾವಧಿ ಪ್ರಮಾಣದ ನೀರು ಸಂಗ್ರಹಕ್ಕೆ ನಿರ್ಧಾರ**

ಬೆಂಗಳೂರು, ಜೂನ್ 14– ನಿರ್ಮಾಣವಾಗುತ್ತಿರುವ ಹೇಮಾವತಿ ಜಲಾಶಯದ ನೀರು ಸಂಗ್ರಹ ಸಾಮರ್ಥ್ಯವನ್ನು 34 ಸಹಸ್ರ ದಶಲಕ್ಷ ಘನ ಅಡಿಗಳಷ್ಟಕ್ಕೇರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಕೆಲವು ಕೋಟಿ ರೂಪಾಯಿ ಹೆಚ್ಚು ಖರ್ಚಿನಿಂದ ಪರಮಾವಧಿ ಪ್ರಮಾಣದಲ್ಲಿ ನೀರನ್ನು ಸಂಗ್ರಹಿಸಲು ಜಲಾಶಯದ ಸಾಮರ್ಥ್ಯ ಹೆಚ್ಚಿಸಲು ಈ ತೀರ್ಮಾನ ಕೈಗೊಳ್ಳಲಾಗಿದೆಯೆಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ತಿಳಿಸಿದರು.

ಬಿಕ್ಕಟ್ಟಿನ ಸಂದರ್ಭದಲ್ಲಿ ಬದುಕಿನ ಬಗ್ಗೆ ನಾವು ಮೂಡಿಸಿಕೊಳ್ಳುವ ಸುಂದರ ಭಾವನೆಯ ಪಾತ್ರ ಮಹತ್ವದ್ದು

ಅಸ್ತಿತ್ವವಾದ, ಬಿಕ್ಕಟ್ಟು ಮತ್ತು ಸ್ಫೂರ್ತಿ

ವಿಶ್ಲೇಷಣೆ

ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ಇಪ್ಪತ್ತನೇ ಶತಮಾನದಲ್ಲಿ ಎರಡನೆಯ ಮಹಾಯುದ್ಧ ಸಮಾಪ್ತಿಯಾಗುವ ವೇಳೆಗೆ, ಯುರೋಪಿನಲ್ಲಿ ಎಲ್ಲೆಡೆ ನೆಲೆಸಿದ್ದು ಎಣೆಯೇ ಇಲ್ಲದ ಶೋಕ. ಇಡೀ ಖಂಡವು ರಕ್ತದಲ್ಲಿ ಮುಳುಗಿ ಎದ್ದಂತೆ ತೋರುತ್ತಿತ್ತು. ಯುದ್ಧದಲ್ಲಿ ಭಾಗಿಯಾದ ದೇಶಗಳ ಪ್ರತೀ ಕುಟುಂಬವೂ ಕನಿಷ್ಠ ಒಂದಾದರೂ ಸಾವು ಅಥವಾ ನೋವನ್ನು ಅನುಭವಿಸಿತ್ತು. ಕಡೆಗೆ ರಷ್ಯಾದ ಪರಾಕ್ರಮದಿಂದ ನಾಜಿಗಳ ಅಟ್ಟಹಾಸಕ್ಕೆ ಕಡಿವಾಣ ಹಾಕಲು ಸಾಧ್ಯವಾಯಿತು. ಆದರೆ ಅಷ್ಟೊತ್ತಿಗಾಗಲೇ ಮಾನವಕುಲಕ್ಕೆ ಮಾನವನೇ ಮುಳ್ಳು ಎಂಬ ಸತ್ಯದ ಅರಿವು ಎಲ್ಲರಿಗೂ ಆಗಿತ್ತು. ಯುರೋಪಿನ ಪ್ರತಿಯೊಬ್ಬರ ಹೃದಯದ ಬಡಿತದಲ್ಲಿ ಕೇಳಿಬರುತ್ತಿದ್ದ ಏಕೈಕ ಪದವೆಂದರೆ ಶಾಂತಿ.

ಸಮಾಜವಿಜ್ಞಾನಿಗಳ ಪ್ರಕಾರ, ಯುದ್ಧ ಮತ್ತು ಶಾಂತಿ ಎರಡೂ ಸಮಾಜದ ಅವಿಭಾಜ್ಯ ಅಂಶಗಳು. ಆದರೆ ಯುದ್ಧಗಳ ಮೂಲವನ್ನು ಅರಸುವ ವೈಜ್ಞಾನಿಕ ಪ್ರಯತ್ನ ಮಾಡಿದರೆ ನಮಗೆ ನಿರ್ಣಾಯಕವಾಗಿ ದೊರಕುವುದು ಒಂದೇ ಉತ್ತರ: ಸಾಮ್ರಾಜ್ಯಶಾಹಿ ಧೋರಣೆ. ಈ ಧೋರಣೆಗೆ ವಿರೋಧ ವ್ಯಕ್ತವಾದಾಗಲೆಲ್ಲ ನಮ್ಮ ಇತಿಹಾಸದುದ್ದಕ್ಕೂ ಯುದ್ಧಗಳಾಗಿವೆ. ಆದರೆ ಇಪ್ಪತ್ತನೇ ಶತಮಾನದ ಮಹಾಯುದ್ಧಗಳು ಹಿಂದೆ ನಡೆದಿರುವ ಎಲ್ಲ ಯುದ್ಧಗಳಿಗಿಂತಲೂ ಬಹಳ ವಿಭಿನ್ನ. ಇವುಗಳಲ್ಲಿ ಎರಡನೆಯ ಮಹಾಯುದ್ಧವು ಅತ್ಯಂತ ಕ್ರೂರವಾದದ್ದು. ಈ ಯುದ್ಧವು ಮುಗಿಯುವ ವೇಳೆಗೆ 5.4 ಕೋಟಿ ಜನರು ಜೀವ ಕಳೆದುಕೊಂಡರೆ, 2.8 ಕೋಟಿ ಜನ ಶಾಶ್ವತವಾಗಿ ಅಂಗವಿಕಲರಾದರು.

ಎರಡೂ ಮಹಾಯುದ್ಧಗಳು ಜೀವಹಾನಿಗೆ ಮಾತ್ರ ಕಾರಣವಾಗಲಿಲ್ಲ. ಗಮನಿಸಬೇಕಾದ ಬಹಳ ಮುಖ್ಯವಾದ ಅಂಶವೆಂದರೆ, ಯುರೋಪಿನ ಜನರಲ್ಲಿ ಮಾನವನಿರ್ಮಿತ ಸಂಸ್ಥೆಗಳ ಬಗ್ಗೆ ಇದ್ದ ಅಪಾರವಾದ ನಂಬಿಕೆಯಲ್ಲಿ ಬಿರುಕು ಕಾಣಿಸತೊಡಗಿತು. ಸೃಷ್ಟಿ, ಜೀವನ ಮತ್ತು ಮನುಷ್ಯ ಇತ್ಯಾದಿ ಅಂಶಗಳ ಕ್ರಿಶ್ಚಿಯನ್ ವ್ಯಾಖ್ಯಾನಗಳು ಅರ್ಥಹೀನ ಎನಿಸತೊಡಗಿದವು. ತತ್ವಜ್ಞಾನಿಗಳ ನವಪೀಳಿಗೆಯೇ ಪ್ರಾರಂಭವಾಗಿ, ಮನುಷ್ಯ ಎಂದರೆ ಯಾರು, ಜೀವನ ಎಂದರೆ ಏನು, ಜೀವನದ ಅರ್ಥ ಮತ್ತು ಉದ್ದೇಶಗಳೇನು ಎಂಬ ಪ್ರಶ್ನೆಗಳನ್ನು ಕೇಳುತ್ತ ಸಾರ್ತ್ರೆ ಎಂಬ ಚಿಂತಕ ಅಸ್ತಿತ್ವವಾದ ಎಂಬ ಹೊಸ ಚಿಂತನೆಗೆ ನಾಂದಿ ಹಾಡಿದ.

ತಾನು ಸಹ ಯುದ್ಧದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಮಾರ್ಟಿನ್ ಹೇಯ್ಡಿಗರ್ ಚಿಂತನೆಗಳಿಂದ ಸಾರ್ತ್ರೆ ಬಹಳ ಪ್ರಭಾವಿತನಾಗಿದ್ದ. ಸಾರ್ತ್ರೆ ಪ್ರಕಾರ, ಈ ಭೂಮಿ ಎಂಬ ರಂಗದಲ್ಲಿ ನಾವು ಯಾವುದೇ ಹಸ್ತಪ್ರತಿಯ ಸಹಾಯವಿಲ್ಲದೆ ವೇದಿಕೆಗೆ ತಳ್ಳಲ್ಪಟ್ಟ ನಟರಿದ್ದಂತೆ. 'ಬೀಯಿಂಗ್ ಆ್ಯಂಡ್ ನಥಿಂಗ್‌ನೆಸ್' ಎಂಬ ಪುಸ್ತಕದಲ್ಲಿ, ಜೀವನ ಏನು ಎಂಬುದನ್ನು ನಿರ್ಧರಿಸುವ ಜಾಗೃತ ಮನಸ್ಸಿನ ಜೀವಿಗಳು ನಾವು ಎಂದು ಸಾರ್ತ್ರೆ ವಾದಿಸುತ್ತಾನೆ. ಅಂದರೆ ನಮ್ಮ ಹಿಂದೆ ಧರ್ಮದ ರಕ್ಷೆಯಾಗಲೀ ದಾರಿದೀಪವಾಗಲೀ ಇರುವುದಿಲ್ಲ, ನಾವು ಏಕಾಂಗಿಗಳು ಎಂದು ಬಹಳ ಹತಾಶೆಯಿಂದ ಹೇಳುತ್ತಾನೆ. ನಮ್ಮ ಇರುವಿಕೆಯನ್ನು (ಬೀಯಿಂಗ್) ನಮ್ಮ ಗಮನಕ್ಕೆ ತರುವುದು ಬೇಸರ ಮತ್ತು ವಾಕರಿಕೆ. ಶೂನ್ಯತೆಯನ್ನು (ನಥಿಂಗ್‌ನೆಸ್) ನಾವು ಹೊರಗೆಲ್ಲೂ ಹುಡುಕಬೇಕಿಲ್ಲ. ಶೂನ್ಯತೆಯು ನಮ್ಮ ಇರುವಿಕೆಯ ಅವಿಭಾಜ್ಯ ಅಂಗವಾಗಿದೆ ಎಂದು ಈ ಪುಸ್ತಕದ ಮೂಲಕ ಸಾರ್ತ್ರೆ ಇಪ್ಪತ್ತನೇ ಶತಮಾನದ ಮನುಷ್ಯನ ಜೀವನವನ್ನು ವಿವರಿಸುತ್ತಾನೆ.

ಅಸ್ತಿತ್ವವಾದದ ಹರಿಕಾರನಾಗಿ ಸಾರ್ತ್ರೆ ಗುರುತಿಸಲ್ಪಟ್ಟರೂ ಇವನಿಗಿಂತ ಮುಂಚೆ ಜರ್ಮನಿಯ ಚಿಂತಕ ಫ್ರೆಡ್ರಿಕ್ ನೀಷೆ 'ದೇವರು ಸತ್ತು ಹೋಗಿದ್ದಾನೆ' ಎಂಬ ವಾಕ್ಯದ ಮೂಲಕ ಇಡೀ ಯುರೋಪಿಗೆ ಆಘಾತ ಉಂಟುಮಾಡಿದ್ದನು. ಮನುಷ್ಯನ ಆಧುನಿಕ ಜೀವನದಲ್ಲಿ ಧರ್ಮ ಮತ್ತು ದೇವರ ಪಾತ್ರಗಳನ್ನು ವ್ಯಾಖ್ಯಾನಿಸುವ ಹಿನ್ನೆಲೆಯಲ್ಲಿ ಮನುಷ್ಯನ ಮುಖ್ಯ ಗುಣಗಳು ದುರ್ಬಲತೆ ಮತ್ತು ಹೇಡಿತನ ಎಂದು ಹೇಳುತ್ತಾನೆ. ದೇವರು ಸತ್ತು ಹೋಗಿದ್ದಾನೆ ಎಂದರೆ ದೇವರ ಬಗ್ಗೆ ಇದ್ದ ನಂಬಿಕೆ ಸತ್ತಿದೆ ಎಂದು ಅರ್ಥ. ಮನುಷ್ಯನು ದೇವರ ಮೇಲಿನ ತನ್ನ ಅವಲಂಬನೆಯನ್ನು ಬಿಟ್ಟ ನಂತರ ಅವನ ಅರಿವಿಗೆ ಬರುವುದು ಅವನ ಒಂಟಿತನ.

ಸಾರ್ತ್ರೆ, ನೀಷೆ, ಕೀರ್ಕೆಗಾರ್ಡ್‌ರಂತಹ ಚಿಂತಕರ ಕೊಡುಗೆಗಳಿಂದ ಸಾಹಿತ್ಯ ರಚನೆಗೆ ಹೊಸ ಆಯಾಮಗಳು ಮತ್ತು ಹೊಸ ವಿಷಯಗಳು ದೊರೆತವು. ಜೀವನದ ಅನುಭವಗಳನ್ನು ಅಭಿವ್ಯಕ್ತಗೊಳಿಸುವ ದಿಸೆಯಲ್ಲಿ ಅಸ್ತಿತ್ವವಾದವು ಅನೇಕ ಬರಹಗಾರರಿಗೆ ಹಿನ್ನೆಲೆಯಾಯಿತು. ಬಹಳಷ್ಟು ಸಾಹಿತಿಗಳು ಇಪ್ಪತ್ತನೇ ಶತಮಾನದ ಮನುಷ್ಯ ಅನುಭವಿಸುತ್ತಿದ್ದ ಆತಂಕ, ಶೂನ್ಯತೆ, ಅರ್ಥಹೀನತೆ, ಸಾವು, ಪರಕೀಯತೆ ಮುಂತಾದ ವಿಚಾರಗಳನ್ನು ಚರ್ಚಿಸತೊಡಗಿದರು. ಅಷ್ಟು ಸಾಲದೆಂಬಂತೆ ಈ ಅಂಶಗಳು ದೇವರಿಗಿಂತ ಮಿಗಿಲಾದ ಸತ್ಯಗಳು ಎಂದು ಓದುಗರ ಮನ ಸೆಳೆದಿದ್ದವು.

ಇಪ್ಪತ್ತನೇ ಶತಮಾನವನ್ನು ಮಹಾಯುದ್ಧಗಳು ಕಾಡಿದರೆ ಇಪ್ಪತ್ತೊಂದನೇ ಶತಮಾನವನ್ನು ಕೋವಿಡ್–19 ಸಾಂಕ್ರಾಮಿಕವು ಕಾಡುತ್ತಿದೆ. ಬಹಳಷ್ಟು ಜನ ಅಸ್ತಿತ್ವವಾದವನ್ನು ಒಪ್ಪುತ್ತಿರುವುದು ಮತ್ತು ಆತಂಕ, ಶೂನ್ಯತೆ, ಅರ್ಥಹೀನತೆ, ಸಾವು, ಪರಕೀಯತೆ ಮುಂತಾದ ಅಂಶಗಳು ಬಹಳ ಆಪ್ತ ಎನಿಸುತ್ತಿರುವುದು ಇತಿಹಾಸವು ಪುನರಾವರ್ತನೆಯಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಹತಾಶೆ ಎಲ್ಲರಲ್ಲಿಯೂ ಮನೆ ಮಾಡಿದೆ. ಭವಿಷ್ಯ ಎಂಬುದು ಈ ಕ್ಷಣಕ್ಕೆ ಯಾರ ಚಿಂತನೆಗಳಲ್ಲಿಯೂ ಇದ್ದಂತೆ ತೋರುತ್ತಿಲ್ಲ. ಈ ಸಾಂಕ್ರಾಮಿಕದಿಂದ ಪಾರಾದರೆ ಸಾಕು ಎಂಬುದು ಎಲ್ಲರ ಸದ್ಯದ ಆದ್ಯತೆ.

ಇತಿಹಾಸ ಪುನರಾವರ್ತನೆಯಾಗುತ್ತಿದೆ ಎಂಬುದಕ್ಕೆ ಮತ್ತೊಂದು ಸಾಕ್ಷಿ ಎಂದರೆ, ಮಹಾಯುದ್ಧಗಳು ಮುಗಿದ ನಂತರ ಜನರಲ್ಲಿ ಮೊದಲು ಅಪನಂಬಿಕೆ ಹುಟ್ಟಿದ್ದು ಧರ್ಮದ ಬಗ್ಗೆ. ನಂತರ ರಾಜಕೀಯ ಸ್ಥಿರತೆಯೂ ಅನುಮಾನಾಸ್ಪದವಾಗಿ ಕಾಣಿಸತೊಡಗಿತು. ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಜನರಿಗೆ ದೇವರ ಮೊರೆ ಹೋಗುವ ಅನಿವಾರ್ಯ ಎದುರಾಗಿದ್ದರೂ ಅವರ ತರ್ಕಕ್ಕೆ ನಿಲುಕದಂತೆ ಜನರ ಸಾವಿಗೆ ಕಾರಣವಾಗುತ್ತಿರುವ ವೈರಸ್ಸು ದೈವಶಕ್ತಿಗಿಂತಲೂ ಪ್ರಬಲ ಎಂದು ತೋರುತ್ತಿದೆ. ಇದು ಸಾಲದೆಂಬಂತೆ ಲಸಿಕೆಯ ಲಭ್ಯತೆಯಲ್ಲಿನ ಗೊಂದಲ, ಆರೋಗ್ಯ ವ್ಯವಸ್ಥೆಯ ವೈಫಲ್ಯ ಮುಂತಾದವುಗಳು ಪ್ರತಿಯೊಬ್ಬರಲ್ಲೂ ತಾವು ಏಕಾಂಗಿಗಳು ಎಂಬ ಭಾವನೆಗೆ ಕಾರಣವಾಗಿವೆ.

ಹೀಗೆ ಬಹಳ ಹತಾಶೆಯಿಂದ ಕೂಡಿದ ಸಾಹಿತ್ಯ ರಚನೆಯನ್ನು ನೆನಪಿಸಿಕೊಳ್ಳುವ ಸಮಯದಲ್ಲಿ ಹೋಲೊಕಾಸ್ಟ್ ಕೂಡ ನೆನಪಾಗುತ್ತದೆ. ಇಪ್ಪತ್ತನೇ ಶತಮಾನದ ಮತ್ತೊಂದು ಮರೆಯಲಾಗದ ಅಂಶವೆಂದರೆ, ಜರ್ಮನಿಯಲ್ಲಿ ಆದ ಯಹೂದಿಯರ ನರಮೇಧ. ಇದನ್ನೇ ಹೋಲೊಕಾಸ್ಟ್ ಎಂದು ಕರೆಯುವುದು. ಈ ನರಮೇಧದಲ್ಲಿ ನಾಜಿಗಳು ಅರವತ್ತು ಲಕ್ಷ ಯಹೂದಿಯರನ್ನು ಬಹಳ ವ್ಯವಸ್ಥಿತವಾಗಿ ಕೊಂದು ಹಾಕಿದರು. ಯಹೂದಿಯರನ್ನು ಕೊಲ್ಲಲಿಕ್ಕಾಗಿಯೇ ಕಾನ್ಸನ್ಟ್ರೇಷನ್ ಕ್ಯಾಂಪುಗಳನ್ನು ಹಿಟ್ಲರ್ ನಿರ್ಮಿಸಿದ್ದನು. ಈ ಹಂತದಲ್ಲಿ ಈ ಅಮಾನವೀಯ ಮತ್ತು ಅತ್ಯಂತ ಕ್ರೂರ ನರಮೇಧದಲ್ಲಿ ಬಲಿಪಶುಗಳಾದವರ ಕತೆಗಳನ್ನಾಧರಿಸಿದ, ಆಸ್ಕರ್ ಪ್ರಶಸ್ತಿಗೆ ಭಾಜನವಾದ ಚಲನಚಿತ್ರ 'ಲೈಫ್ ಈಸ್ ಬ್ಯೂಟಿಫುಲ್' ನೆನಪಿಗೆ ಬರುತ್ತದೆ.

ರೊಬೆರ್ಟೊ ಬೆನಿಗ್ನಿ ನಿರ್ದೇಶನದ ಈ ಚಿತ್ರದಲ್ಲಿ ಕಥಾನಾಯಕ ಯಹೂದಿ ಆಗಿದ್ದು, ಅವನು ಮತ್ತು ಅವನ ಪುಟ್ಟ ಮಗ ಇಬ್ಬರೂ ಕಾನ್ಸನ್ಟ್ರೇಷನ್ ಕ್ಯಾಂಪುಗಳಲ್ಲಿ ಬಂಧಿತರಾಗುತ್ತಾರೆ. ಸಾಮಾನ್ಯವಾಗಿ ಈ ಕ್ಯಾಂಪುಗಳಲ್ಲಿ ಕಂಡುಬರುವುದು ನಿರಂತರ ಯಾತನೆ, ಎಣೆಯೇ ಇಲ್ಲದ ನೋವು ಮತ್ತು ತಪ್ಪಿಸಲು ಸಾಧ್ಯವಿರದ ಸಾವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಹ ಕಥಾನಾಯಕ ತನ್ನ ಮಗನಿಗೆ ಅದೊಂದು ಆಟ ಮತ್ತು ಉಳಿದ ಯಹೂದಿಯರು ಅವನೊಂದಿಗೆ ಆ ಆಟದಲ್ಲಿ ಪಾಲ್ಗೊಂಡಿರುವ ಆಟಗಾರರು ಎಂಬ ಭಾವನೆ ಬರುವಂತೆ ಮಾಡುತ್ತಾನೆ. ಯಾವ ಹಂತದಲ್ಲಿಯೂ ಆ ಪುಟ್ಟ ಬಾಲಕನಿಗೆ ತಾವು ಸಾವನ್ನು ಎದುರು ನೋಡುತ್ತಿದ್ದೇವೆ ಎಂದು ಅನ್ನಿಸುವುದಿಲ್ಲ. ಕಡೆಗೆ ತನ್ನ ತಂದೆಯ ಕೊಲೆಯಾದ ಮೇಲೂ ಆ ಬಾಲಕ ತಾನೊಂದು ಆಟ ಆಡುತ್ತಿದ್ದೇನೆ, ಜೀವನ ಸುಂದರವಾಗಿದೆ ಎಂಬ ಭಾವನೆಯಲ್ಲಿಯೇ ಇರುತ್ತಾನೆ.

ಈ ದಿಸೆಯಲ್ಲಿ ಅಸ್ತಿತ್ವವಾದವನ್ನು ಒಳಗೊಂಡ ಸಾಹಿತ್ಯ ನಮ್ಮ ಪರಿಸ್ಥಿತಿಯನ್ನು ಸತ್ಯಕ್ಕೆ ದೂರವಿರದಂತೆ ವ್ಯಾಖ್ಯಾನಿಸಿದರೂ ಇಂದಿನ ಬಿಕ್ಕಟ್ಟಿನಲ್ಲಿ 'ಲೈಫ್ ಈಸ್ ಬ್ಯೂಟಿಫುಲ್' ಚಲನಚಿತ್ರವೇಕೆ ನಮಗೆ ಜೀವನದ ಸ್ಫೂರ್ತಿಯಾಗಬಾರದು ಎಂಬುದಷ್ಟೇ ಒಂದು ಸಣ್ಣ ಆಶಯ.

ಲೇಖಕ: ಪ್ರಾಧ್ಯಾಪಕ, ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ

ಚುರುಮುರಿ

ಪೊಲಿಟಿಕೋವಿಡ್

• ಲಿಂಗರಾಜು ಡಿ.ಎಸ್.

'ಸಾ, ಈಗ ನಾಯಕತ್ವ ಬದಲಾವಣೆ ಮಾಡೊಕೋದ್ರೆ ಕೋವಿಡ್ಡಿಗಿಂತಾ ಜಾಸ್ತಿ ಅನಾವುತಾಯ್ತದೆ ಅಂದವ್ರೆ ಬುದ್ದಿಯೋರು!' ಅಂತಂದೆ.

'ಜುಲೈ 2019ರಲ್ಲಿ ಮೊದಲನೇ ವೈರಸ್ ಅಲೆ ಬಂದಿದ್ದಾಗ 17 ಜನ ವಲಸೆ ಸೋಂಕಿತರು ಬಾಂಬೇಲಿ ಕ್ವಾರಂಟೈನಾಗಿದ್ರಲ್ಲ! ಈಗ ಪಕ್ಷದೊಳಗೇ ರೂಪಾಂತರಿ ಬಂಡಾಯ ವೈರಸ್ ಬಂದದೆ' ಅಂದ್ರು ತುರೇಮಣೆ.

'ರಾಜಾವುಲಿ ಅಕ್ರಮ ವಲಸೆಗಾರರನ್ನ ದೇಶದಿಂದ ಆಚೆಗೆ ಕಳುಸ್ತೀನಿ ಅಂದದಲ್ಲಾ ಪಕ್ಷದ ಕತೆ ಹ್ಯಂಗೆ?' ಯಂಟಪ್ಪಣ್ಣ ಕೇಳಿತು.

'ಅವರು ಅಂದಿರದು 17 ಜನಕ್ಕಲ್ಲಾ ಕನಣ್ಣೈ, ಬ್ಯಾರೇ ದೇಸದೋರಿಗೆ. ಈಗ ಎರಡನೇ ಅಲೆ ಅಮರಿಕ್ಯಂಡರೆ ಕೆಲವು ಸಾಸಕರಿಗೆ ಕೆಮ್ಮು, ಜ್ವರ, ಸುಸ್ತು ಕಾಣಿಸಿಗ್ಯತದೆ. ಈ ಲಕ್ಷಣ ಕಾಣಿಸಿಗ್ಯಂಡ ಪಕ್ಷದ ಸಾಸಕರಿಗೆ ಸೋಂಕು ಟೆಸ್ಟು ಮಾಡಬಕು, ಅವರ ಲೆವೆಲ್ಲಿಗೆ ತಕ್ಕಂಗೆ ಲಸಿಕೆ ಕೊಡಬಕು! ಸೋಂಕಿತರಿಗೆ ಐಸಿಯು ಅರೇಂಜಾಗಬಕು, ಯೋಗನಿರೋಧಕ ಶಕ್ತಿ ಜಾಸ್ತಿಯಾಗಕೆ ಅಮಲುಜನಕ ಕೊಡಬಕು! ಏನು ಒಂದಾ ಎರಡಾ ಪ್ರಾಬ್ಲಮ್ಮು' ಅಂತ ವಿವರಿಸಿದರು.

'ಸಾ, ಬೆಲ್ಲದೋರು ಡೆಲ್ಲಿಯಿಂದ ದೊಡ್ಡ ಡಾಕ್ಟ್ರು ಕರಕಬಂದು ಪಕ್ಷದ ಸಾಸಕರಿಗೆಲ್ಲಾ ಸೋಂಕು ಟೆಸ್ಟ್ ಮಾಡ್ತಾರಂತೆ? ಮುಂದೆಂಗೆ?' ಚಂದ್ರು ಕೇಳಿದ.

'ಸೋಂಕಿತರು ಜಾಸ್ತಿಯಾಗದಂಗೆ ರಾಜಾವುಲಿ ಈಗ ನೋಡಿಕ್ಯಬಕು! ಬಂಡಾಯ ಶೀಲೀಂದ್ರದ ಸೋಂಕು ತಪ್ಪಿಸಕೆ ಸಾಸಕರಿಗೆ ಮಾಸ್ಕಾಕಿಸಿ, ವೈರಸ್ಸುಗಳಿಂದ ಕಾಪಾಡಕೆ ಮಠಗಳಲ್ಲಿ ಪುತ್ರ ವ್ಯವಹಾರ ನಡೀತಾ ಅದೆ! ಈ ಐಸ್ ಟೀಮಲ್ಲಿ ಹುಲಿಯಾನ ಪಕ್ಷದೇಲಿ ಡಿಫೆಕ್ಷನ್ ರೇಟ್ ಜಾಸ್ತಿಯಾಗಬೌದು. 'ನಾವು ಎತ್ಕೊಂಡೋರ ಕೂಸು ಕನಾ ಬನ್ನಿ' ಅಂತ ಸಾಂದರ್ಭಿಕವಾಗಿ ಕುಮಾರಣ್ಣ ರೆಡಿಯಾಗಿರತದೆ' ಅಂದ್ರು.

'ಈ ಪಕ್ಷಪಾದ ಕಾಯಿಲೆಗೆ ಏನು ಹೆಸರು ಕೊಡಬೌದು ಸಾ?' ಅಂತ ಕೇಳಿದೆ.

'ಪೊಲಿಟಿಕೋವಿಡ್- 21.2.0 ಅನ್ನಬೌದು. ಸಾಸಕರ ಕಾಯಿಲೆ ನಿಯಂತ್ರಣಕ್ಕೆ ಬಂದರೂ ಪರೀಕ್ಷೆಗಳ ಸಂಖ್ಯೆ, ಐಸೋಲೇಶನ್ ಕಡಮೆ ಮಾಡಬಾರದು' ಅಂದು ವ್ಯಾಧಿಪುರಾಣ ಮುಗಿಸಿದರು.

ಸಂಗತ

ಗಾಳಿ ವಿದ್ಯುತ್: ಗಾಳಿಗೆ ಗುದ್ದು?

ಪವನ ವಿದ್ಯುತ್ ಕ್ಷೇತ್ರದಲ್ಲಿ ಕಂಪನಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಮೂಲಕ, ಶುದ್ಧ ವಿದ್ಯುತ್ ಯೋಜನೆ ಹಳ್ಳ ಹಿಡಿಯದಂತೆ ನೋಡಿಕೊಳ್ಳಬೇಕಾಗಿದೆ

• ಗುರುರಾಜ್ ಎಸ್. ದಾವಣಗೆರೆ

ಮುಂಗಾರಿನ ಮಳೆ ಹನಿಗಳ ಜೊತೆ ಬೀಸಿ ಬರುವ ಸ್ವಚ್ಛಂದ ಗಾಳಿಯು ದೇಶದ ಗಾಳಿವಿದ್ಯುತ್ ಗಿರಣಿಗಳಲ್ಲಿ ನವಚೈತನ್ಯ ತುಂಬುತ್ತದೆ. ವಿದ್ಯುತ್ ಕಂಪನಿಗಳ ಮಾಲೀಕರು ಹೆಚ್ಚಿನ ಉತ್ಪಾದನೆಯಾಗುತ್ತದೆಂದು ಗೆಲುವಾಗುತ್ತಾರೆ. ಮಳೆಮೋಡಗಳನ್ನು ಹೊತ್ತು ತರುವ ಗಾಳಿ, ರೈತರಲ್ಲಿ ಭದ್ರತೆಯ ಭಾವ ಮೂಡಿಸುತ್ತದೆ.

ಗಾಳಿ ಹೆಚ್ಚಾದಷ್ಟೂ ಕೊಳಕು ಕಲ್ಲಿದ್ದಲನ್ನು ಸುಡುವುದು ಕಡಿಮೆಯಾಗುತ್ತದೆ ಎಂದು ಲೆಕ್ಕ ಹಾಕುವ ಸರ್ಕಾರಗಳು, ಸುಸ್ಥಿರ ಅಭಿವೃದ್ಧಿಯ ಗುರಿ ತಲುಪಲು ಇನ್ನೆಷ್ಟು ಹೊಸ ಸ್ಥಾವರಗಳು ಬೇಕು ಎಂಬ ಯೋಜನೆಗಳ ಕಡೆ ಗಮನ ಹರಿಸುತ್ತವೆ. ಭೂಮಿಯ ಬಿಸಿಯನ್ನು ಕಡಿಮೆ ಮಾಡಲು ಅಕ್ಷಯ ಇಂಧನ ಮೂಲಗಳತ್ತ ಗಮನ ಹರಿಸಿರುವ ವಿಶ್ವದ ಪ್ರತಿಯೊಂದು ದೇಶವೂ ಪವನ ವಿದ್ಯುತ್‌ನ ಅನುಕೂಲ ಮತ್ತು ಅನಿವಾರ್ಯದ ಕುರಿತು ಜಾಗೃತಿ ಮೂಡಿಸುವ 'ವಿಶ್ವಗಾಳಿ ದಿನ'ವನ್ನು ಪ್ರತಿವರ್ಷ ಜೂನ್ 15ರಂದು ಆಚರಿಸುತ್ತದೆ.

ಪ್ಯಾರಿಸ್ ಒಪ್ಪಂದ ನೆನಪಾದಾಗಲೆಲ್ಲ ಅಕ್ಷಯ ಇಂಧನ ಮೂಲಗಳ ಬಗ್ಗೆ ಅಕ್ಕರೆ ಉಕ್ಕುತ್ತದೆ. ಸ್ಥಾಪಿತ ಸಾಮರ್ಥ್ಯ, ಬೇಡಿಕೆ, ಉತ್ಪಾದನೆ, ಅಳವಡಿಸಿಕೊಂಡ ತಂತ್ರಜ್ಞಾನ, ಬೇಕಾದ ಬಂಡವಾಳ, ಉತ್ಪಾದಕ ಕಂಪನಿಗಳ ತಗಾದೆ, ಬಾಕಿ ಇರುವ ಯೋಜನೆಗಳು ಮತ್ತು ಇತರ ದೇಶಗಳ ಸಾಧನೆಯ ವಿಷಯಗಳೆಲ್ಲ ಮುನ್ನೆಲೆಗೆ ಬರುತ್ತವೆ.

ದೇಶದ ವಿದ್ಯುತ್ ಬೇಡಿಕೆ ದಿನೇ ದಿನೇ ಏರುತ್ತಿದೆ. ಎಂಟು ಕೋಟಿ ಜನರ ಮನೆಗಳಿಗಿನ್ನೂ ವಿದ್ಯುತ್ತಿನ ಭಾಗ್ಯ ಸಿಕ್ಕಿಲ್ಲ. ಕ್ಲೀನ್ ಆ್ಯಂಡ್ ಗ್ರೀನ್ ಎನರ್ಜಿ ಎಂದೇ ಪ್ರಸಿದ್ಧಿ ಪಡೆದಿರುವ ಸೌರ ಹಾಗೂ ಪವನ ವಿದ್ಯುತ್ ಉತ್ಪಾದನೆಗೆ ಎಲ್ಲ ಕಡೆ ಒತ್ತು ಸಿಗುತ್ತಿದೆ.

2030ರ ವೇಳೆಗೆ ನಮ್ಮ ಒಟ್ಟು ವಿದ್ಯುತ್ ಉತ್ಪಾದನೆಯ ಶೇ 40ರಷ್ಟು ಭಾಗ ಬಿಸಿಲು ಮತ್ತು ಗಾಳಿಯಿಂದ ಬರಬೇಕಿದೆ. ಸದ್ಯಕ್ಕೆ 37.2 ಗಿಗಾವಾಟ್ ವಿದ್ಯುತ್ ಶಕ್ತಿಯು ಗಾಳಿಯಿಂದ ದೊರಕುತ್ತಿದೆ. ಮುಂದಿನ ವರ್ಷದ ಕೊನೆಯ ವೇಳೆಗೆ ಗಾಳಿಯಿಂದ ಹೆಚ್ಚುವರಿ 60 ಗಿಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿ ಇದೆ.

ಬೇರೆ ಯಾವುದಕ್ಕೆ ಹೋಲಿಸಿದರೂ ಗಾಳಿ ವಿದ್ಯುತ್‌ನಿಂದ ಮಾಲಿನ್ಯ ಮತ್ತು ಪರಿಸರದ ಮೇಲಿನ ಒತ್ತಡ ಕಡಿಮೆ. ಖರ್ಚಿನ ವಿಷಯದಲ್ಲೂ ಇದು ಎಲ್ಲರ ಫೇವರಿಟ್. ಭೂಮಿಯಿಂದ 100 ಮೀಟರ್ ಎತ್ತರದಲ್ಲಿ 302 ಗಿಗಾವಾಟ್‌ನಷ್ಟು ಮತ್ತು 120 ಮೀಟರ್ ಎತ್ತರದಲ್ಲಿ 695 ಗಿಗಾವಾಟ್‌ನಷ್ಟು ಗಾಳಿವಿದ್ಯುತ್ ಉತ್ಪಾದನೆ ನಮ್ಮಲ್ಲಿ ಸಾಧ್ಯವಿದೆ. ಸ್ಥಾವರಗಳು ಎತ್ತರದ ಗುಡ್ಡ ಬೆಟ್ಟಗಳ ಮೇಲೆಯೇ ಇರಬೇಕೆಂದಿಲ್ಲ. 347 ಗಿಗಾವಾಟ್ ಸಾಮರ್ಥ್ಯದ ಘಟಕಗಳನ್ನು ಸಾಗುವಳಿ ಭೂಮಿ ಮತ್ತು 340 ಗಿಗಾವಾಟ್ ಸಾಮರ್ಥ್ಯದ ಘಟಕಗಳನ್ನು ಬೀಳು ಜಮೀನುಗಳಲ್ಲಿ ಸ್ಥಾಪಿಸಲು ಅವಕಾಶವಿದೆ. ಶೇ 97ರಷ್ಟು ಗಾಳಿವಿದ್ಯುತ್ ಗುಜರಾತ್, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಸ್ಥಾನ ಮತ್ತು ಮಧ್ಯ ಪ್ರದೇಶ ರಾಜ್ಯಗಳಿಂದ ದೊರೆಯಲಿದೆ.

ಆದರೆ ಕಳೆದ ಎರಡು ವರ್ಷಗಳಿಂದ ಪವನ ವಿದ್ಯುತ್ ಕ್ಷೇತ್ರ ತನ್ನ ಆಕರ್ಷಣೆ ಕಳೆದುಕೊಳ್ಳುತ್ತಿದೆ. 2016- 17ರಲ್ಲಿ 5.5 ಗಿಗಾವಾಟ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲಾಗಿತ್ತು. ಮುಂದಿನ ಎರಡು ವರ್ಷಗಳಲ್ಲಿ ತಲಾ ನಾಲ್ಕರಂತೆ ಒಟ್ಟು 8 ಗಿಗಾವಾಟ್ ಸಾಮರ್ಥ್ಯದ ಘಟಕ ಸ್ಥಾಪನೆಯ ಗುರಿ ಇತ್ತು. ಸಾಕಾರವಾದದ್ದು ಕೇವಲ 3.4 ಗಿಗಾವಾಟ್. 2019- 20ರಲ್ಲಿ ಕೇವಲ 2.07 ಗಿಗಾವಾಟ್‌ಗೆ ತೃಪ್ತಿ ಪಟ್ಟುಕೊಳ್ಳಬೇಕಾಯಿತು. ವರ್ಷದಿಂದ ವರ್ಷಕ್ಕೆ ಕಡಿಮೆಯಾದ ಸ್ಥಾಪನಾ ಸಾಮರ್ಥ್ಯವನ್ನು ಗಮನಿಸಿದ ಪಾರ್ಲಿಮೆಂಟರಿ ಸ್ಟ್ಯಾಂಡಿಂಗ್ ಕಮಿಟಿ, ಇದು ಹೀಗೆಯೇ ಮುಂದುವರಿದರೆ 2022ಕ್ಕೆ 60 ಗಿಗಾವಾಟ್ ಸ್ಥಾಪನೆ ಅಸಾಧ್ಯ ಎಂದಿದೆ. ಬದಲೀ ಇಂಧನ ಮೂಲಗಳಿಗಾಗಿಯೇ ಇರುವ ಕೇಂದ್ರ ಸಚಿವಾಲಯದ ಪ್ರಕಾರ, 13 ಗಿಗಾವಾಟ್ ಸಾಮರ್ಥ್ಯದ ಘಟಕಗಳು ಸ್ಥಾಪನೆಯ ವಿವಿಧ ಹಂತಗಳಲ್ಲಿವೆ. 10 ಗಿಗಾವಾಟ್ ಸಾಮರ್ಥ್ಯದ ಘಟಕ ಸ್ಥಾಪನೆಗೆ ಮುಂದಿನ ತಿಂಗಳುಗಳಲ್ಲಿ ಟೆಂಡರ್ ಕರೆಯಲಾಗುತ್ತದೆ. ತಜ್ಞ ಸಂಸ್ಥೆ ಕ್ರಿಸಿಲ್‌ನ ಪ್ರಕಾರ, 2022ರ ವೇಳೆಗೆ ನಮ್ಮ ಸ್ಥಾಪನಾ ಸಾಮರ್ಥ್ಯ 45 ಗಿಗಾವಾಟ್ ತಲುಪಬಹುದೆಂಬ ಲೆಕ್ಕವಿದೆ.

ಇತ್ತೀಚೆಗೆ ನಡೆಯುತ್ತಿರುವ ಹರಾಜಿನಲ್ಲಿ ಪಾಲ್ಗೊಳ್ಳಲು ಖಾಸಗಿ ಕಂಪನಿಗಳು ಉತ್ಸಾಹ ತೋರುತ್ತಿಲ್ಲ. ಘಟಕ ಸ್ಥಾಪಿಸಲು ಬೇಕಾದ ಸ್ಥಳ ಸುಲಭವಾಗಿ ದೊರಕದೇ ಇರುವುದು, ಪ್ರಸರಣ ಜಾಲದ ಕೊರತೆ, ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಮುಗ್ಗಟ್ಟು, ಖರೀದಿಯ ನಂತರ ಕಂಪನಿಗಳಿಗೆ ಬಾಕಿ ಪಾವತಿಸದಿರುವುದು ಮುಂತಾದ ಕಾರಣಗಳನ್ನು ಅವು ನೀಡುತ್ತವೆ. 1.2 ಗಿಗಾವಾಟ್ ಸಾಮರ್ಥ್ಯದ ಸೋಲಾರ್ ಘಟಕ ಸ್ಥಾಪನೆಯ ವಿಚಾರದಲ್ಲೂ ಇದೇ ಗತಿಯಾಗಿದೆ. ಹರಾಜು ಪ್ರಕ್ರಿಯೆಯನ್ನು ನಾಲ್ಕು ಬಾರಿ ನಡೆಸಿದರೂ ಯಾವ ಡೆವಲಪರ್‌ಗಳೂ ಖರೀದಿಗೆ ಮನಸ್ಸು ಮಾಡಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಸರ್ಕಾರದ ಶುದ್ಧ ವಿದ್ಯುತ್ ಯೋಜನೆ ಹಳ್ಳ ಹಿಡಿಯುತ್ತದೆ.

ಕಂಪನಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಶೀಘ್ರವಾಗಿ ಕೊನೆಗಾಣಿಸಿದಲ್ಲಿ ಮಾಲಿನ್ಯರಹಿತ ವಿದ್ಯುತ್ ಉತ್ಪಾದನೆಯಲ್ಲಿ ಯಶಸ್ಸು ಗಳಿಸಬಹುದು. ಇಲ್ಲವಾದರೆ ಕೊಳಕು ಕಲ್ಲಿದ್ದಲಿಗೇ ತಲೆ ಚಚ್ಚಿಕೊಳ್ಳಬೇಕಾಗುತ್ತದೆ.

ವಾಚಕರ ವಾಣಿ

ವಿಷಯಜ್ಞಾನ ಮುಖ್ಯ, ಭಾಷೆಯಲ್ಲ

ಎಂಜಿನಿಯರಿಂಗ್ ಪದವಿಯನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ ಬೇರೆ ರಾಜ್ಯ ಅಥವಾ ದೇಶಗಳಲ್ಲಿ ಉದ್ಯೋಗವನ್ನು ಪಡೆಯುವುದು ಹಾಗೂ ಮಾಡುವುದು ಕಷ್ಟವಾಗುತ್ತದೆ ಎಂದು ಅರ್ಚನಾ ಶಂಕರ್ ಅವರು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಜೂನ್ 12). ಇದೊಂದು ಅನಗತ್ಯ ಆತಂಕವಷ್ಟೆ. ವಿದೇಶದಲ್ಲಿ ವಿಜ್ಞಾನಿಯಾಗಿರುವ ಬೆಂಗಾಲಿ ಭಾಷಿಕ ಭೌತಶಾಸ್ತ್ರ ಪ್ರಾಧ್ಯಾಪಕರೊಬ್ಬರು ಒಮ್ಮೆ ಕೋಲ್ಕತ್ತಕ್ಕೆ ಆಗಮಿಸಿದ್ದಾಗ, ಅಲ್ಲಿನ ಭೌತಶಾಸ್ತ್ರ ಉಪನ್ಯಾಸಕರೊಬ್ಬರು ಭೌತಶಾಸ್ತ್ರವನ್ನು ಬೆಂಗಾಲಿಯಲ್ಲಿ ಬೋಧನೆ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರಂತೆ. ಅದಕ್ಕವರು, ಭೌತಶಾಸ್ತ್ರವನ್ನು ಬೆಂಗಾಲಿಯಲ್ಲಿ ಬೋಧಿಸಲಾಗದಿದ್ದರೆ ಆ ಉಪನ್ಯಾಸಕನಿಗೆ ಬೆಂಗಾಲಿ ಭಾಷೆ ಬರದು ಅಂತ ಅಲ್ಲ, ಭೌತಶಾಸ್ತ್ರವೇ ಗೊತ್ತಿಲ್ಲ ಅಂತ ಅರ್ಥ ಎಂದು ಉತ್ತರಿಸಿದರಂತೆ.

ವಿಷಯಜ್ಞಾನ ಚೆನ್ನಾಗಿ ಇದ್ದರೆ ಯಾವ ಭಾಷೆಯಲ್ಲಿ (ಅದು ಸುಮಾರಾಗಿ ಗೊತ್ತಿದ್ದರೂ) ಬೇಕಾದರೂ ಸಂವಹನ ಮಾಡಲು ಸಾಧ್ಯ ಎಂಬ ವಾಸ್ತವವನ್ನು ನಾವು ಮನಗಾಣಬೇಕಾಗಿದೆ. ಒಂದು ಭಾಷೆಯಾಗಿ ಇಂಗ್ಲಿಷ್ ಅನ್ನು ಕಲಿಯುವುದು ಕಷ್ಟವಲ್ಲವೇ ಅಲ್ಲ. ಎಂತಹ ಕಠಿಣ ಪರಿಕಲ್ಪನೆಗಳನ್ನಾದರೂ ನಮ್ಮದೇ ಭಾಷೆಯಲ್ಲಿ ಅಧ್ಯಯನ ಮಾಡಿದರೆ, ಅದನ್ನು ಅನುಭವದ ಮಟ್ಟದಲ್ಲಿ ಗ್ರಹಿಸಿಕೊಳ್ಳುವುದು ಸುಲಭ. ಆಗ ಆತ ತನ್ನ ವೃತ್ತಿಯನ್ನು ಆತ್ಮವಿಶ್ವಾಸದಿಂದಷ್ಟೇ ಅಲ್ಲ ಸೃಜನಶೀಲವಾಗಿಯೂ ನಿರ್ವಹಿಸಬಲ್ಲವನಾಗುತ್ತಾನೆ. ಇಂದು ಜಪಾನ್, ಜರ್ಮನಿ, ಚೀನಾ ಮುಂತಾದ ದೇಶಗಳಲ್ಲಿ ಉದ್ಯೋಗ ಮಾಡುತ್ತಿರುವವರು ಅಲ್ಲಿನ ಭಾಷೆಗಳನ್ನು ಅಲ್ಪ ಸ್ವಲ್ಪ ಕಲಿತು ಕಾರ್ಯನಿರ್ವಹಿಸುತ್ತಿಲ್ಲವೇ? ಇಂಗ್ಲಿಷ್ ಎಂಬ ಮಾಯಾಮೃಗವನ್ನು ಬೆನ್ನಟ್ಟುವ ಭ್ರಮೆಯನ್ನು ಬಿಡೋಣ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಶಾಲಾ ಶುಲ್ಕ: ಮಧ್ಯಸ್ಥಿಕೆ ಏಕೆ?

ಖಾಸಗಿ ಶಾಲೆಗಳ ಶುಲ್ಕ ನಿಗದಿ ವಿಚಾರ ಕಗ್ಗಂಟಾಗಿದೆ (ಪ್ರ.ವಾ., ಜೂನ್ 14). ಕಳೆದ ವರ್ಷದಿಂದಲೂ ಶುಲ್ಕದ ವಿಷಯದಲ್ಲಿ ಖಾಸಗಿ ಶಾಲೆಗಳ ತಕರಾರು ಹೆಚ್ಚಾಗಿ ಕೇಳಿ ಬರುತ್ತಿದೆ. ಪೋಷಕರಿಗಾಗಿ ಶಾಲೆಗಳೋ ಅಥವಾ ಶಾಲೆಗಳಿಗಾಗಿ ಪೋಷಕರೋ ಎಂದು ಕೇಳಿಕೊಳ್ಳುವಂತಾಗಿದೆ. ತಾವು ಹೇಳಿದಷ್ಟು ಶುಲ್ಕವನ್ನು ಪೋಷಕರು ಕೊಡಬೇಕು ಎಂಬುದು ಖಾಸಗಿ ಶಾಲೆಗಳ ವಾದ. ಇದು ದುಬಾರಿ ಎನಿಸಿದರೂ ಪೋಷಕರಿಗೆ ಖಾಸಗಿ ಶಾಲೆಗಳೇ ಬೇಕು.

ತಾವು ಕೇಳುವಷ್ಟು ಶುಲ್ಕವನ್ನು ಪೋಷಕರು ಕೊಡಲು ಸಿದ್ಧರಿಲ್ಲದಿದ್ದರೆ, ಶಾಲೆಗಳನ್ನು ನಡೆಸಲು ಸಾಧ್ಯವಿಲ್ಲ ಎಂದಾದರೆ ಖಾಸಗಿಯವರು ಏಕೆ ಶಾಲೆ ನಡೆಸಬೇಕು? ಖಾಸಗಿ ಶಾಲೆಗಳು ಇರತಕ್ಕದ್ದು ಎಂದು ಸಂವಿಧಾನ ವಿಧಿಸಿಲ್ಲವಲ್ಲ! ಗಿರಾಕಿಗಳು ಇಲ್ಲದಿದ್ದರೆ ವ್ಯಾಪಾರಿ ಅಂಗಡಿ ತೆರೆಯುವುದಿಲ್ಲ. ತಾವು ಶಾಲೆ ನಡೆಸಬೇಕು, ತಮ್ಮ ಶಾಲೆಗೆ ಮಕ್ಕಳು ಬರಬೇಕು, ತಾವು ಕೇಳಿದಷ್ಟು ಶುಲ್ಕವನ್ನು ಪೋಷಕರು ಮರುಮಾತಿಲ್ಲದೆ ಕೊಡಬೇಕು ಎನ್ನುವ ಹಟ ಖಾಸಗಿ ಶಾಲೆಗಳವರದು. ಖಾಸಗಿ ಶಾಲೆಯಲ್ಲೇ ತನ್ನ ಮಗು ಕಲಿಯಬೇಕು ಎನ್ನುವ ಬಯಕೆ ಪೋಷಕರದು. ಹೀಗಿರುವಾಗ ಶುಲ್ಕದ ಸಮಸ್ಯೆಯನ್ನು ಪೋಷಕರು ಮತ್ತು ಸಂಬಂಧಪಟ್ಟ ಖಾಸಗಿ ಶಾಲೆಗಳು ಪರಿಹರಿಸಿಕೊಳ್ಳಲಿ. ಮಾನ್ಯತೆ ಕೊಟ್ಟ ಮಾತ್ರಕ್ಕೆ ಖಾಸಗಿ ಶಾಲೆಗಳ ಬದುಕಿನ ಹೊಣೆ ಸರ್ಕಾರದ್ದಲ್ಲ. ಶುಲ್ಕದ ವಿಷಯದಲ್ಲಿ ಸರ್ಕಾರದ ಮಧ್ಯಸ್ಥಿಕೆ ಏಕೆ?

ಸಾಮಗ ದತ್ತಾತ್ರಿ, ಬೆಂಗಳೂರು

ಕ(ಹ)ಣ್ಣು

ಹಾಳು ಕೊರೊನಾ ಮಾರಿಗೇಕೆ
ಕವಿ, ಕಲಾವಿದರ ಮೇಲೇ
ಕೆಟ್ಟ ಕಣ್ಣು?!
ಎಷ್ಟೊಂದು ಮಂದಿ 'ಸಿದ್ಧ' ಚೇತನರು
ಕಾಲಪುರುಷನ ಪಾಲಿಗಾದರು
ಸವಿ ಹಣ್ಣು!
(ಭೌತಿಕವಾಗಿ ನುಂಗಿಹಾಕಿತು
ಬೆಂಕಿ, ಇಲ್ಲವೆ ಮಣ್ಣು)

ಸಿ.ಪಿ.ಕೆ., ಮೈಸೂರು

ಲಸಿಕೆ ಅಭಿಯಾನ ಚುರುಕುಗೊಳ್ಳಲಿ

ಕೊರೊನಾ ಮೂರನೇ ಅಲೆ ಅಕ್ಟೋಬರ್‌ನಲ್ಲಿ ಕಾಣಿಸಿಕೊಳ್ಳಲಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಅದನ್ನು ಯಶಸ್ವಿಯಾಗಿ ತಡೆಯಲು ಸರ್ಕಾರವು ಲಸಿಕೆ ಅಭಿಯಾನವನ್ನು ಅಷ್ಟರೊಳಗೆ ಸಂಪೂರ್ಣವಾಗಿ ಪೂರ್ಣಗೊಳಿಸಬೇಕು. ಅದನ್ನು ಬಿಟ್ಟು ಬೇರೆ ಯಾವ ಬಗೆಯ ಸೂತ್ರಗಳೂ ಸರ್ಕಾರದ ಬಳಿ ಇಲ್ಲ. ಹಾಗಾಗಿ ಲಸಿಕೆ ನೀಡುವಿಕೆಯನ್ನು ಕೊನೆಯ ವ್ಯಕ್ತಿಯವರೆಗೂ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

ದಿನೇಶ್, ಶಿವಮೊಗ್ಗ

ಸಿನಿಮಾ ದೃಶ್ಯದಂತಿರುವ ನಿಜಸ್ಥಿತಿ

ಊರಿಗೆ ರಸ್ತೆ ಸಂಪರ್ಕ ಇಲ್ಲದ ಕಾರಣ, ಕಾರವಾರ ತಾಲ್ಲೂಕಿನ ಮಚ್ಚಳ್ಳಿ ಎಂಬ ಕುಗ್ರಾಮದ ಒಬ್ಬ ಹೆಣ್ಣುಮಗಳನ್ನು ಅನಾರೋಗ್ಯಕ್ಕೆ ತುತ್ತಾದ ಹಿನ್ನೆಲೆಯಲ್ಲಿ ಆರೋಗ್ಯ ಚಿಕಿತ್ಸೆಗಾಗಿ ಯುವಕರು ಒಂದು ಬೊಂಬಿಗೆ ಪ್ಲಾಸ್ಟಿಕ್ ಕುರ್ಚಿಯನ್ನು ಕಟ್ಟಿ, ಅದರಲ್ಲಿ ಕೂರಿಸಿಕೊಂಡು ಪಲ್ಲಕ್ಕಿ ಹೊರುವ ರೂಪದಲ್ಲಿ ಭಾರ ಹಂಚಿಕೊಂಡು ಹೆಗಲ ಮೇಲೆ ಹೊತ್ತುಕೊಂಡು ಹೋಗುವುದನ್ನು ನೋಡಿ (ಪ್ರ.ವಾ., ಜೂನ್ 13) ಆಶ್ಚರ್ಯವಾಯಿತು. ಸುಮಾರು ಏಳು ಕಿಲೊಮೀಟರ್ ದೂರ ಹೊತ್ತುಕೊಂಡು ಹೋಗಿ ಹಿರಿಯ ಮಹಿಳೆಗೆ ಚಿಕಿತ್ಸೆ ಕೊಡಿಸಿದ್ದು ನಿಜಕ್ಕೂ ಹೆಮ್ಮೆಯ ವಿಷಯವೇ ಸರಿ.

ಯಾವುದೇ ಪಟ್ಟಣ ಹಾಗೂ ನಗರವನ್ನು ಸಂಪರ್ಕಿಸಲು ಒಂದು ಬೈಕು ಹೋಗುವಷ್ಟು ಕಾಲುದಾರಿ ಆ ಹಳ್ಳಿಗೆ ಇಲ್ಲ ಎನ್ನುವುದನ್ನು ನೆನೆಸಿಕೊಂಡರೆ ನಿಜಕ್ಕೂ ಭಯ ಎನಿಸುತ್ತದೆ. ಇನ್ನು ಆರೋಗ್ಯ ಮತ್ತು ಶಿಕ್ಷಣ ನಿಲುಕದ ಸಂಗತಿಗಳು. ಮೂಲಸೌಕರ್ಯಗಳನ್ನಂತೂ ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಈ ಕಾಲದಲ್ಲೂ ಇಂತಹ ಹಳ್ಳಿಗಳಿವೆ, ಇಲ್ಲಿ ಜನ ವಾಸಿಸುತ್ತಾರೆಂದರೆ ನಿಜಕ್ಕೂ ದುಃಖ ಹಾಗೂ ಆಶ್ಚರ್ಯವೆನಿಸುತ್ತದೆ. ಸುಮಾರು 50ರ ದಶಕದ ಯಾವುದೋ ಒಂದು ಸಿನಿಮಾದ ದೃಶ್ಯದಂತೆ ಭಾಸವಾಗುತ್ತದೆ.

ಶತಶತಮಾನಗಳಿಂದಲೂ ನೋವು, ಅವಮಾನವನ್ನು ಅನುಭವಿಸಿದ ಸಮುದಾಯದ ಬದುಕನ್ನು ಕಾವ್ಯವಾಗಿಸಿದ, ಇತ್ತೀಚೆಗೆ ನಮ್ಮನ್ನಗಲಿದ, ಬಂಡಾಯದ ಕವಿ ಎಂದೇ ಪ್ರಸಿದ್ಧರಾದ ಡಾ. ಸಿದ್ಧಲಿಂಗಯ್ಯ ಅವರ ಕವಿತೆಯ ಈ ಸಾಲುಗಳು ನೆನಪಾದವು... 'ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು, ಕಪ್ಪುಮುಖ ಬೆಳ್ಳಿ ಗಡ್ಡ ಉರಿಯುತಿರುವ ಕಣ್ಣುಗಳು, ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು...' ಓದುತ್ತಿದ್ದಂತೆ ಮಚ್ಚಳ್ಳಿ ಜನರ ಅವಸ್ಥೆಯನ್ನು ನೆನೆಸಿಕೊಂಡು ಕಣ್ಣುಗಳು ಒದ್ದೆಯಾದವು.

ಡಿ.ರಾಮಣ್ಣ ಅಲ್ಮರ್ಸಿಕೇರಿ, ಕೊಪ್ಪಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಲಸಿಕೆ ಹೆಚ್ಚು ಬಳಕೆಯ ಅಚ್ಚರಿ

ಕೋವಿಡ್ ಲಸಿಕೆ ಪೋಲಾಗುತ್ತಿದೆ ಎಂಬುದು ಈಗ ದೊಡ್ಡ ಚರ್ಚೆಯ ವಿಷಯ. ಹಲವು ರಾಜ್ಯಗಳಲ್ಲಿ ಲಸಿಕೆ ಹೆಚ್ಚು ಪೋಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇದು ಕೆಲವು ರಾಜ್ಯಗಳಿಗೆ ಸಿಟ್ಟು ಕೂಡ ತರಿಸಿದೆ. ಆದರೆ, ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಲಸಿಕೆ ಬಳಕೆಯಲ್ಲಿ ಅಚ್ಚರಿಗೆ ಕಾರಣವಾಗಿವೆ. ನಿರ್ದಿಷ್ಟ ಡೋಸ್‌ಗಳಿಗಿಂತ ಹೆಚ್ಚು ಬಳಸುವ ಮೂಲಕ ದಕ್ಷತೆ ಮೆರೆದಿವೆ. ಕೇರಳದಲ್ಲಿ ಶೇ 6.37 ಮತ್ತು ಪಶ್ಚಿಮ ಬಂಗಾಳದಲ್ಲಿ ಶೇ 5.48 ಡೋಸ್‌ಗಳಷ್ಟು ಹೆಚ್ಚುವರಿ ಬಳಕೆ ಸಾಧ್ಯವಾಗಿದೆ. ಎರಡೂ ರಾಜ್ಯಗಳು ಒಟ್ಟಾಗಿ 2.71 ಲಕ್ಷ ಡೋಸ್‌ಗಳನ್ನು ಉಳಿಸಿವೆ ಎಂದು ಸರ್ಕಾರ ಹೇಳಿದೆ. ಮೇ ತಿಂಗಳಲ್ಲಿ ದೇಶದಾದ್ಯಂತ ಕೋವಿಡ್ ಲಸಿಕೆ ಪೋಲಿನ ಪ್ರಮಾಣ ಕಡಿಮೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಆಯ್ದ ಕೆಲವು ರಾಜ್ಯಗಳ ಕೋವಿಡ್ ಲಸಿಕೆ ಪೋಲಿನ ಪ್ರಮಾಣದ ಮಾಹಿತಿಯನ್ನು ಕೇಂದ್ರ ಸರ್ಕಾರ ನೀಡಿದೆ

6.10 ಕೋಟಿ
ಮೇ 30ರವರೆಗೆ ದೇಶದಾದ್ಯಂತ ಕೋವಿಡ್ ಲಸಿಕೆ ಪಡೆದುಕೊಂಡವರ ಸಂಖ್ಯೆ

6.58 ಕೋಟಿ
ಮೇ 30ರವರೆಗೆ 6.10 ಕೋಟಿ ಜನರಿಗೆ ನೀಡಲು ಬಳಸಿಕೊಳ್ಳಲಾದ ಡೋಸ್‌ಗಳ ಸಂಖ್ಯೆ

48 ಲಕ್ಷ
ಮೇ 30ರವರೆಗೆ ದೇಶದಾದ್ಯಂತ ಪೋಲಾದ ಕೋವಿಡ್ ಲಸಿಕೆಯ ಡೋಸ್‌ಗಳ ಸಂಖ್ಯೆ

ಲಸಿಕೆ ಗರಿಷ್ಠ ಬಳಕೆ ಹೇಗೆ...

ಯಾವುದೇ ಲಸಿಕೆ ಕಾರ್ಯಕ್ರಮದಲ್ಲಿ ಬಳಸುವ ಲಸಿಕೆ ವಯಲ್‌ನಲ್ಲಿ ಲಸಿಕೆ ಪೋಲಿನ ಪ್ರಮಾಣವನ್ನೂ ಲೆಕ್ಕಹಾಕಿ, ಡೋಸ್‌ಗಳನ್ನು ತುಂಬಲಾಗಿರುತ್ತದೆ. ಸಾಮಾನ್ಯವಾಗಿ 10 ಡೋಸ್ ಇರುವ ಸೀಸೆಯಲ್ಲಿ ಹೆಚ್ಚುವರಿಯಾಗಿ 1 ಅಥವಾ 2 ಡೋಸ್ ತುಂಬಿಸಲಾಗಿರುತ್ತದೆ. ಲಸಿಕೆ ಪೋಲು ಆಗದೇ ಇದ್ದರೆ ಒಂದು ಬಾಟಲಿಯಲ್ಲಿ 11 ಅಥವಾ 12 ಜನರಿಗೆ (ತಲಾ 1 ಎಂ.ಎಲ್) ಲಸಿಕೆ ನೀಡಬಹುದು. ಭಾರತದಲ್ಲಿ ಯಾವ ರಾಜ್ಯದಲ್ಲೂ ಈ ಮಟ್ಟದ ಗರಿಷ್ಠ ಬಳಕೆಯಾಗಿಲ್ಲ. ಆದರೆ, ಲಸಿಕೆ ಪೋಲು ಆಗುವುದನ್ನು ಕೇರಳ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ತಡೆದಿವೆ. ಸೀಸೆಯಲ್ಲಿದ್ದ ಹೆಚ್ಚುವರಿ ಡೋಸ್‌ಗಳನ್ನೂ ಬಳಸಿಕೊಂಡಿವೆ.



- ‘ನಮ್ಮಲ್ಲಿ ಲಸಿಕೆ ಪೋಲಿನ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇದೆ. ಕೇಂದ್ರ ಸರ್ಕಾರವು ನೀಡಿರುವ ಮಾಹಿತಿ ತಪ್ಪಾಗಿದೆ. ಅದನ್ನು ಸರಿಪಡಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿದ್ದೇವೆ’ ಎಂದು ಛತ್ತೀಸಗಡ ಸರ್ಕಾರ ಹೇಳಿದೆ.
- ‘ಈ ಮಾಹಿತಿ ತಪ್ಪು. ನಮ್ಮಲ್ಲಿ ಲಸಿಕೆ ಪೋಲಿನ ಪ್ರಮಾಣ ಶೇ 4.65ರಷ್ಟು ಮಾತ್ರ. ಈ ತಪ್ಪನ್ನು ಸರಿಪಡಿಸಿ’ ಎಂದು ಜಾರ್ಖಂಡ್ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಈ ಪ್ರತಿಪಾದನೆಯ ಪರಿಶೀಲನೆ ನಡೆಯುತ್ತಿದೆ.

ಆಧಾರ: ಕೇಂದ್ರ ಸರ್ಕಾರದ ಪ್ರಕಟಣೆ ಪಿಟಿಐ   ಪ್ರಜಾವಾಣಿ ಗ್ರಾಫಿಕ್ಸ್

ಯಶಸ್ವಿಯಾದ ಕೇರಳ ಕಾರ್ಯತಂತ್ರ

ಕೇರಳದಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ದಾದಿಯರ ಪರಿಣತಿ, ಲಸಿಕಾ ಕೇಂದ್ರದ ಮಟ್ಟದಲ್ಲಿನ ಯೋಜನೆ ಮತ್ತು ಸಹಕಾರದಿಂದ ಮಾತ್ರ ಕೋವಿಡ್ ಲಸಿಕೆಯ ಡೋಸ್‌ಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಕೆ ಮಾಡಲು ಸಾಧ್ಯವಾಗಿದೆ. ಈ ಕಾರಣದಿಂದಲೇ ಲಸಿಕೆ ಪೋಲಾಗುವುದನ್ನು ತಡೆಯಲು ಸಾಧ್ಯವಾಗಿದೆಯಲ್ಲದೆ, ಸೀಸೆಗಳಲ್ಲಿದ್ದ ಹೆಚ್ಚುವರಿ ಡೋಸ್‌ಗಳನ್ನೂ ಬಳಸಲು ಸಾಧ್ಯವಾಗಿದೆ ಎಂದು ತಜ್ಞರು ಹೇಳಿದ್ದಾರೆ

1.10 ಲಕ್ಷ **ಮೇ ತಿಂಗಳಲ್ಲಿ ಗರಿಷ್ಠ ಬಳಕೆಯಿಂದ ದೊರೆತ ಹೆಚ್ಚುವರಿ ಡೋಸ್‌ಗಳು**

- ಕೋವಿಡ್ ಲಸಿಕೆಯ ಒಂದು ಸೀಸೆಯನ್ನು ತೆರೆದ ನಂತರ, ನಾಲ್ಕು ತಾಸುಗಳಲ್ಲಿ ಅದನ್ನು ಖಾಲಿ ಮಾಡಲೇಬೇಕು. ನಾಲ್ಕು ತಾಸಿನ ನಂತರ ಅದರಲ್ಲಿ ಉಳಿದ ಡೋಸ್‌ಗಳು ವ್ಯರ್ಥವಾಗುತ್ತವೆ. ಕೇರಳದ ಎಲ್ಲಾ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಹಾಕಿಸಿಕೊಳ್ಳಲು ಅಗತ್ಯ ಸಂಖ್ಯೆಯ ಜನರು ಬಂದಿದ್ದರಷ್ಟೇ ಸೀಸೆಯನ್ನು ತೆರೆಯಲಾಗುತ್ತದೆ. ಹೀಗಾಗಿ ತೆರೆದ ಸೀಸೆಯಲ್ಲಿ ಲಸಿಕೆಯ ಡೋಸ್‌ಗಳು ಉಳಿಯದಂತೆ ನೋಡಿಕೊಳ್ಳಲಾಗುತ್ತಿದೆ
- ಲಸಿಕಾ ಕೇಂದ್ರಕ್ಕೆ ಜನರನ್ನು ಕರೆತರುವಲ್ಲಿ ಆಶಾ ಕಾರ್ಯಕರ್ತೆಯರು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಒಂದುಸೀಸೆಯಲ್ಲಿ ಇರುವ ಎಲ್ಲಾ ಡೋಸ್‌ಗಳನ್ನು ಬಳಸಲು ಅಗತ್ಯವಾದಷ್ಟು ಜನರು ಹಾಜರಾಗದೇ ಇದ್ದರೆ, ಕೊರತೆಯಾದಷ್ಟು ಜನರನ್ನು ಆಶಾ ಕಾರ್ಯಕರ್ತೆಯರು ಕರೆತರುತ್ತಾರೆ. ಈ ವಿಚಾರದಲ್ಲಿ ಲಸಿಕಾ ಕೇಂದ್ರದ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರ ಮಧ್ಯೆ ಅತ್ಯುತ್ತಮ ಮಟ್ಟದ ಸಮನ್ವಯ ಇದೆ
- ಪ್ರತಿ ಸೀಸೆಯಲ್ಲಿ ಹೆಚ್ಚುವರಿ ಡೋಸ್‌ಗಳು ಇರುತ್ತವೆ. ರಾಜ್ಯದಲ್ಲಿ ಲಸಿಕೆ ಪೋಲಿನ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಪ್ರತಿ ಸೀಸೆಯಲ್ಲಿ 10 ಜನರಿಗೆ ಲಸಿಕೆ ನೀಡಿದ ನಂತರ, ಹೆಚ್ಚುವರಿ ಡೋಸ್ ಉಳಿದಿರುತ್ತಿತ್ತು. ಆ ಹೆಚ್ಚುವರಿ ಡೋಸ್ ಅನ್ನೂ ಜನರಿಗೆ ನೀಡಲು ಬಳಸಲಾಗಿದೆ. ಹೀಗಾಗಿ ಲಸಿಕೆಯ ಹೆಚ್ಚುವರಿ ಬಳಕೆ ಸಾಧ್ಯವಾಗಿದೆ
- ಲಸಿಕಾ ಕಾರ್ಯಕ್ರಮದಲ್ಲಿ ಭಾಗವಹಿಸುವ ದಾದಿಯರಿಗೆ ಗರಿಷ್ಠಮಟ್ಟದ ತರಬೇತಿ ನೀಡಲಾಗುತ್ತದೆ. ಬಹಳ ಹಿಂದಿನಿಂದಲೂ ಇದನ್ನು ಪಾಲಿಸಿಕೊಂಡು ಬರಲಾಗುತ್ತಿದೆ. ಹೀಗಾಗಿ ನಮ್ಮ ದಾದಿಯರು ಲಸಿಕೆಯ ಹೆಚ್ಚುವರಿ ಡೋಸ್‌ಗಳನ್ನೂ ಬಳಸುವಲ್ಲಿ ಪರಿಣತಿ ಪಡೆದಿದ್ದಾರೆ. ಈ ಹಿಂದೆ ಕೇರಳ ರಾಜ್ಯವು ಎಚ್1ಎನ್1 ಲಸಿಕೆ ಕಾರ್ಯಕ್ರಮದಲ್ಲೂ ಶೇ 100ರಷ್ಟು ಡೋಸ್‌ಗಳನ್ನು ಬಳಸಿತ್ತು
- ಲಸಿಕೆ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಜನರ ಸಹಕಾರವೂ ಗರಿಷ್ಠ ಮಟ್ಟದಲ್ಲಿ ಕೆಲಸ ಮಾಡಿದೆ ಎಂದು ಕೇರಳ ಆರೋಗ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ‘ಲಸಿಕಾ ಕೇಂದ್ರದಲ್ಲಿ ಅಗತ್ಯದಷ್ಟು ಜನರು ಇಲ್ಲದೇ ಇದ್ದಾಗ ಸೀಸೆ ತೆರೆದರೆ ಲಸಿಕೆ ವ್ಯರ್ಥವಾಗುತ್ತದೆ. ಹೀಗಾಗಿ ಅಗತ್ಯದಷ್ಟು ಜನರು ಬರುವವರೆಗೆ ಕಾಯಬೇಕು’ ಎಂದು ಜನರಿಗೆ ತಿಳಿಹೇಳಲಾಗಿದೆ. ಈ ಬಗ್ಗೆ ಅರಿವು ಮೂಡಿಸುವಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಲಸಿಕಾ ಕೇಂದ್ರದ ಸಿಬ್ಬಂದಿಯ ಪಾತ್ರ ಮಹತ್ವದ್ದು. ಜತೆಗೆ ದಿನದ ಅಂತ್ಯದಲ್ಲಿ ಕೆಲವೇ ಜನರು ಇದ್ದರೆ, ಅವರನ್ನು ಮರುದಿನ ಬರಲು ಮನವೊಲಿಸಲಾಗುತ್ತಿದೆ. ಜನರೂ ಇದಕ್ಕೆ ಸಹಕಾರ ನೀಡುತ್ತಿದ್ದಾರೆ.

ಪೋಲು ತಡೆ ಕಾರ್ಯತಂತ್ರ

ಕೋವಿಡ್ ಲಸಿಕೆ ಸಾಧ್ಯವಾದಷ್ಟು ಕಡಿಮೆ ಪೋಲಾಗುವುದು ಹಾಗೂ ಹೆಚ್ಚು ಸದ್ಬಳಕೆಯಾಗುವುದನ್ನು ಖಾತರಿಪಡಿಸಿಕೊಳ್ಳಲು ವಿವಿಧ ದೇಶಗಳು ಕೆಲವೊಂದು ನೀತಿಗಳನ್ನು ಅಳವಡಿಸಿಕೊಂಡು ಮಾದರಿ ಎನಿಸಿವೆ. ವಿಶ್ವ ಆರೋಗ್ಯ ಸಂಸ್ಥೆಯ ಕ್ರಾಸ್‌ಕಂಟ್ರಿ ಅನಾಲಿಸಿಸ್ ಈ ಬಗ್ಗೆ ಮಾಹಿತಿ ಹಂಚಿಕೊಂಡಿದೆ.

ಇಸ್ರೇಲ್: ಸ್ಥಳೀಯ ಪರಿಸ್ಥಿತಿ ನೋಡಿಕೊಂಡು ಬದಲಾವಣೆ ಮಾಡಿಕೊಳ್ಳುವ ನೀತಿಯನ್ನು ಇಸ್ರೇಲ್ ಅನುಸರಿಸಿದೆ. ಲಸಿಕೆ ಅಭಿಯಾನ ಆರಂಭವಾದಾಗ ಇಲ್ಲಿಯೂ ಲಸಿಕೆ ಪೋಲಾಗುತ್ತಿತ್ತು. ಲಸಿಕೆ ಹಾಕಿಸಿಕೊಳ್ಳುವ ಆದ್ಯತೆ ಗುಂಪಿನ ಜನರು ಬರದಿದ್ದರೆ, ಅವರಿಗಾಗಿ ಮೀಸಲಿಟ್ಟ ಅಂದಿನ ಲಸಿಕೆಯು ತ್ಯಾಜ್ಯಕ್ಕೆ ಸೇರುತ್ತಿತ್ತು. ಇದಕ್ಕೆ ಪರಿಹಾರ ಕಂಡುಕೊಂಡ ಅಧಿಕಾರಿಗಳು, ಅಂದಿನ ದಿನ ಆದ್ಯತೆ ಪಡೆದ ಗುಂಪಿನ ಸದಸ್ಯರು ಲಸಿಕೆ ಪಡೆಯಲು ಬಾರದಿದ್ದಲ್ಲಿ ಅವರಿಗಾಗಿ ಕಾಯುವ ಪರಿಪಾಟ ನಿಲ್ಲಿಸಲಾಯಿತು. ಇದರ ಬದಲಾಗಿ, ಮುಂದಿನ ಹಂತದಲ್ಲಿ ಆದ್ಯತೆ ಪಡೆದಿರುವ ಗುಂಪಿನ ಸದಸ್ಯರಿಗೆ ಲಸಿಕೆ ನೀಡುವ ನಿರ್ಧಾರಕ್ಕೆ ಬರಲಾಯಿತು.

ಇಸ್ರೇಲ್ ಉತ್ತಮವಾದ ಲಸಿಕೆ ವಿತರಣಾ ಜಾಲವನ್ನು ಹೊಂದಿದೆ. ಹೀಗಾಗಿ ಆದ್ಯತೆಯ ಗುಂಪುಗಳಿಗೆ ಸಾಕಾಗಿ ಉಳಿಯುವಷ್ಟು ಲಸಿಕೆಯು ಕೇಂದ್ರಗಳಿಗೆ ಪೂರೈಕೆಯಾಗುತ್ತಿದೆ. ಕೇಂದ್ರಗಳಲ್ಲಿ ಲಸಿಕೆ ಉಳಿದಿದ್ದರೆ, ಅಥವಾ ಹೆಚ್ಚುವರಿ ಪೂರೈಕೆಯಾಗಿದ್ದರೆ, ಈ ಬಗ್ಗೆ ಸಾರ್ವಜನಿಕರಿಗೆ ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ಮಾಹಿತಿ ನೀಡಲಾಗುತ್ತದೆ. ಜನರು ಇಂತಹ ಲಸಿಕಾ ಕೇಂದ್ರಗಳ ಬಳಿ ಬಂದು ಸಾಲಾಗಿ ನಿಲ್ಲುತ್ತಾರೆ. ಈ ಸಾಲಿನಲ್ಲಿ ನಿಂತವರ ಪೈಕಿ ವಯಸ್ಸಿನ ಆಧಾರದಲ್ಲಿ ಲಸಿಕೆ ನೀಡಲಾಗುತ್ತದೆ.

ಯುವಜನತೆ ಲಸಿಕೆ ಪಡೆಯುವ ಉತ್ಸಾಹವನ್ನು ನೋಡಿ, ಲಸಿಕೆ ಬೇಡ ಎಂದು ದೂರವುಳಿದಿದ್ದ ಹಿರಿಯ ನಾಗರಿಕರಲ್ಲಿ ಬದಲಾವಣೆ ಕಂಡುಬಂದಿದೆ ಎಂದು ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ. ಹೆಚ್ಚುವರಿ ಪೂರೈಕೆಯ ಕಾರಣ, ನಗರದ ಜನರು ಹೊರವಲಯದ ಲಸಿಕಾ ಕೇಂದ್ರಗಳಲ್ಲಿ ಬಾಕಿ ಉಳಿಯುವ ಲಸಿಕೆ ಪಡೆಯಲು ಹೋಗಿಬರುವ ಪ್ರವೃತ್ತಿ ಕಂಡುಬರುತ್ತಿದೆ. ಹೀಗಾಗಿ ಪೋಲು ತಪ್ಪಿದೆ.

ಇಂಗ್ಲೆಂಡ್: ಲಸಿಕೆ ಪಡೆಯುವವರು ಹಾಗೂ ಮುಂಚೂಣಿ ಕಾರ್ಯಕರ್ತರ ಮೀಸಲು ಪಟ್ಟಿಯನ್ನು ಲಸಿಕಾ ಕೇಂದ್ರಗಳು ಹೊಂದಿರಬೇಕು ಎಂದು ರಾಷ್ಟ್ರೀಯ ಆರೋಗ್ಯ ಸೇವಾ ಇಲಾಖೆ ನಿಯಮಾವಳಿ ರೂಪಿಸಿದೆ. ಲಸಿಕೆ ವ್ಯರ್ಥವಾಗುವ ಸನ್ನಿವೇಶ ಎದುರಾದಲ್ಲಿ, ಮೀಸಲು ಪಟ್ಟಿಯಲ್ಲಿರುವ ವ್ಯಕ್ತಿಗಳು ಸೂಚನೆ ನೀಡಿದ ಕೆಲ ಹೊತ್ತಿನಲ್ಲೇ ಲಸಿಕಾ ಕೇಂದ್ರಕ್ಕೆ ಬರಬೇಕು ಎಂಬ ನಿಯಮ ರೂಪಿಸಿದೆ. ಮೀಸಲು ಪಟ್ಟಿಯಲ್ಲಿರುವ ವ್ಯಕ್ತಿಗಳು ಲಸಿಕೆ ಸ್ವೀಕರಿಸಲು ಅರ್ಹರಾಗಿರುವ ಸಮೂಹದಲ್ಲಿರಬೇಕು. ಅರ್ಹ ಗುಂಪಿನಿಂದ ಹೊರಗಿರುವ ವ್ಯಕ್ತಿಗಳಿಗೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಲಸಿಕೆ ಹಾಕಲಾಗುತ್ತದೆ. ಡೋಸ್ ವ್ಯರ್ಥವಾಗುವುದನ್ನು ತಪ್ಪಿಸಲು ಲಸಿಕಾ ಕೇಂದ್ರಗಳು ‘ಪರಸ್ಪರ ಸಹಾಯ’ ವ್ಯವಸ್ಥೆಯಡಿಯಲ್ಲಿ ಲಸಿಕೆಯನ್ನು ಇತರ ಕೇಂದ್ರಗಳಿಗೆ ವರ್ಗಾಯಿಸಬಹುದು.

ಅಮೆರಿಕ: ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಿದ್ದರಿಂದ, ಅಮೆರಿಕದಲ್ಲಿ ಲಸಿಕೆ ಪೋಲು ಪ್ರಮಾಣ ಕಡಿಮೆಯಿದೆ. ಸಿ.ಡಿ.ಸಿ ಪ್ರಕಾರ, ಶೇ 0.44ರಷ್ಟು ಮಾತ್ರ ಲಸಿಕೆ ವ್ಯರ್ಥವಾಗಿದೆ. ಆದರೆ ಈ ಪ್ರಮಾಣ ಮುಂದಿನ ದಿನಗಳಲ್ಲಿ ಹೆಚ್ಚಾಗಬಹುದು ಎನ್ನುತ್ತಾರೆ ಬ್ರೌನ್ ವಿಶ್ವವಿದ್ಯಾಲಯದ ಸಾರ್ವಜನಿಕ ಆರೋಗ್ಯ ವಿಭಾಗದ ಮುಖಸ್ಥ ಆಶಿಶ್ ಝಾ. ಬಡರಾಷ್ಟ್ರಗಳು ಲಸಿಕೆಗಾಗಿ ಪರದಾಡುತ್ತಿದ್ದರೆ, ಮುಂದುವರಿದ ದೇಶಗಳಲ್ಲಿ ಲಸಿಕೆ ತಯಾರಿ ಹಾಗೂ ಪೂರೈಕೆ ಪ್ರಮಾಣ ಕ್ರಮೇಣ ಹೆಚ್ಚಾಗುತ್ತಿದೆ. ಇದು ಲಸಿಕೆ ಪೋಲಾಗಲು ಕಾರಣವಾಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಚಿಲಿ: ಇಲ್ಲಿ ರಷ್ಯಾ ಮತ್ತು ಚೀನಾದ ಲಸಿಕೆಗಳನ್ನು ಬಳಸಲಾಗುತ್ತಿದೆ. ಪ್ರತೀ ದಿನ ಬಾಕಿ ಉಳಿಯುವ ಲಸಿಕೆಗಳನ್ನು ಆದ್ಯತೆರಹಿತ ಗುಂಪುಗಳಿಗೆ ವಿತರಿಸಿ, ಪೋಲು ತಡೆಯಲಾಗುತ್ತಿದೆ.

ಪಶ್ಚಿಮ ಬಂಗಾಳದಲ್ಲೂ ಇದೇ ಕಾರ್ಯತಂತ್ರ

1.61 ಲಕ್ಷ **ಮೇ ತಿಂಗಳಲ್ಲಿ ಹೆಚ್ಚುವರಿ ಬಳಕೆಯಿಂದ ದೊರೆತ ಹೆಚ್ಚುವರಿ ಡೋಸ್‌ಗಳು**

ಕೇರಳದಲ್ಲಿ ಅನುಸರಿಸುತ್ತಿರುವಂತಹ ಲಸಿಕಾ ಕಾರ್ಯತಂತ್ರವನ್ನೇ ಪಶ್ಚಿಮ ಬಂಗಾಳದಲ್ಲಿಯೂ ಅನುಸರಿಸಲಾಗುತ್ತಿದೆ. ಅತ್ಯುತ್ತಮ ಮಟ್ಟದ ತರಬೇತಿ ಪಡೆದಿರುವ ದಾದಿಯರನ್ನು ಕೋವಿಡ್ ಲಸಿಕಾ ಕಾರ್ಯಕ್ರಮಕ್ಕೆ ನಿಯೋಜನೆ ಮಾಡಲಾಗಿದೆ. ಲಸಿಕೆ ಪೋಲನ್ನು ತಡೆಯುವ ಬಗ್ಗೆ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಮತ್ತು ಜನರಲ್ಲಿ ಅರಿವು ಮೂಡಿಸಲಾಗಿದೆ ಎಂದು ಪಶ್ಚಿಮ ಬಂಗಾಳ ಆರೋಗ್ಯ ಇಲಾಖೆ ಹೇಳಿದೆ.

ಒಂದು ಸೀಸೆಯಲ್ಲಿರುವ ಡೋಸ್‌ಗಳನ್ನು ಪೂರ್ಣಪ್ರಮಾಣದಲ್ಲಿ ಬಳಸುವಷ್ಟು ಜನರು ಲಸಿಕಾ ಕೇಂದ್ರದಲ್ಲಿ ಇದ್ದರಷ್ಟೇ, ಸೀಸೆಯನ್ನು ತೆರೆಯಲಾಗುತ್ತಿದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಕೋವಿನ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳದೇ ಇರುವವರ ವಿವರವನ್ನು ಆಶಾ ಕಾರ್ಯಕರ್ತೆಯರು ಸಂಗ್ರಹಿಸಿದ್ದಾರೆ. ಲಸಿಕೆ ಕಾರ್ಯಕ್ರಮದ ಬಗ್ಗೆ ಮತ್ತು ಅಗತ್ಯವಿದ್ದಾಗ ಲಸಿಕಾ ಕೇಂದ್ರಕ್ಕೆ ಬರಬೇಕಾಗುತ್ತದೆ ಎಂಬುದರ ಬಗ್ಗೆ ಜನರಿಗೆ ಆಶಾ ಕಾರ್ಯಕರ್ತೆಯರು ಮಾಹಿತಿ ನೀಡಿರುತ್ತಾರೆ. ಲಸಿಕಾ ಕೇಂದ್ರದಲ್ಲಿ ಜನರು ಕೊರತೆಯಾದಾಗ, ಅಗತ್ಯವಿರುವವಷ್ಟು ಜನರನ್ನು ಕರೆದುಕೊಂಡು ಬರುತ್ತಾರೆ. ಹೀಗಾಗಿ ಲಸಿಕೆ ವ್ಯರ್ಥವಾಗುವುದನ್ನು ತಡೆಯಲು ಸಾಧ್ಯವಾಗಿದೆ ಎಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಆಧಾರ: ಪಿಟಿಐ, ವಿಶ್ವ ಆರೋಗ್ಯ ಸಂಸ್ಥೆಯ ಕ್ರಾಸ್‌ಕಂಟ್ರಿ ಅನಲಿಸಿಸ್

‘ಬಿಜೆಪಿ ಬೆಂಬಲಿಸಿದ್ದಕ್ಕೆ ಅತ್ಯಾಚಾರ’

ಎಸ್‌ಐಟಿ ತನಿಖೆಗೆ ಸಂತ್ರಸ್ತೆಯ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಕುಟುಂಬದವರು ಬಿಜೆಪಿಯನ್ನು ಬೆಂಬಲಿಸಿದ ಕಾರಣಕ್ಕೆ ತಮ್ಮ ಮೇಲೆ ಟಿಎಂಸಿ ಕಾರ್ಯಕರ್ತರು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಈ ಘಟನೆ ಮತ್ತು ಚುನಾವಣೋತ್ತರ ನಡೆದ ಎಲ್ಲಾ ಹಿಂಸಾಚಾರಗಳ ಬಗ್ಗೆ ಎಸ್‌ಐಟಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ 60 ವರ್ಷ ವಯಸ್ಸಿನ ಒಬ್ಬ ಮಹಿಳೆ ಹಾಗೂ 17 ವರ್ಷದ ಬಾಲಕಿಯೊಬ್ಬರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.

‘ಆರು ವರ್ಷ ವಯಸ್ಸಿನ ನನ್ನ ಮೊಮ್ಮಗನ ಮುಂದೆ ಮೇ 4ರಂದು ಮಧ್ಯರಾತ್ರಿಯ ಸಮಯದಲ್ಲಿ ಟಿಎಂಸಿ ಕಾರ್ಯಕರ್ತರು ನನ್ನ ಮೇಲೆ ಅತ್ಯಾಚಾರ ನಡೆಸಿದ್ದಾರೆ. ಆಡಳಿತ ಪಕ್ಷವನ್ನು ವಿರೋಧಿಸಿದವರ ವಿರುದ್ಧ ರಾಜ್ಯದಾದ್ಯಂತ ಯಾವ ಸ್ವರೂಪದ ಹಿಂಸಾಚಾರ ನಡೆದಿದೆ ಎಂಬುದಕ್ಕೆ ಈ ಘಟನೆ ಜ್ವಲಂತ ಉದಾಹರಣೆ. ಮೇ 3ರಂದು ಚುನಾವಣಾ ಫಲಿತಾಂಶ ಘೋಷಣೆಯಾದ ನಂತರ, ಹೆಚ್ಚಾಗಿ ಟಿಎಂಸಿ ಕಾರ್ಯಕರ್ತರನ್ನೇ ಒಳಗೊಂಡಿದ್ದ, 100ರಿಂದ 200 ಮಂದಿಯ ಗುಂಪು ನನ್ನನ್ನು ಸುತ್ತುವರಿದು, ಕುಟುಂಬಸಹಿತವಾಗಿ ಮನೆಯನ್ನು ಬಿಟ್ಟುಹೋಗುವಂತೆ ಒತ್ತಾಯಿಸಿತು. ಬಿಜೆಪಿ ಬೆಂಬಲಿಗರ ಮನೆಗಳಿಗೆ ಬಾಂಬ್‌ಗಳನ್ನು ಎಸೆಯುತ್ತಾ ಮನೆಗಳನ್ನು ಸುಟ್ಟುಹಾಕಿತು. ಜನರಿಗೆ ದೈಹಿಕ ಹಿಂಸೆ ನೀಡಲಾಯಿತು. ಮನೆಗಳಲ್ಲಿನ ಒಡವೆಗಳನ್ನು ಕದ್ದೊಯ್ದರು’ ಎಂದು 60 ವರ್ಷದ ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ವಿರೋಧಿ ರಾಷ್ಟ್ರಗಳ ನಾಗರಿಕರನ್ನು ಭಯಭೀತಗೊಳಿಸಲು ಮಹಿಳೆಯರ ಮೇಲೆ ಅತ್ಯಾಚಾರದ ಅಸ್ತ್ರವನ್ನು ಬಳಸಿದ ಉದಾಹರಣೆಗಳು ಇತಿಹಾಸದಲ್ಲಿ ಸಾಕಷ್ಟಿವೆ. ಆದರೆ, ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಕಾರಣಕ್ಕೆ, ಮಹಿಳೆ ಅಥವಾ ಅವಳ ಕುಟುಂಬದ ವಿರುದ್ಧ ಇಂಥ ಕ್ರೂರ ಕೃತ್ಯಗಳು ನಡೆದ ಉದಾಹರಣೆಗಳಿಲ್ಲ ಎಂದು ಅವರು ಹೇಳಿದ್ದಾರೆ.

ಆಡಳಿತ ಮತ್ತು ಪೊಲೀಸರ ನಿಷ್ಕ್ರಿಯತೆಯು ಇಂಥ ಕೃತ್ಯಗಳಿಗೆ ಪರೋಕ್ಷ ಪ್ರೋತ್ಸಾಹ ನೀಡಿದ್ದಷ್ಟೇ ಅಲ್ಲ, ಅತ್ಯಾಚಾರಕ್ಕೆ ಒಳಗಾದವರು ದೂರು ನೀಡಲು ಹೋದರೆ ಅವರನ್ನು ಅಪಮಾನಿಸಿರುವುದು ಆಘಾತಕಾರಿಯಾಗಿದೆ. ತನ್ನ ಅಳಿಯನು ಘಟನೆಯ ಬಗ್ಗೆ ದೂರು ನೀಡಲು ಹೋದಾಗ ಪೊಲೀಸರು ದೂರು ದಾಖಲಿಸಲು ನಿರಾಕರಿಸಿದರು. ಎಫ್‌ಐಆರ್ ದಾಖಲಿಸುವಂತೆ ಸೊಸೆಯು ಹಟ ಹಿಡಿದಾಗ, ಐವರು ಆರೋಪಿಗಳಲ್ಲಿ ಒಬ್ಬ ವ್ಯಕ್ತಿಯ ವಿರುದ್ಧ ಮಾತ್ರ ದೂರು ದಾಖಲಿಸಿದ್ದಾರೆ. ತಮ್ಮನ್ನು ಆ ನಂತರ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿದ್ದು, ಅತ್ಯಾಚಾರ ನಡೆದಿರುವುದು ತಪಾಸಣೆಯಿಂದ ದೃಢಪಟ್ಟಿದೆ ಎಂದು ಮಹಿಳೆ ಹೇಳಿದ್ದಾರೆ.

‘ನಿನ್ನ ಇತರ ಪುತ್ರಿಯರೂ ಇದೇ ಸ್ಥಿತಿಯನ್ನು ಎದುರಿಸಬೇಕಾದೀತು ಎಂದು ಪೊಲೀಸರು ಬೆದರಿಕೆ ಹಾಕುತ್ತಿದ್ದಾರೆ. ಆದ್ದರಿಂದ ಘಟನೆಯ ವಿಚಾರಣೆಯನ್ನು ಪಶ್ಚಿಮ ಬಂಗಾಳದಿಂದ ಬೇರೆ ರಾಜ್ಯಕ್ಕೆ ವರ್ಗಾಯಿಸಬೇಕು’ ಎಂದು ಮಹಿಳೆ ಮನವಿ ಮಾಡಿದ್ದಾರೆ.

ಟಿಎಂಸಿ ಕಾರ್ಯಕರ್ತರು ಮೇ 9ರಂದು ತನ್ನ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಆರೋಪಿಸಿರುವ ಪರಿಶಿಷ್ಟ ಜಾತಿಗೆ ಸೇರಿದ 17 ವರ್ಷದ ಬಾಲಕಿಯೊಬ್ಬಳು, ಘಟನೆಯ ಬಗ್ಗೆ ಎಸ್‌ಐಟಿ ಅಥವಾ ಸಿಬಿಐ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಸ್ನೇಹಿತರ ಜತೆಗೆ ಮನೆಗೆ ಮರಳುತ್ತಿದ್ದಾಗ ಟಿಎಂಸಿಯ ನಾಲ್ವರು ಕಾರ್ಯಕರ್ತರು ನನ್ನ ಮೇಲೆ ಅತ್ಯಾಚಾರ ನಡೆಸಿದ್ದಾರೆ. ನಮ್ಮ ಕುಟುಂಬದವರು ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂಬ ಕಾರಣಕ್ಕೆ ಅತ್ಯಾಚಾರ ನಡೆಸಲಾಗಿದೆ ಎಂದು ಅವರು ರೋಪಿಸಿದ್ದಾರೆ.

ಹೈಕೋರ್ಟ್ ವಿಚಾರಣೆ ನಡೆಸುತ್ತಿದೆ: ಸರ್ಕಾರ

ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಬೇಕೆಂಬ ಮನವಿಗೆ ಪ್ರತಿಕ್ರಿಯೆ ನೀಡಿರುವ ಪಶ್ಚಿಮ ಬಂಗಾಳ ಸರ್ಕಾರವು, ‘ಹೈಕೋರ್ಟ್ ಈಗಾಗಲೇ ವಿಚಾರಣೆಯನ್ನು ಕೈಗೆತ್ತಿಕೊಂಡಿರುವುದರಿಂದ ಬೇರೆ ಯಾರ ಮಧ್ಯಪ್ರವೇಶದ ಅಗತ್ಯವೂ ಇಲ್ಲ. ಈ ಎಲ್ಲಾ ಆರೋಪಗಳು ಹಾದಿ ತಪ್ಪಿಸುವಂಥವು ಮತ್ತು ರಾಜಕೀಯ ಪ್ರೇರಿತವಾದವುಗಳು. ರಾಷ್ಟ್ರೀಯ ಮಹಿಳಾ ಆಯೋಗವು ಈಗಾಗಲೇ ತನಿಖೆ ಆರಂಭಿಸಿದ್ದು ರಾಜ್ಯ ಸರ್ಕಾರ ಪೂರ್ಣ ಸಹಕಾರ ನೀಡುತ್ತಿದೆ. ಎಫ್‌ಐಆರ್ ದಾಖಲಾಗಿದೆ, ಕೆಲವರನ್ನು ಬಂಧಿಸಲಾಗಿದೆ ಅಷ್ಟೇ ಅಲ್ಲದೆ ಸಂತ್ರಸ್ತರಿಗೆ ಪರಿಹಾರವನ್ನೂ ನೀಡಲಾಗಿದೆ’ ಎಂದಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘**ಪ್ರಧಾನಿ** ನರೇಂದ್ರ ಮೋದಿ ಅವರ ಮೇಲಿನ ದ್ವೇಷದ ಕಾರಣ ಕಾಂಗ್ರೆಸ್ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಹಳ್ಳಹಿಡಿಸುತ್ತಿದೆ’ ಎಂದು ಬಿಜೆಪಿ ರಾಷ್ಟ್ರೀಯ ಮಹಿಳಾ ಮೋರ್ಚಾ ಐಟಿ ಘಟಕದ ಮುಖ್ಯಸ್ಥೆ ಪ್ರೀತಿ ಗಾಂಧಿ ಅವರು ಟ್ವೀಟ್ ಮಾಡಿದ್ದಾರೆ. ಟ್ವೀಟ್‌ನಲ್ಲಿ ಒಂದು ಪೋಸ್ಟರ್ ಹಂಚಿಕೊಂಡಿದ್ದಾರೆ. ‘ರಾಜಸ್ಥಾನದಲ್ಲಿ 11.55 ಲಕ್ಷ ಡೋಸ್, ಜಾರ್ಖಂಡ್‌ನಲ್ಲಿ ಶೇ 37ರಷ್ಟು ಡೋಸ್ ಮತ್ತು ಛತ್ತೀಸಗಡದಲ್ಲಿ ಶೇ 30ರಷ್ಟು ಡೋಸ್‌ಗಳಷ್ಟು ಲಸಿಕೆ ಪೋಲು ಮಾಡಲಾಗಿದೆ’ ಎಂದು ಪೋಸ್ಟರ್‌ನಲ್ಲಿ ವಿವರಿಸಲಾಗಿದೆ. ಈ ಪೋಸ್ಟರ್ ಮತ್ತು ಟ್ವೀಟ್ ಅನ್ನು ಬಿಜೆಪಿಯ ಹಲವು ನಾಯಕರು ಹಂಚಿಕೊಂಡಿದ್ದಾರೆ.

‘**ಪ್ರೀತಿ ಗಾಂಧಿ** ಹಂಚಿಕೊಂಡಿರುವ ಮಾಹಿತಿ ಸುಳ್ಳು’ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ರಾಜಸ್ಥಾನದಲ್ಲಿ 3.30 ಲಕ್ಷ ಡೋಸ್ ಮಾತ್ರ ಪೋಲಾಗಿದೆ. ಛತ್ತೀಸಗಡದಲ್ಲಿ ಕೋವಿಡ್ ಲಸಿಕೆ ಪೋಲಿನ ಪ್ರಮಾಣ ಶೇ 15.79. ಜಾರ್ಖಂಡ್‌ನಲ್ಲಿ ಶೇ 33.95ರಷ್ಟು ಲಸಿಕೆ ವ್ಯರ್ಥವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ‘ಈ ಮಾಹಿತಿ ತಪ್ಪು. ನಮ್ಮಲ್ಲಿ ಲಸಿಕೆ ವ್ಯರ್ಥದ ಪ್ರಮಾಣ ಶೇ 4.65ರಷ್ಟು’ ಎಂದು ಜಾರ್ಖಂಡ್ ಮುಖ್ಯಮಂತ್ರಿ ದಾಖಲೆ ನೀಡಿದ್ದಾರೆ. ‘ನಮ್ಮಲ್ಲಿ ಲಸಿಕೆ ಪೋಲಿನ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇದೆ. ನಿಮ್ಮಲ್ಲಿ ತಪ್ಪಾಗಿರುವ ಮಾಹಿತಿ ಸರಿ ಮಾಡಿ’ ಎಂದು ಛತ್ತೀಸಗಡ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರೇಮದ ಮುಖಗಳು

ಪ್ರೇಮ ಕನಲೆ ಪಿಶಾಚಿ, ತೃಪ್ತಿಯಾಂತಿರೆ ಲಕ್ಷ್ಮಿ |
ಭ್ರಾಮಿಪುದದು ಪ್ರತಿಪ್ರೇಮಯಾಚನೆಯೊಳ್ ||
ಮಾಮಕವಿದೆಂದಾವುದಕೊ ತಾನೆ ಬಲಿವೋಗಿ |
ಶಾಮನವನೊಂದುವುದು – ಮಂಕುತಿಮ್ಮ
|| 428 ||

ಪದ-ಅರ್ಥ: ಕನಲೆ = ಕೋಪಿಸಿಕೊಂಡರೆ, ಕೆರಳಿದರೆ, ತೃಪ್ತಿಯಾಂತಿರೆ = ತೃಪ್ತಿಯಾಂತು (ತೃಪ್ತಿಪಡೆದು) + ಇರೆ, ಭ್ರಾಮಿಪುದದು = ಭ್ರಮಿಸುವುದು, ಮಾಮಕವಿದೆಂದಾವುದಕೊ = ಮಾಮಕವಿದು (ಇದು ನನ್ನದು) + ಎಂದು + ಆವುದಕೊ, ಬಲಿವೋಗಿ = ಬಲಿಯಾಗಿ, ಶಾಮನವನೊಂದುವುದು = ಶಾಮನವನು (ಶಾಂತಿಯನು) + ಹೊಂದುವುದು

ವಾಚ್ಯಾರ್ಥ: ಪ್ರೇಮ ಕೆರಳಿದರೆ ಪಿಶಾಚಿಯಾಗುತ್ತದೆ, ತೃಪ್ತಿಹೊಂದಿದರೆ ಲಕ್ಷ್ಮಿಯಾಗುತ್ತದೆ. ಹೀಗೆ ಪ್ರತಿಯಾಗಿ ದೊರಕಿದ ಪ್ರೇಮದಲ್ಲಿ ಭ್ರಮಿಸುತ್ತದೆ. ತನ್ನದು ಎನ್ನುವ ವಸ್ತುವಿಗೆ ತನ್ನನ್ನೇ ಬಲಿಕೊಟ್ಟು ಶಾಂತಿಯನ್ನು ಪಡೆಯುತ್ತದೆ.

ವಿವರಣೆ: ಪ್ರೇಮ ಒಂದು ಸುಂದರ ಭಾವ. ಅದು ಯಾವಾಗ ಹೇಗೆ ಬದಲಾದೀತು ಎಂಬುದನ್ನು ಹೇಳುವುದು ಕಷ್ಟ. ಅತಿಯಾದ ಪ್ರೀತಿಯೇ ಅತಿಯಾದ ದ್ವೇಷವಾಗುತ್ತದೆ. ಯಾರನ್ನು ನಾವು ಪ್ರೀತಿಸುವುದಿಲ್ಲವೋ ಅವರನ್ನು ದ್ವೇಷಿಸುವುದೂ ಕಷ್ಟ. ವಾಲಿ ತನ್ನ ತಮ್ಮ ಸುಗ್ರೀವನನ್ನು ಅತಿಯಾಗಿ ಪ್ರೀತಿಸಿದ್ದ. ಅದರಂತೆಯೇ ರಾವಣನಿಗೆ ವಿಭೀಷಣನ ಬಗ್ಗೆ ವಿಪರೀತ ಅಕ್ಕರೆ. ಒಂದು ಕಾರಣಕ್ಕೆ ಅವರು ತಿರುಗಿ ನಿಂತರು, ವೈರಿಗಳಾದರು. ಪಾಶುಪತಾಸ್ತ್ರವನ್ನು ಪಡೆದ ಮೇಲೆ ಅರ್ಜುನ. ದೇವಲೋಕಕ್ಕೆ ಹೋದ. ಅಲ್ಲಿ ಇಂದ್ರಸಭೆಯಲ್ಲಿ ಊರ್ವಶಿಯನ್ನು ಕಂಡ. ಅರ್ಜುನ ಆಕೆಯನ್ನು ಅಭಿಮಾನದಿಂದ ಕಂಡದ್ದನ್ನು ಇಂದ್ರ ಕಾಮವೆಂದು ಭಾವಿಸಿ ಊರ್ವಶಿಯನ್ನು ಅರ್ಜುನನ ಅರಮನೆಗೆ ಕಳುಹಿಸುತ್ತಾನೆ. ಮನ್ಮಥನ ವಿಜಯಧ್ವಜದಂತಿದ್ದ ಊರ್ವಶಿ ಅರ್ಜುನನನ್ನು ಮೆಚ್ಚಿಸಲು ಬಂದಾಗ ಆತ ಆಕೆಗೆ ಗೌರವನ್ನು ನೀಡಿ, ಊರ್ವಶಿಯನ್ನು ತಮ್ಮ ವಂಶೋದ್ಭವಕ್ಕೆ ತಾಯಿ ಎಂದು ಕರೆದಾಗ ಕ್ಷಣಾರ್ಧದಲ್ಲಿ ಆಕೆಯ ಪ್ರೇಮ ಕ್ರೋಧವಾಗುತ್ತದೆ. ಅದನ್ನು ಕುಮಾರವ್ಯಾಸ ವರ್ಣಿಸುವ ರೀತಿ ಅನನ್ಯವಾದದ್ದು.

‘ತುಳುಕಿತದ್ಭುತ ರೋಷ ಸುಯ್ಲಿನ ಝಳ ಹೊಡೆದು ಮೂಗುತಿಯ ಮುತ್ತಿನ ಬೆಳಕು ಕುಂದಿತು ಕುಂದಿತಮಳಚ್ಛವಿ ಮುಖಾಂಬುಜದ...’ ಪ್ರೇಮ ಕುದಿದರೆ, ಅದಕ್ಕೆ ಮನ್ನಣೆ ದೊರೆಯದಿದ್ದರೆ ಅದು ಪೈಶಾಚಿಕ ಕೋಪವಾಗುತ್ತದೆ. ಆದರೆ ಪ್ರೇಮಕ್ಕೆ ಸರಿಯಾದ ಪ್ರತಿಸ್ಪಂದನ ದೊರಕಿದರೆ ಅದು ತೃಪ್ತಿಯ ಬಂಧವಾಗುತ್ತದೆ. ರಾಧಾ-ಕೃಷ್ಣರ, ಶಿವ-ಪಾರ್ವತಿಯರ, ರಾಮ-ಸೀತೆಯರ ಪ್ರೇಮಬಂಧದಂತೆ. ಪ್ರೇಮ, ಸರಿಯಾದ ಮರುನುಡಿಗೆ ಕಾತರಿಸುತ್ತದೆ. ಒಂದು ಸಲ ಪ್ರೇಮ ಸ್ಥಿರವಾದರೆ ಅದು ಯಾವ ತ್ಯಾಗಕ್ಕೂ ಸಿದ್ಧವಾಗುತ್ತದೆ. ಆ ತ್ಯಾಗದಲ್ಲೇ ಅದಕ್ಕೆ ಶಾಂತಿ. ಮಕ್ಕಳಿಗೋಸ್ಕರ ತ್ಯಾಗ ಮಾಡಿದ ತಾಯಿ ಸಂಕಟಪಡುವುದಿಲ್ಲ, ಬದಲಾಗಿ ತುಂಬ ಸಂತೋಷಪಡುತ್ತಾಳೆ. ತನಗೆ ಬೇಕಾದವರಿಗಾಗಿ, ಪ್ರೇಮಕ್ಕೆ ಒಲಿದವರಿಗಾಗಿ, ಮಾಡಿದ ತ್ಯಾಗದ ಕಥೆಗಳು ಪುರಾಣಗಳಲ್ಲಿ, ಇತಿಹಾಸದಲ್ಲಿ ಬೇಕಾದಷ್ಟು ಕಂಡು ಬರುತ್ತವೆ. ಪ್ರೇಮದಿಂದಲೆ ಕೋಪ, ಪ್ರೇಮದಿಂದಲೆ ತೃಪ್ತಿ, ಪ್ರೇಮದಿಂದಲೆ ತ್ಯಾಗ. ಕೊನೆಗೆ ಪ್ರೇಮದಿಂದಲೆ ಶಾಂತಿ. ❖

ದಿನ ಭವಿಷ್ಯ

ಮಂಗಳವಾರ ಜೂನ್ 15, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಪಂಚಮೀ ಗಂ. 32-58 (ರಾ. 7-13) ಮಂಗಳವಾರ ನಿತ್ಯ ನಕ್ಷತ್ರ ಆಶ್ಲೇಷ ಗಂ. 31-47 (ಸಾ. 6-47) ವ್ಯಾಘಾ ನಾಮ ಯೋಗ ಗಂ. 2-28 ಉಪರಿ ಹರ್ಷನಾಮ ಯೋಗ ಗಂ. 56-36 ಬವ ಕರಣ ಗಂ. 3-2 ವಿಷ ಗಂ. 2-34 ಅಮೃತ ಗಂ. 26-51 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 5-57 ಸೂರ್ಯಾಸ್ತ: 6-42 ಅದೃಷ್ಟ ಸಂಖ್ಯೆ 1 8

ಮೇಷ: ಕೆಲಸ ಕಾರ್ಯಗಳು ಸುಗಮವಾಗಿ ಕೈಗೂಡಲಿದೆ. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮವಾಗಲಿದೆ. ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ ಕೂಡಿಬರುವುದು.

ವೃಷಭ: ಹಿರಿಯರಿಂದ ಬಳುವಳಿಯಾಗಿ ಸಂಪತ್ತನ್ನು ನಿರೀಕ್ಷಿಸಬಹುದು. ಹಿರಿಯರ ಆಶೀರ್ವಾದದಿಂದಾಗಿ ಆದಾಯದ ಮೂಲಗಳು ಗೋಚರವಾಗಿ ಸಂತೃಪ್ತಿ ಕಂಡುಬರುವುದು.

ಮಿಥುನ: ಕೋರ್ಟ್–ಕಚೇರಿ ವ್ಯವಹಾರಗಳಲ್ಲಿ ಹಿನ್ನಡೆ. ಹೊಸ ಮನೆ, ಜಮೀನು ಪ್ರಾಪ್ತವಾಗುವ ಯೋಗ. ಸಾಂಸಾರಿಕ ಸುಖ ಅನುಭವಿಸಲಿದ್ದೀರಿ. ಕೃಷಿ ಬದುಕಿನವರಿಗೆ ಸ್ವಲ್ಪ ಮಟ್ಟಿನ ಬಿಡುವು ದೊರೆಯುವುದು.

ಕರ್ಕಾಟಕ: ಚೋರ ಭಯದ ನಿಮಿತ್ತವಾಗಿ ಬೆಲೆಬಾಳುವ ವಸ್ತುಗಳ ಬಗ್ಗೆ ಎಚ್ಚರಿಕೆ ಅಗತ್ಯ. ಮಿತ್ರರೊಂದಿಗೆ ಮನಃಸ್ತಾಪ ಉಂಟಾಗುವ ಸಾಧ್ಯತೆ. ಸಂಗಾತಿಯಿಂದ ವಿಶೇಷ ಕೊಡುಗೆ ಪ್ರಾಪ್ತಿ.

ಸಿಂಹ: ಭೂ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಅತಿಯಾದ ಕಾರ್ಯ ಒತ್ತಡದಿಂದಾಗಿ ಗೊಂದಲಮಯ ಪರಿಸ್ಥಿತಿ ನಿರ್ಮಾಣ. ಸಂಗಾತಿಯಿಂದ ಸಿಹಿ ಸುದ್ದಿ. ವಿದ್ಯಾರ್ಥಿಗಳಿಗೆ ಕಠಿಣ ಸವಾಲುಗಳು ಎದುರಾಗಲಿವೆ.

ಕನ್ಯಾ: ಸ್ವಲ್ಪ ಮಟ್ಟಿನ ಕಷ್ಟನಷ್ಟ ಅನುಭವಿಸುವ ಸಾಧ್ಯತೆಗಳು ಕಂಡುಬರುತ್ತಿದ್ದು ಜಾಗರೂಕರಾಗಿರುವುದು ಉತ್ತಮ. ವ್ಯಾಪಾರಸ್ಥರಿಗೆ ಉತ್ತಮ ಲಾಭ ಗಳಿಕೆ. ಅಪಾಯಕಾರಿ ಕೆಲಸ ಮತ್ತು ವಾಹನಗಳಿಂದ ದೂರವಿರುವುದು ಒಳಿತು.

ತುಲಾ: ಸಂದುನೋವು, ಬೆನ್ನು ನೋವಿನಿಂದ ಬಳಲುವ ಸಾಧ್ಯತೆ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಬರಲಿರುವ ಅವಘಡವನ್ನು ತಪ್ಪಿಸಿಕೊಳ್ಳಿ. ವೈದ್ಯಕೀಯ ರಂಗದಲ್ಲಿರುವವರಿಗೆ ಉತ್ತಮ ಆದಾಯದ ನಿರೀಕ್ಷೆ.

ವೃಶ್ಚಿಕ: ವ್ಯವಹಾರದಲ್ಲಿ ಮೋಸಹೋಗುವ ಸಾಧ್ಯತೆ. ಬಂಧು ವರ್ಗದವರಿಂದ ಸಂತಸದ ಸುದ್ದಿ ನಿರೀಕ್ಷಿಸಬಹುದು. ಸರ್ಕಾರಿ ಉದ್ಯೋಗಿಗಳಿಗೆ ಉದ್ಯೋಗದಲ್ಲಿ ಬದಲಾವಣೆ. ಮಕ್ಕಳ ಆರೋಗ್ಯದ ಬಗ್ಗೆ ಗಮನವಿರಲಿ.

ಧನು: ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರ ವಾತಾವರಣ ಮೂಡಲಿದೆ. ಮದುವೆ ಮುಂಜಿ ಸಮಾರಂಭಗಳಲ್ಲಿ ಭಾಗಿಯಾಗುವಿರಿ. ಬಂಧು ಬಾಂಧವರ ಸಮಾಗಮ ಸಾಧ್ಯತೆ. ಮಕ್ಕಳ ವಿಷಯದಲ್ಲಿ ಗಮನವಿರಲಿ.

ಮಕರ: ಮೇಲಾಧಿಕಾರಿಗಳಿಂದ ಮೆಚ್ಚುಗೆಯ ಮಾತುಗಳನ್ನು ಕೇಳಲಿದ್ದೀರಿ. ವಿದ್ಯಾರ್ಥಿಗಳಿಗೆ ನಿರಾಳತೆ ಉಂಟಾಗುವುದು. ದಿನಸಿ ವ್ಯಾಪಾರಿಗಳಿಗೆ ಸ್ವಲ್ಪಮಟ್ಟಿನ ನಷ್ಟ ಉಂಟಾಗುವ ಸಾಧ್ಯತೆ.

ಕುಂಭ: ಭೂ ವ್ಯವಹಾರದಲ್ಲಿ ಅಧಿಕ ಲಾಭದ ನಿರೀಕ್ಷೆ. ರಾಜಕೀಯ ರಂಗದಲ್ಲಿರುವವರಿಗೆ ಉನ್ನತ ಹುದ್ದೆ ಪ್ರಾಪ್ತವಾಗುವ ಸಾಧ್ಯತೆ. ನೀಡಿದ ಸಾಲಗಳು ಮರುಪಾವತಿಯಾಗುವವು. ವಿದ್ಯಾರ್ಥಿಗಳಿಗೆ ಯಶಸ್ಸಿನ ಉತ್ತುಂಗ.

ಮೀನ: ಸ್ಥಿರಾಸ್ತಿ ಪ್ರಾಪ್ತವಾಗುವ ಸಾಧ್ಯತೆಯಿದ್ದು, ಭೂ ಖರೀದಿಗೆ ಯೋಗ್ಯ ದಿನವಾಗಿದೆ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆ. ಹೊಸ ಮನೆ, ಸಂತಾನ ಭಾಗ್ಯ ದೊರಕಿ ಸಂತಸದ ವಾತಾವರಣ ಮೂಡುವುದು.

ನಿಮ್ಮ ಜನ್ಮದಿನ 15-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ನಿಮ್ಮ ನಡೆ ನುಡಿಗಳಿಂದ ಇತರರ ಮನ ಗೆಲ್ಲುವಿರಿ. ವಿದ್ಯಾರ್ಥಿಗಳು ಹೆಚ್ಚಿನ ಪ್ರಗತಿಯನ್ನು ತೋರುವಿರಿ. ಪ್ರತಿಭೆಯ ದೆಸೆಯಿಂದಾಗಿ ಅಪಾರ ಅಭಿಮಾನಿಗಳನ್ನು ಗಳಿಸಿಕೊಂಡು ಸಾರ್ವಜನಿಕ ಮನ್ನಣೆಗೆ ಪಾತ್ರರಾಗುವಿರಿ.

ಪದಬಂಧ 4628 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಬೌದ್ಧರ ದೇವಾಲಯ (3)
3.ಮಣ್ಣು ಕಲೆಸಿದ ನೀರು (3)
5.ಪುಣ್ಯ ಸ್ಥಳವಿದು (2)
6.ಧಮಕಿ ಹಾಕುತ್ತಿರುವನಲ್ಲಾ ಈ ನೀಚ ವ್ಯಕ್ತಿ! (3)
7.ಸ್ಮರಣ ಶಕ್ತಿ ಚನ್ನಾಗಿರುವವನು (4)
8.ಸತಿ ಸಾವಿತ್ರಿಯ ಪತಿ (4)
10.ಕನ್ನಡಿಗನ ಚೆಸ್ ತಿರುವುಮುರುವಾಗಿದೆ (4)
11.ಚಾವಡಿಯನ್ನೇರಿದ ಪಿಸುಣ (4)
13.ಹಾರದ ಹತ್ತಿರ ಬಿದ್ದಿರುವ ಹಿಮ (3)
14.ಹೆದರಿಕೆ ಈ ರೀತಿ ಬಂದಿದೆ (2)
15.ಗಸಗಸೆ ಚಲ್ಲಿದ್ದು ಈ ಹೆಬ್ಬಾಗಿಲ ಬಳಿ! (3)
17.ಹಿಂದೂ ಸಂವತ್ಸರದಲ್ಲಿ ಎರಡನೆಯದು (3)

ಮೇಲಿಂದ ಕೆಳಕ್ಕೆ

1.ಅನುಮಾನಕ್ಕೊಂದು ಪರ್ಯಾಯ ಪದ (2)
2.ತಾಪತ್ರಯ ತೋಡಿಕೊಂಡು ಬರೆದ ಓಲೆ (2)
4.ಒಳ್ಳೆಯ ಭಾವ (3)
5.ಸುಖದ ಸುದ್ದಿಯಿದು (6)
6.ವರ್ಣಿಸಲು ಶಕ್ಯವಲ್ಲದ್ದು (6)
7.ಪ್ರೀತಿ ಪಾತ್ರನಾದವನು (3)
9.ಶಾಶ್ವತವಿರದೆ ನಾಶವಾಗುವಂಥದ್ದು (3)
12.ಕೋಡನ್ನೇರಿದ ಕೋತಿ (3)
14.ಭವನದಲ್ಲಿರುವ ಸಂಸಾರ (2)
16.ನೀರು ಒಸರುವ ಜಾಗ (2)



4627ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಪರೂಪ 3.ಸನಾತನ 5.ವಿಪುಲ 7.ದಟ್ಟಿ 8.ರಸ್ತೆ 9.ಗುರಿ 10.ಉತ್ತರಾಯಣ 12.ಭಾಷೆ 13.ರವ 14.ಜಾಗ 15.ಮೃತ್ತಿಕೆ 17.ಅಂತರಂಗ 18.ಸನ್ನಿಧಾನ

ಮೇಲಿಂದ ಕೆಳಕ್ಕೆ: 1.ಅವಕುಂಠನ 2.ಪದವಿ 3.ಸಕಾಲ 4.ತಲೋದರಿ 6.ಪುನರಾವೃತ್ತಿ 9.ಗುಣ 10.ಉಷೆ 11.ಅವಲೋಕನ 12.ಭಾಗವತ 15.ಮೃದಂಗ 16.ಕೆಲಸ

ಸುಡೊಕು 5014

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5013 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಸಿಇಟಿ: ಅರ್ಜಿ ಸಲ್ಲಿಕೆಗೆ ಜು.10 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ (2021–22) ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ–2021) ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಮಂಗಳವಾರದಿಂದ (ಜೂನ್ 15) ಜುಲೈ 10ರ ಸಂಜೆ 5.30ರವರೆಗೆ ಸಿಇಟಿಗೆ ನೋಂದಣಿ ಮತ್ತು ಅರ್ಜಿ ಸಲ್ಲಿಸಬಹುದು. ಶುಲ್ಕ ಪಾವತಿಸಲು ಜುಲೈ 13 ಕೊನೆಯ ದಿನ. ವಿಶೇಷ ಪ್ರವರ್ಗಗಳ ಪ್ರಮಾಣಪತ್ರವನ್ನು ಜುಲೈ 14ರಿಂದ 20ರ ಒಳಗೆ ಸಲ್ಲಿಸಬೇಕು. ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗೆ (ಶುಲ್ಕ ಪಾವತಿಸುವವರು ಮಾತ್ರ) ಜುಲೈ 19ರಿಂದ 22ರವರೆಗೆ ಅವಕಾಶವಿದೆ. ಆಗಸ್ಟ್ 13ರಂದು ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಎಂಜಿನಿಯರಿಂಗ್, ತಂತ್ರಜ್ಞಾನ, ಯೋಗ, ನ್ಯಾಚುರೋಪತಿ, ಬಿ.ಫಾರ್ಮ, ಫಾರ್ಮ–ಡಿ, ಕೃಷಿ ವಿಜ್ಞಾನ ಕೋರ್ಸ್, ಎರಡನೇ ವರ್ಷದ ಬಿ. ಫಾರ್ಮ ಮತ್ತು ಫಾರ್ಮ–ಡಿ, ಕೃಷಿ ವಿಜ್ಞಾನ ಕೋರ್ಸ್ ಪ್ರವೇಶಕ್ಕೆ ಆಗಸ್ಟ್ 28 ಮತ್ತು 29ರಂದು ಸಿಇಟಿ ನಡೆಯಲಿದೆ. ಶೈಕ್ಷಣಿಕ ಅರ್ಹತೆ ಮತ್ತು ಇತರ ವಿವರಗಳಿಗೆ 'ಯುಜಿಸಿಇಟಿ-2021 ಮಾಹಿತಿ ಪುಸ್ತಕ'ವನ್ನು ಕೆಇಎ ವೆಬ್‌ಸೈಟ್‌ನಿಂದ (http://kea.kar.nic.in) ಡೌನ್‌ಲೋಡ್ ಮಾಡಿಕೊಳ್ಳಬಹುದು.

ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಸೀಟುಗಳ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೀಟ್) -2021ರಲ್ಲಿ ಅರ್ಹತೆ ಪಡೆಯಬೇಕು. ಆರ್ಕಿಟೆಕ್ಚರ್ ಪ್ರವೇಶಕ್ಕೆ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್‌ನವರು ನಡೆಸುವ ಎನ್‌ಎಟಿಎ-2021 ಅಥವಾ 2021ರ ಜೆಇಇ-2 ಪರೀಕ್ಷೆಯಲ್ಲಿ ಕಡ್ಡಾಯವಾಗಿ ಅರ್ಹತೆ ಪಡೆಯಬೇಕು. ಜೊತೆಗೆ, ಸಿಇಟಿ-2021 ಗೆ ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು, ಅರ್ಜಿ ಸಲ್ಲಿಸುವುದೂ ಕಡ್ಡಾಯ. ಹೆಚ್ಚಿನ ಮಾಹಿತಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1st Year Remembrance

SRI K. ADISESH
24.07.1956 - 15.06.2020
Your ideals are source of inspiration to us for better performance always.
By Staff:
New India Shipping Services,
New Interport Shipping Services,
S&S Clearing Services

ಹನ್ನೆರಡನೇ ವರ್ಷದ ಸವಿನೆನಪಿಗಾಗಿ

ಸಿ. ಲೋಕೇಶ್ ರೆಡ್ಡಿ
ಜನನ: 17-01-1978, ಮರಣ: 15-06-2009
ನಂ. 5, ಹೆಚ್.ವಿ.ರೆಡ್ಡಿ ಲೇ-ಔಟ್, ಕುಂದಲಹಳ್ಳಿ, ಬೆಂ.
ನೀನು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದರೂ ನಿನ್ನ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ.
ಅನುದಿನವೂ, ಅನುಕ್ಷಣವೂ, ನಿನ್ನ ಸ್ಮರಣೆಯೇ ನಮಗೆ ದಿವ್ಯ ಚೇತನವಾಗಿದೆ.
ಭಗವಂತನು ನಿನ್ನ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ದು:ಖತಪ್ತರು
ತಂದೆ, ತಾಯಿ ಮತ್ತು ಕುಟುಂಬ ವರ್ಗದವರು

RESPECTFUL HOMAGE



Sri K. C. N. Chandrashekar
Past Vice-President
Seshadripuram Educational Trust
Bengaluru | Mysuru | Mandya | Tumakuru
The President, Trustees, Principals, Staff and Students of Seshadripuram Group of Institutions pay their respectful homage to **Sri K. C. N. Chandrashekar**, who left for his heavenly abode on **Monday, 14th June 2021.**

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಒಂದೇ ತಿಂಗಳಲ್ಲಿ ಐವರನ್ನು ಕಳೆದುಕೊಂಡು ಅನಾಥವಾದ ಕುಟುಂಬ

ಮೊಮ್ಮಗಳಿಗೆ ಅಜ್ಜಿಯೇ ಆಸರೆ!

• ಜಿ.ಶಿವಕುಮಾರ

ರಶ್ಮಿ ಹಾಗೂ ಕಮಲಾಕ್ಷಮ್ಮ

ಬೆಂಗಳೂರು: ಕಣ್ಣೆದುರು ಬೆಳೆದು ದೊಡ್ಡವರಾದ ಮಕ್ಕಳು ಕೊನೆಗಾಲದಲ್ಲಿ ತನಗೆ ಆಸರೆಯಾಗಿ ನಿಲ್ಲಬಹುದೆಂಬ ಕನಸು ಕಂಡಿದ್ದ ಆ ಹಿರಿಯ ಜೀವ ಈಗ ಅನಾಥವಾಗಿದೆ. ಕೋವಿಡ್‌ನಿಂದಾಗಿ ಕುಟುಂಬದ ಐವರು ಸದಸ್ಯರನ್ನು ಕಳೆದುಕೊಂಡಿರುವ ಆ ತಾಯಿ ಅದೇ ಕೊರಗಿನಲ್ಲಿ ಹಾಸಿಗೆ ಹಿಡಿದಿದ್ದಾಳೆ. ಇಂತಹ ಸಂದಿಗ್ಧತೆಯಲ್ಲೇ ತಬ್ಬಲಿ ಮೊಮ್ಮಗಳನ್ನು ಸಲಹುವ ಹೊಣೆಯೂ ಹೆಗಲೇರಿದೆ.

ಇದು ಮಾಗಡಿ ರಸ್ತೆಯ ಬೆಟ್ಟಹಳ್ಳಿ ನಿವಾಸಿ 52 ವರ್ಷದ ಕಾಮಾಕ್ಷಮ್ಮ ಅವರ ಕಣ್ಣೀರ ಕಥೆ.

ಇವರ ಮಕ್ಕಳಾದ ವಿನಯ್ ಕುಮಾರ್ (35 ವರ್ಷ), ಪ್ರಶಾಂತ್ ಕುಮಾರ್ (30) ಹಾಗೂ ಶಂಕರ್ (40) ಕ್ರಮವಾಗಿ ಏಪ್ರಿಲ್ 28, ಮೇ 1 ಹಾಗೂ ಮೇ 3ರಂದು ಮೃತಪಟ್ಟಿದ್ದರು.

ಈ ಆಘಾತದಿಂದ ಚೇತರಿಸಿಕೊಳ್ಳುವ ಮುನ್ನವೇ ಕಾಮಾಕ್ಷಮ್ಮನವರ ಪುತ್ರಿ ತೇಜಸ್ವಿನಿ (36) ಹಾಗೂ ಅಳಿಯ ಪ್ರಕಾಶ್ (42) ಕೂಡ ದೂರವಾಗಿದ್ದರು. ಇವರು ಕ್ರಮವಾಗಿ ಮೇ 5 ಹಾಗೂ ಮೇ 28ರಂದು ಕೊನೆಯುಸಿರೆಳೆದಿದ್ದರು. ಈ ದಂಪತಿ ಹೆಗ್ಗನಹಳ್ಳಿ ಕ್ರಾಸ್ ಬಳಿಯ ಸುಂಕದಕಟ್ಟೆಯಲ್ಲಿ ನೆಲೆಸಿತ್ತು. ಇವರಿಗೆ ಒಬ್ಬಳೇ ಹೆಣ್ಣು ಮಗಳು. ಆಕೆಯ ಹೆಸರು ರಶ್ಮಿ. 9ನೇ ತರಗತಿ ಓದುತ್ತಿರುವ ಈ ಹುಡುಗಿಗೆ ಈಗ ಅಜ್ಜಿಯೇ ಆಧಾರ!

'ಅಪ್ಪ, ಅಮ್ಮ ಚೆನ್ನಾಗಿಯೇ ಇದ್ದರು. ತುಂಬಾ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ನಾನು ಐಎಎಸ್ ಅಧಿಕಾರಿಯಾಗಬೇಕೆಂಬುದು ಅಮ್ಮನ ಆಸೆಯಾಗಿತ್ತು. ನೀನು ಡಾಕ್ಟರ್ ಆಗು ಮಗಳೇ ಎಂದು ಅಪ್ಪ ಹೇಳುತ್ತಿದ್ದರು. ಇಬ್ಬರಿಗೂ ಕೊರೊನಾ ಸೋಂಕು ಹೇಗೆ ತಗುಲಿತು ಎಂಬುದೇ ಗೊತ್ತಿಲ್ಲ. ಅಪ್ಪನನ್ನು ಮಡಿವಾಳ ಸಮೀಪದ ಕಾವೇರಿ ಆಸ್ಪತ್ರೆಗೆ ದಾಖಲಿಸಿದ್ದರು. ಸುಮಾರು ಒಂದು ತಿಂಗಳು ಅಲ್ಲೇ ಚಿಕಿತ್ಸೆ ಪಡೆದಿದ್ದರು. ಈ ನಡುವೆ ಅಮ್ಮ ತೀರಿಕೊಂಡರು. ಅಪ್ಪನಾದರೂ ಗುಣಮುಖರಾಗಿ ಮನೆಗೆ ಮರಳುತ್ತಾರೆ ಅಂದುಕೊಂಡಿದ್ದೆ. ಅವರೂ ದೂರವಾಗಿಬಿಟ್ಟರು' ಎನ್ನುತ್ತಾ ರಶ್ಮಿ ಗದ್ಗದಿತಳಾದಳು.

'ಅಜ್ಜಿ ಬಿಟ್ಟರೆ ನನಗೆ ಬೇರೆ ಯಾರೂ ಇಲ್ಲ. ಅವರಿಗೂ ವಯಸ್ಸಾಗಿದೆ. ಮೊದಲು ಖಾಸಗಿ ಶಾಲೆಯಲ್ಲಿ ಓದುತ್ತಿದ್ದೆ. ಅಲ್ಲಿ ಶಿಕ್ಷಣ ಮುಂದುವರಿಸಬೇಕಾದರೆ ಸಾವಿರಾರು ರೂಪಾಯಿ ಶುಲ್ಕ ಕಟ್ಟಬೇಕು. ಅಷ್ಟು ಹಣ ನಮ್ಮ ಬಳಿ ಇಲ್ಲ. ಹೀಗಾಗಿ ವಿದ್ಯಾಭ್ಯಾಸ ಮುಂದುವರಿಸಬೇಕೊ ಬೇಡವೊ ಎಂಬ ಗೊಂದಲದಲ್ಲಿದ್ದೇನೆ' ಎಂದಳು.

'ಒಬ್ಬರಾದ ಮೇಲೆ ಒಬ್ಬರು ಹೋಗಿಬಿಟ್ಟರು. ಅವರೆಲ್ಲ ಅನುಭವಿಸಿದ ನರಳಾಟ ಕಂಡೆ. ಕೊನೆಯದಾಗಿ ಅವರ ಜೊತೆ ಒಂದೆರಡು ಮಾತು ಆಡಲೂ ಆಗಲಿಲ್ಲ. ಅದ್ಯಾವ ಜನ್ಮದ ಶಾಪವೊ. ಭಗವಂತ ನನ್ನನ್ನು ಈ ಸ್ಥಿತಿಗೆ ತಂದುಬಿಟ್ಟ. ನನಗೀಗ ಏನು ಮಾಡಬೇಕೆಂಬುದೇ ತೋಚುತ್ತಿಲ್ಲ' ಎಂದು ಕಾಮಾಕ್ಷಮ್ಮ ಭಾವುಕರಾದರು.

ಕಾಮಾಕ್ಷಮ್ಮ ಅವರ ಸಂಪರ್ಕಕ್ಕೆ : 7022956864.

'ಚಿಕಿತ್ಸೆ ಕೊಡಿಸಿದರೂ ಉಳಿಯಲಿಲ್ಲ'

'ಮೊದಲು ಶಂಕರ್ ಅವರಿಗೆ ಅನಾರೋಗ್ಯ ಬಾಧಿಸಿತು. ಕೆಮ್ಮು ಹಾಗೂ ಜ್ವರ ಕಾಣಿಸಿಕೊಂಡಿತು. ಕೋವಿಡ್ ಇರುವುದು ಪರೀಕ್ಷೆಯಿಂದ ದೃಢಪಟ್ಟಿತು. ಬಳಿಕ ಇಡೀ ಕುಟುಂಬದವರನ್ನು ಪರೀಕ್ಷೆಗೆ ಒಳಪಡಿಸಲಾಯಿತು. ಆಗ ಎಲ್ಲರಿಗೂ ಸೋಂಕು ತಗುಲಿರುವುದು ಖಾತರಿಯಾಯಿತು. ಶ್ವಾಸಕೋಶಕ್ಕೆ ಹಾನಿಯಾಗಿರುವುದು ಗೊತ್ತಾದ ಕಾರಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಹೀಗಿದ್ದರೂ ಯಾರೂ ಉಳಿಯಲಿಲ್ಲ' ಎಂದು ಕಾಮಾಕ್ಷಮ್ಮ ಅವರ ಸಂಬಂಧಿ ಸಂತೋಷ್ ತಿಳಿಸಿದರು.

'ಚಿಕಿತ್ಸೆಗಾಗಿ ಸಾಕಷ್ಟು ಸಾಲ ಮಾಡಿದ್ದಾರೆ. ಇದನ್ನು ಹೇಗೆ ತೀರಿಸುತ್ತಾರೆ ಎನ್ನುವುದೇ ಗೊತ್ತಿಲ್ಲ. ಅವರ ಜೀವನಕ್ಕೆ ಯಾವ ಆಧಾರವೂ ಇಲ್ಲ. ಪ್ರಕಾಶ್ ಅವರ ಚಿಕಿತ್ಸೆಗೆ ₹7 ಲಕ್ಷ ತಗುಲಿತ್ತು. ಈ ಮೊತ್ತ ಪಾವತಿಸುವವರೆಗೂ ಮೃತದೇಹ ನೀಡುವುದಿಲ್ಲ ಎಂದು ಆಸ್ಪತ್ರೆಯವರು ಪಟ್ಟು ಹಿಡಿದಿದ್ದರು. ಸಂಬಂಧಿಕರೆಲ್ಲಾ ಸೇರಿ ₹2 ಲಕ್ಷ ಸಂಗ್ರಹಿಸಿಕೊಟ್ಟ ನಂತರ ಶವ ಹಸ್ತಾಂತರಿಸಿದರು. ಅವರಿನ್ನೂ ಮರಣ ಪ್ರಮಾಣ ಪತ್ರ ಕೊಟ್ಟಿಲ್ಲ. ಬಾಕಿ ಹಣ ಕಟ್ಟಿ ಎಂದು ಪೀಡಿಸುತ್ತಿದ್ದಾರೆ' ಎಂದರು.

'ನಿಶ್ಚಿತಾರ್ಥದ ದಿನವೇ ಮಗ ತೀರಿಕೊಂಡ'

'ಕಿರಿಯ ಮಗ ಪ್ರಶಾಂತನಿಗೆ ಮದುವೆ ನಿಶ್ಚಯವಾಗಿತ್ತು. ಮೇ 1ರಂದು ನಿಶ್ಚಿತಾರ್ಥ ಇಟ್ಟುಕೊಂಡಿದ್ದೆವು. ಅದೇ ದಿನ ಆತ ತೀರಿಕೊಂಡ' ಎನ್ನುತ್ತಾ ಕಾಮಾಕ್ಷಮ್ಮ ಕಣ್ಣೀರಿಟ್ಟರು.

'ಮದುವೆಗಾಗಿ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದ. ಮನೆಯವರು ಹಾಗೂ ನೆಂಟರಿಗೆ ಕೊಡಲು ಬಟ್ಟೆ ತೆಗೆಸಿ ಇಟ್ಟಿದ್ದ. ಕಲ್ಯಾಣ ಮಂಟಪಕ್ಕೂ ಮುಂಗಡ ಹಣ ನೀಡಿದ್ದ. ಆತ ಮದುವೆಯಾಗಿ ಸುಖವಾಗಿ ಬಾಳುವುದು ಆ ದೇವರಿಗೆ ಇಷ್ಟವಾಗಲಿಲ್ಲವೇನೊ. ಹೀಗಾಗಿ ಚಿಕ್ಕ ವಯಸ್ಸಿನಲ್ಲೇ ತನ್ನ ಬಳಿ ಕರೆದುಕೊಂಡ' ಎಂದು ರೋದಿಸಿದರು.

ವಿವಿಧೆಡೆ ವರುಣನ ಅಬ್ಬರ

ಒಂದನೇ ಪುಟದಿಂದ...

ಧಾರಾಕಾರ ಮಳೆ: ಕೊಡಗು ಜಿಲ್ಲೆಯಲ್ಲಿ ಸೋಮವಾರವೂ ಧಾರಾಕಾರ ಮಳೆಯಾಗಿದೆ. ಸುಂಟಿಕೊಪ್ಪ ಭಾಗದಲ್ಲಿ ಗಾಳಿ, ಮಳೆಗೆ ಅಲ್ಲಲ್ಲಿ ವಿದ್ಯುತ್ ಕಂಬಗಳು ಹಾಗೂ ಕಾಫಿ ತೋಟದಲ್ಲಿ ಬೃಹತ್ ಮರಗಳು ಧರೆಗುರುಳಿವೆ. ನಿರಂತರ ಮಳೆಗೆ ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನಮಟ್ಟ ಏರಿಕೆಯಾಗಿದೆ.

ಮೈಸೂರು ಸೇರಿದಂತೆ ಜಿಲ್ಲೆಯ ಹಲವೆಡೆ ಮಳೆಯಾಗಿದೆ.

ಉತ್ತಮ ಮಳೆ: ಧಾರವಾಡ, ಬೆಳಗಾವಿ, ವಿಜಯನಗರ, ಗದಗ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದ್ದರೆ ಉತ್ತರ ಕನ್ನಡ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮುಂಗಾರು ಮಳೆ ಮತ್ತಷ್ಟು ಚುರುಕುಗೊಂಡಿದೆ. ಹೊನ್ನಾವರ, ಭಟ್ಕಳ, ಕಾರವಾರದಲ್ಲಿ ಧಾರಾಕಾರವಾಗಿ ಮಳೆ ಸುರಿಯಿತು. ಅರಬ್ಬಿ ಸಮುದ್ರದಲ್ಲಿ ಬೃಹತ್ ಅಲೆಗಳು ದಡಕ್ಕೆ ಅಪ್ಪಳಿಸುತ್ತಿದ್ದು, ಅಂಕೋಲಾ, ಹೊನ್ನಾವರದ ಕೆಲವೆಡೆ ಕಡಲ್ಕೊರೆತದ ಆತಂಕ ಉಂಟಾಗಿದೆ.

ಕುಮಟಾ, ಭಟ್ಕಳ, ಅಂಕೋಲಾ ಭಾಗದಲ್ಲಿ ಭಾನುವಾರ ರಾತ್ರಿಯಿಂದಲೇ ಮಳೆ ಮುಂದುವರಿಯಿತು. ಗೋಕರ್ಣದಲ್ಲಿ ಬೆಳಿಗ್ಗೆಯಿಂದಲೇ ಬೀಸಿದ ರಭಸದ ಗಾಳಿ ಮಳೆಗೆ ಹಲವು ಕಡೆ ನೀರು ನಿಂತಿದೆ. ಮಹಾಬಲೇಶ್ವರ ದೇಗುಲದ ಶಿವನ ಆತ್ಮಲಿಂಗ ಸಹ ಅರ್ಧ ಗಂಟೆ ಮುಳುಗಿತ್ತು. ಆ ಸಮಯದಲ್ಲಿ ಸ್ಥಳೀಯರಿಗೆ ಪೂಜೆಗೆ ಅವಕಾಶ ನಿಲ್ಲಿಸಲಾಗಿತ್ತು.

ಕಲ್ಯಾಣ ಕರ್ನಾಟಕ- ಉತ್ತಮ ಮಳೆ: ಕಲಬುರ್ಗಿ, ಬೀದರ್, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದೆ. ಕಲಬುರ್ಗಿ ನಗರದಲ್ಲಿ ಮಧ್ಯಾಹ್ನ ಸುಮಾರು 45 ನಿಮಿಷ ಸುರಿದ ಬಿರುಸಿನ ಮಳೆಯಿಂದಾಗಿ ರಸ್ತೆಗಳಲ್ಲಿ ನೀರು ಹರಿಯಿತು. ಚಿಂಚೋಳಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವರುಣನ ಆರ್ಭಟ ಜೋರಾಗಿತ್ತು.

ಬೀದರ್ ಜಿಲ್ಲೆಯ ವಿವಿಧೆಡೆ ಭಾರಿ ಮಳೆಯಾಗಿದ್ದರಿಂದ ಮಾಂಜ್ರಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿದು ಬಂದಿದೆ. ಔರಾದ್ ತಾಲ್ಲೂಕಿನ ನಾಗೂರ ಬಳಿ ಸಂತಪುರ–ಸಂಗಮ ರಸ್ತೆಯಲ್ಲಿರುವ ಚಿಕ್ಕ ಹಳ್ಳ ಉಕ್ಕಿ ಹರಿದು ಸೇತುವೆ ಪಕ್ಕದ ಕಚ್ಚಾ ರಸ್ತೆ ಕಿತ್ತುಕೊಂಡು ಹೋಗಿ ಸಂಚಾರ ಸ್ಥಗಿತಗೊಂಡಿತ್ತು. ಸಂಜೆ ಜೆಸಿಬಿಯಿಂದ ಮಣ್ಣು ಹಾಕಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ. ವಡಗಾಂವ, ಕಂದಗೂಳ ರಸ್ತೆಯಲ್ಲಿ ಹಳ್ಳ ತುಂಬಿ ಬೆಳಿಗ್ಗೆ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡಿತ್ತು.

ಕರಾವಳಿ ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್'

ಬೆಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ಮುಂಗಾರು ತೀವ್ರಗೊಂಡಿರುವುದರಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಜೂ.16ರವರೆಗೆ 'ರೆಡ್ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ರಾಜ್ಯದ ಹಲವು ಜಿಲ್ಲೆಗಳಲ್ಲಿ ಜೂ.19ರವರೆಗೆ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ. ಕರಾವಳಿ ಭಾಗದಲ್ಲಿ ಗಂಟೆಗೆ 55 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮೀನುಗಾರರು ಕಡಲಿಗೆ ಇಳಿಯಬಾರದು' ಎಂದು ಎಚ್ಚರಿಸಿದೆ.

ಏಳು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್': ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಇದೇ 16ರವರೆಗೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ಗದಗ ಹಾಗೂ ಬಾಗಲಕೋಟೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಹೆಚ್ಚು ಮಳೆಯಾದ ಪ್ರದೇಶ

ಉಡುಪಿ	
ಆಲೂರು	15 ಸೆಂ.ಮೀ.
ಕಿರಿಮಂಜೇಶ್ವರ	14.9 ಸೆಂ.ಮೀ.
ನಡಾ	13.5 ಸೆಂ.ಮೀ.
ದಕ್ಷಿಣ ಕನ್ನಡ	
ಮುನ್ನೂರು	11.2 ಸೆಂ.ಮೀ.
ಚಿಕ್ಕಮಗಳೂರು	
ಮೇಗರಮಕ್ಕಿ	6 ಸೆಂ.ಮೀ.

ಪ್ರಜಾವಾಣಿ facebook LIVE
fb.com/prajavani.net
ವಿದ್ಯಾರ್ಥಿಗಳ ಪ್ರಶ್ನೆ.. ತಜ್ಞರ ಉತ್ತರ!

ವಿಶ್ವನಾಥ ನಾಗಠಾಣ, ಎಮ್ಎಸ್ಸಿ
ಅಧ್ಯಯನ ನಿರ್ದೇಶಕರು - ಐ ಐ ಸಿ ಇ ಕರಿಯರ್ ಕನಸಲ್ಟಂಟ್, ಧಾರವಾಡ
19 ಜೂನ್ 2021, ಶನಿವಾರ ಸಂಜೆ 5 ರಿಂದ 6
ನೋಂದಣಿ ಕಡ್ಡಾಯ
ಐ ಎ ಎಸ್/ ಕೆ ಎ ಎಸ್/ಸ್ಪರ್ಧಾತ್ಮಕ ಪರೀಕ್ಷೆಗಳ ವಿವರಗಳು, ತಯಾರಿ ವಿಧಾನಗಳು, ಸಂದರ್ಶನ ವಿಷಯಗಳು
ಈ ವಿಷಯಗಳ ಮಾಹಿತಿ ನೀಡಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು ನೋಂದಣಿ ಸಂದರ್ಭದಲ್ಲೇ ಕಳುಹಿಸಿ, FB ಲೈವ್ ಮೂಲಕ ಉತ್ತರ ಪಡೆದುಕೊಳ್ಳಿ.
ಅಂತಿಮ ದಿನಾಂಕ ಮಂಗಳವಾರ 15 ಜೂನ್ 2021
https://bit.ly/3yK3kVD
ನೋಂದಣಿ ಕಡ್ಡಾಯವಾಗಿದ್ದು, ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

ಮನ್‌ಮುಲ್ ಅಕ್ರಮ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಹಾಲು ಒಕ್ಕೂಟದಲ್ಲಿ (ಮನ್‌ಮುಲ್) ಹಾಲಿಗೆ ನೀರು ಬೆರಕೆ ಮಾಡಿ ವ್ಯಾಪಕ ಅಕ್ರಮ ನಡೆಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಹಾಲಿಗೆ ನೀರು ಬೆರೆಸಿ ಅಕ್ರಮ ನಡೆಸಿರುವುದು ಬೆಳಕಿಗೆ ಬಂದಿದೆ. ಈಗಾಗಲೇ ಪ್ರಾಥಮಿಕ ತನಿಖೆಗೆ ಆದೇಶ ಮಾಡಲಾಗಿದೆ. ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರನ್ನು ಹಿಂದಕ್ಕೆ ಕರೆಸಿ, ಅಲ್ಲಿಗೆ ಹೊಸ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಲಾಗಿದೆ ಎಂದರು.

ಐವರು ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ಹಾಲು ಒಕ್ಕೂಟದ ಮೇಲೆ ಕಲಂ 60ರ ಅನ್ವಯ ವಿಚಾರಣೆ ಆರಂಭಿಸಲಾಗಿದೆ. ಅದೇ ರೀತಿ ತಪ್ಪು ಎಸಗಿದ ಹಾಲು ಉತ್ಪಾದಕರ ಸಂಘಗಳ ಮೇಲೆ ವಿಚಾರಣೆಗೂ ಆದೇಶ ನೀಡಲಾಗಿದೆ ಎಂದು ಹೇಳಿದರು.

ಕಾನ್‌ಸ್ಟೆಬಲ್ ನೇಮಕಾತಿ: ಮತ್ತೆ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಯ ದೈಹಿಕ ಹಾಗೂ ಲಿಖಿತ ಪರೀಕ್ಷೆಗೆ ನಕಲಿ ಅಭ್ಯರ್ಥಿಗಳು ಹಾಜರಾಗಿದ್ದ ಪ್ರಕರಣಗಳ ತನಿಖೆ ಕೈಗೆತ್ತಿಕೊಂಡಿರುವ ಸಿಐಡಿ ಅಧಿಕಾರಿಗಳು, ಗೋಕಾಕ್‌ನಲ್ಲಿರುವ ಏಕಲವ್ಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಸ್ಥಾಪಕ ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

ಪೊಲೀಸ್ ಇಲಾಖೆಯ ವಿವಿಧ ದಳಗಳಲ್ಲಿ ಖಾಲಿ ಇರುವ 3,702 ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿಗೆ 2020ರಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಲಾಗಿತ್ತು. ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ, ಯಾದಗಿರಿ, ಶಿವಮೊಗ್ಗ ಹಾಗೂ ಹುಬ್ಬಳ್ಳಿ–ಧಾರವಾಡದಲ್ಲಿ ಪರೀಕ್ಷೆಗೆ ನಕಲಿ ಅಭ್ಯರ್ಥಿಗಳು ಹಾಜರಾಗಿದ್ದರು. ಈ ಬಗ್ಗೆ ರಾಜ್ಯದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 21 ಪ್ರಕರಣಗಳ ತನಿಖೆಯನ್ನು ಸಿಐಡಿ ವಹಿಸಲಾಗಿದೆ.

'ಪರೀಕ್ಷೆಗೆ ನಕಲಿ ಅಭ್ಯರ್ಥಿಗಳು ಹಾಜರಾಗುವಂತೆ ಸಂಚು ಮಾಡಿದ್ದ ಗೋಕಾಕ್‌ನ ಏಕಲವ್ಯ ಸಂಸ್ಥೆಯ ಲಕ್ಷ್ಮಣ ಉದ್ದಪ್ಪ ಬಂಡಿ, ಭೀಮಪ್ಪ ಮಹಾದೇವ ಹುಲ್ಲೋಳಿ ಅಲಿಯಾಸ್ ಭೀಮ್‌ಶಿ, ಲಕ್ಷ್ಮಣ ಮುತ್ತಪ್ಪ ಪರಣ್ಣವರ್ ಹಾಗೂ ಮಲ್ಲಿಕಾರ್ಜುನ್ ಯಮುನಪ್ಪ ಬಬಲಣ್ಣವರ್ ಎಂಬುವರನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ಬಸವರಾಜ್ ದುಂಡಾನಟ್ಟಿ ಹಾಗೂ ಇತರರು ತಲೆಮರೆಸಿಕೊಂಡಿದ್ದಾರೆ' ಎಂದೂ ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದರು.

'ಅಸಲಿ ಅಭ್ಯರ್ಥಿಗಳಿಂದ ಹಣ ಪಡೆದಿದ್ದ ಬಂಧಿತ ಆರೋಪಿಗಳು, ನಕಲಿ ಅಭ್ಯರ್ಥಿಗಳಿಂದ ಪರೀಕ್ಷೆ ಬರೆಸುತ್ತಿದ್ದರು. ಈಗಾಗಲೇ ಸರ್ಕಾರಿ ಹುದ್ದೆ ಪಡೆದಿದ್ದ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದವರೇ ನಕಲಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಹಾಜರಾಗುತ್ತಿದ್ದರು' ಎಂದೂ ಅವರು ಮಾಹಿತಿ ನೀಡಿದರು.

'ಪ್ರಕರಣ ಸಂಬಂಧ ಇದುವರೆಗೂ 61 ಆರೋಪಿಗಳನ್ನು ಬಂಧಿಸಲಾಗಿದೆ. ₹ 1.54 ಲಕ್ಷ ನಗದು, ಎರಡು ಕಾರು, ಲ್ಯಾಪ್‌ಟಾಪ್, ಕಂಪ್ಯೂಟರ್, ಹಾರ್ಡ್ ಡಿಸ್ಕ್, ಪೆನ್‌ಡ್ರೈವ್ ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ 21 ಅಭ್ಯರ್ಥಿಗಳನ್ನೂ ಡಿಬಾರ್ ಮಾಡಿಸಲಾಗಿದೆ' ಎಂದೂ ಹೇಳಿದರು.

ಆಧಾರ್ ಕಾರ್ಡ್‌ನಲ್ಲಿ ಫೋಟೊ ಬದಲು: 'ಅಸಲಿ ಅಭ್ಯರ್ಥಿಗಳ ಆಧಾರ್ ಕಾರ್ಡ್‌ನಲ್ಲಿರುತ್ತಿದ್ದ ಫೋಟೊ ಜಾಗದಲ್ಲಿ ನಕಲಿ ಅಭ್ಯರ್ಥಿ ಫೋಟೊ ಸೇರಿಸಿ ಮುದ್ರಿಸಲಾಗುತ್ತಿತ್ತು. ಅದೇ ಆಧಾರ್ ಕಾರ್ಡ್ ಇಟ್ಟುಕೊಂಡು ನಕಲಿ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದರು' ಎಂದರು.

'ಹುದ್ದೆಗೆ ಆಯ್ಕೆಯಾಗಿದ್ದ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ವೇಳೆ ಅಕ್ರಮ ಬಯಲಾಗಿತ್ತು. ಆಯಾ ಠಾಣೆ ಪೊಲೀಸರು ಆರಂಭದಲ್ಲಿ ಕೆಲವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ಇದರ ಹಿಂದೆ ದೊಡ್ಡ ಜಾಲವಿರುವುದು ಪತ್ತೆಯಾಗಿತ್ತು. ಹೀಗಾಗಿ, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು' ಎಂದೂ ಹೇಳಿದರು.

ಫೋಟೊ ಸ್ಟುಡಿಯೊ, ಸೈಬರ್ ಕೇಂದ್ರಗಳ ಮೇಲೆ ನಿಗಾ

'ಫೋಟೊ ಸ್ಟುಡಿಯೊ ಹಾಗೂ ಸೈಬರ್ ಕೇಂದ್ರದಲ್ಲೇ ಆಧಾರ್ ಕಾರ್ಡ್ ತಿದ್ದುಪಡಿ ಮಾಡಲಾಗುತ್ತಿತ್ತು. ಗೋಕಾಕ್‌ನಲ್ಲಿರುವ ವೀರೇಶ್ ಫೋಟೊ ಸ್ಟುಡಿಯೊ ಹಾಗೂ ಕೆಲ ಜಿಲ್ಲೆಗಳಲ್ಲಿರುವ ಫೋಟೊ ಸ್ಟುಡಿಯೊ ಮತ್ತು ಸೈಬರ್ ಕೇಂದ್ರಗಳ ಮೇಲೆ ನಿಗಾ ವಹಿಸಲಾಗಿದೆ' ಎಂದೂ ಸಿಐಡಿ ಅಧಿಕಾರಿ ಮಾಹಿತಿ ನೀಡಿದರು.

ಸಿ.ಡಿ ಪ್ರಕರಣ: ಮತ್ತೊಂದು ತಕರಾರು ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷಡ್ಯಂತ್ರ ನಡೆಸಿ ಸಿ.ಡಿ ಬಹಿರಂಗಪಡಿಸಲಾಗಿದೆ ಎಂದು ಆರೋಪಿಸಿ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ, ಈ ಪ್ರಕರಣದ ಸಂತ್ರಸ್ತೆ ಹೈಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರು, ಎಸ್‌ಐಟಿ ಮತ್ತು ರಮೇಶ ಜಾರಕಿಹೊಳಿ ಅವರಿಗೆ ತುರ್ತು ನೋಟಿಸ್ ನೀಡಲು ಆದೇಶಿಸಿ ವಿಚಾರಣೆಯನ್ನು ಜೂ.21ಕ್ಕೆ ಮುಂದೂಡಿತು.

'ಸಿ.ಡಿ ಬಹಿರಂಗೊಂಡ ಸಂದರ್ಭದಲ್ಲಿ ಅದೊಂದು ತಿರುಚಿದ ವಿಡಿಯೊ, ಸಿ.ಡಿಯಲ್ಲಿರುವ ಯುವತಿಗೂ ತನಗೂ ಸಂಬಂಧ ಇಲ್ಲ ಎಂದು ತಿಳಿಸಿದ್ದ ಜಾರಕಿಗೊಳಿ, 2021ರ ಮಾ.13ರಂದು ದೂರು ದಾಖಲಿಸಿದ್ದರು. ಮಾ.9ರಂದು ಗೃಹ ಸಚಿವರಿಗೆ ಜಾರಕಿಹೊಳಿ ಪತ್ರವನ್ನೂ ಬರೆದಿದ್ದರು. ಅದನ್ನು ಆಧರಿಸಿ, ಗೃಹ ಸಚಿವರ ಸೂಚನೆಯಂತೆ ನಗರ ಪೊಲೀಸ್ ಆಯುಕ್ತರು ಮಾ.11ರಂದೇ ಎಸ್‌ಐಟಿ ರಚಿಸಿದ್ದಾರೆ. ಇದನ್ನು ಗಮನಿಸಿದರೆ ಜಾರಕಿಹೊಳಿ ಎಷ್ಟು ಪ್ರಭಾವಿ ಎಂಬುದು ಗೊತ್ತಾಗುತ್ತದೆ. ಎಸ್‌ಐಟಿ ಕೂಡ ಪ್ರಭಾವಕ್ಕೆ ಒಳಗಾಗಿದೆ ಎಂಬುದು ತಿಳಿಯುತ್ತದೆ' ಎಂದು ಸಂತ್ರಸ್ತೆ ಅರ್ಜಿಯಲ್ಲಿ ದೂರಿದ್ದಾರೆ.

'ದೂರು ದಾಖಲಿಸಿ 70 ದಿನಗಳ ಬಳಿಕ ಸಿ.ಡಿಯಲ್ಲಿರುವುದು ನಾನೇ ಎಂದು ರಮೇಶ ಜಾರಕಿಹೊಳಿ ಎಸ್‌ಐಟಿ ಮುಂದೆ ಒಪ್ಪಿಕೊಂಡಿದ್ದಾರೆ. ಒಪ್ಪಿತ ಲೈಂಗಿಕ ಕ್ರಿಯೆ ನಡೆಸಲಾಗಿದೆ ಎಂದೂ ತಿಳಿಸಿದ್ದಾರೆ. ಸಿ.ಡಿ ಬಹಿರಂಗ ಆದಾಗ ನೀಡಿದ ಹೇಳಿಕೆ ಮತ್ತು ನಂತರ ನೀಡಿದ ಹೇಳಿಕೆ ತದ್ವಿರುದ್ಧವಾಗಿವೆ. ಅತ್ಯಾಚಾರ ಆರೋಪ ಪ್ರಕರಣದ ತನಿಖೆಯಿಂದ ತಪ್ಪಿಸಿಕೊಳ್ಳಲು ಹೊಸ ಕಥೆಗಳನ್ನು ಅವರು ಕಟ್ಟುತ್ತಿದ್ದಾರೆ' ಎಂದು ಸಂತ್ರಸ್ತೆ ಆರೋಪಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

ಟಾಟಾ Intra V30
ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ



ಇಂದೇ ಕೊಳ್ಳಿರಿ
ನಿಮ್ಮ ಮಾಸಿಕ ಕಂತನ್ನು 2 ತಿಂಗಳ* ನಂತರ ಪ್ರಾರಂಭಿಸಿ
₹25,000/-* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹20,000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ಉದ್ಯೋಗಾವಕಾಶ
Part-Time Jobs

ಲಾಕ್-ಡೌನ್ ಸಮಯದಲ್ಲಿ ಸುವರ್ಣಾವಕಾಶ ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ.9108059956, 9901929956

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಸ್ತ್ರೀಪುರುಷ ವಶಕ್ಕೆ ''ಕೇರಳ ಕಾಶ್ಮೋರ'' ಪೂಜಾ ಶಕ್ತಿಯಿಂದ 'ರತಿ ಕಾಮರಾಜ' ಮಂತ್ರದಿಂದ ಕೇವಲ 24 ಘಂಟೆಗಳಲ್ಲಿ ಪರಿಹಾರ ನೀಡಲಾಗುವುದು. 9686007334

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

DH DECCAN HERALD
ಪ್ರಜಾವಾಣಿ
FOR CLASSIFIED ADVERTISEMENTS
EDUCATION
Contact:
Santhosh: 9880856233
Jerry: 9731810277
Tanveer: 9886213331

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶಾಲೆಗಳಲ್ಲಿ ಇಂದಿನಿಂದ ದಾಖಲಾತಿ ಆರಂಭ • ಶಿಕ್ಷಕರ ವರ್ಗಾವಣೆ ವೇಳಾಪಟ್ಟಿ ಶೀಘ್ರ

11 ಜಿಲ್ಲೆಗಳ ಶಿಕ್ಷಕರಿಗೆ ಹಾಜರಾತಿ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಪ್ರಕ್ರಿಯೆ ಮಂಗಳವಾರ (ಜೂನ್ 15) ಆರಂಭವಾಗುತ್ತಿದ್ದು, ಲಾಕ್‌ಡೌನ್ ಜಾರಿಯಲ್ಲಿರುವ 11 ಜಿಲ್ಲೆಗಳ ಶಿಕ್ಷಕರಿಗೆ ಶಾಲಾ ಹಾಜರಾತಿಯಿಂದ ವಿನಾಯಿತಿ ನೀಡಲಾಗಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಶಿಕ್ಷಕರು ಮಂಗಳವಾರದಿಂದ ಶಾಲೆಗಳಿಗೆ ಹಾಜರಾಗಿ ಮಕ್ಕಳ ನೋಂದಣಿ ಪ್ರಕ್ರಿಯೆ ಆರಂಭಿಸಬೇಕಾಗಿದೆ. ಆದರೆ, ಕಠಿಣ ನಿರ್ಬಂಧಗಳು ಮುಂದುವರಿಯಲಿರುವ ಜಿಲ್ಲೆಗಳ ಶಿಕ್ಷಕರು ಮಾತ್ರ ಲಾಕ್‌ಡೌನ್ ತೆರವಾದ ದಿನದಿಂದ ಶಾಲೆಗಳಿಗೆ ಹಾಜರಾಗಲು ಅನುಮತಿ ನೀಡಲಾಗಿದೆ' ಎಂದರು.

ಜುಲೈ 1ರಿಂದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳನ್ನು ಆರಂಭಿಸಲಾಗುವುದು. ಹೀಗಾಗಿ, ಮಕ್ಕಳ ಕಲಿಕೆಗೆ ಪೂರ್ವ ತಯಾರಿಯನ್ನು ಜೂನ್ 15ರಿಂದ ಶಿಕ್ಷಕರು ಆರಂಭಿಸಬೇಕು ಎಂದು ಇದೇ 4ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಲಾಕ್‌ಡೌನ್ ಮುಂದುವರಿದಿರುವ ಜಿಲ್ಲೆಗಳಲ್ಲಿ ಶಿಕ್ಷಕರು ಮನೆಯಿಂದಲೇ ಕೆಲಸ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಮೌಲ್ಯಾಂಕನ ಅವಧಿ ವಿಸ್ತರಣೆ: 'ಹಲವು ಉಪನ್ಯಾಸಕ ಸಂಘಟನೆಗಳು ಮನವಿ ಮಾಡಿದ್ದರಿಂದ ಮೊದಲ ಪಿಯುಸಿ ಮೌಲ್ಯಾಂಕನ ಪ್ರಕ್ರಿಯೆಯ ಸಮಯವನ್ನು ಎಲ್ಲ ಜಿಲ್ಲೆಗಳ ಲಾಕ್‌ಡೌನ್ ಅವಧಿ ಪೂರ್ಣಗೊಳ್ಳುವವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗುವುದು' ಎಂದು ಸುರೇಶ್‌ಕುಮಾರ್ ತಿಳಿಸಿದರು.

ಚೈಲ್ಡ್ ಪ್ರೊಫೈಲ್: 'ಈ ಬಾರಿ ನಿಗದಿತ ಅವಧಿಯ ಮೌಲ್ಯಮಾಪನ ಪ್ರಕ್ರಿಯೆಯನ್ನು ಹೆಚ್ಚು ಸಮರ್ಥವಾಗಿ ಜಾರಿಗೊಳಿಸುವ ಅಗತ್ಯವಿದೆ. ಪ್ರತಿ ಸೂಚಿತ ಅವಧಿಗೆ ವಿದ್ಯಾರ್ಥಿಗಳ ಚೈಲ್ಡ್ ಪ್ರೊಫೈಲ್‌ಗಳನ್ನು ನಿಯಮಿತವಾಗಿ ದಾಖಲಿಸುವ, ಕಲಿಕಾ ಸಾಮರ್ಥ್ಯಗಳನ್ನು ಅಳೆಯುವ ಮಾನದಂಡಗಳಾಗಿ ರೂಪಿಸುವ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಕೌನ್ಸೆಲಿಂಗ್ ಅತ್ಯವಶ್ಯವಾಗಿದ್ದು, ಅಂಥ ಸಂದರ್ಭದಲ್ಲಿ ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಿಯಾಯೋಜನೆ ಸಿದ್ಧಪಡಿಸಬೇಕು' ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ವೇಳಾಪಟ್ಟಿ ಶೀಘ್ರ: 'ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯ ಕುರಿತ ನಿಯಮಗಳಿಗೆ ಆಕ್ಷೇಪಣೆ ಸಲ್ಲಿಸುವ ಅವಧಿ ಪೂರ್ಣಗೊಂಡ ತಕ್ಷಣ ಅಧಿಸೂಚನೆ ಹೊರಡಿಸಿ, ತಂತ್ರಜ್ಞಾನಾಧಾರಿತ ವರ್ಗಾವಣಾ ಪ್ರಕ್ರಿಯೆ ನಡೆಸಲಾಗುವುದು' ಎಂದರು.

ಲಾಕ್‌ಡೌನ್ ತೆರವಾದ ಜಿಲ್ಲೆಗಳ ಶಿಕ್ಷಕರ ಆಕ್ಷೇಪ

ರಾಜ್ಯದಲ್ಲಿ ಲಾಕ್‌ಡೌನ್ ಮುಂದುವರಿಯಲಿರುವ ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲ ಜಿಲ್ಲೆಗಳ ಶಿಕ್ಷಕರು ಮಂಗಳವಾರದಿಂದ ಶಾಲೆಗಳಿಗೆ ಹೋಗಬೇಕೆಂಬ ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆಗೆ ಶಿಕ್ಷಕರ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

'ಲಾಕ್‌ಡೌನ್ ಇಲ್ಲದ ಜಿಲ್ಲೆಗಳ ಶಿಕ್ಷಕರಿಗೆ ಬೇರೆ ಜಿಲ್ಲೆಗಳಿಗೆ ಹೋಗಲು ಬಸ್ಸಿನ ವ್ಯವಸ್ಥೆ ಆಗುವವರೆಗೆ ಮನೆಯಿಂದಲೇ ಕೆಲಸ ನಿರ್ವಹಿಸಲು ಅವಕಾಶ ನೀಡಬೇಕು' ಎಂದು ಸಚಿವ ಸುರೇಶ್‌ಕುಮಾರ್ ಅವರಿಗೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಮಾಡಿದೆ.

'ಆದ್ಯತೆ ಮೇಲೆ ಲಸಿಕೆ'

'2020–21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಎರಡು ದಿನಗಳಿಗೆ ಸೀಮಿತಗೊಳಿಸಿ ಜುಲೈ ಮೂರನೇ ವಾರದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಸುಮಾರು 6 ಸಾವಿರ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗೆ ಕೋವಿಡ್ ಲಸಿಕೆ ಹಾಕುವುದು ಅವಶ್ಯವಾಗಿದೆ. ಹೀಗಾಗಿ, ಆದ್ಯತೆ ಮೇಲೆ ಲಸಿಕೆ ನೀಡಲು ಕ್ರಮ ವಹಿಸಬೇಕು' ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಪತ್ರ ಬರೆದಿದ್ದಾರೆ.

ರಾಜ್ಯ ಬಿಜೆಪಿಯಲ್ಲಿನ ಬಿಕ್ಕಟ್ಟು ಉಪಶಮನ ಮಾಡುವ ಪ್ರಯತ್ನ

ಅರುಣ್‌ಸಿಂಗ್ ನಾಳೆ ರಾಜ್ಯಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿನ ಬಿಕ್ಕಟ್ಟನ್ನು ಉಪಶಮನಗೊಳಿಸಲು ಉಸ್ತುವಾರಿ ಅರುಣ್‌ಸಿಂಗ್ ಬುಧವಾರ ನಗರಕ್ಕೆ ಆಗಮಿಸಲಿದ್ದು, ಮೂರು ದಿನಗಳ ಸಭೆಯ ಕಾರ್ಯಕ್ರಮ ಪಟ್ಟಿಯನ್ನೂ ಅಂತಿಮಗೊಳಿಸಿದ್ದಾರೆ.

ಬುಧವಾರ ಮಧ್ಯಾಹ್ನ 3.30 ಕ್ಕೆ ಅವರು ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬರಲಿದ್ದು, ಕುಮಾರಕೃಪಾ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಸಂಜೆ 5 ಗಂಟೆಗೆ ರಾಜ್ಯ ಬಿಜೆಪಿ ಕಚೇರಿ ಜಗನ್ನಾಥ ಭವನದಲ್ಲಿ ಸಚಿವರ ಸಭೆಯನ್ನು ನಡೆಸಲಿದ್ದಾರೆ. ಜೂನ್ 18 ರಂದು ಸಂಜೆ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ(ಕೋರ್ ಕಮಿಟಿ) ಭಾಗವಹಿಸಲಿದ್ದಾರೆ.

ಪಕ್ಷದಲ್ಲಿ ಇತ್ತೀಚಿನ ದಿನಗಳಲ್ಲಿ ನಾಯಕತ್ವವನ್ನು ಬದಲಿಸಬೇಕು ಎಂಬ ದಿಸೆಯಲ್ಲಿ ಧ್ವನಿ ಎತ್ತಿರುವುದು ಮತ್ತು ಶಾಸಕಾಂಗ ಪಕ್ಷದ ಸಭೆಯನ್ನು ಬೇಡಿಕೆ ಮಂಡಿಸಿರುವ ಬೆನ್ನಲ್ಲೇ, ಮುಖ್ಯಮಂತ್ರಿ ಆಪ್ತ ಶಾಸಕರು ಯಡಿಯೂರಪ್ಪ ಪರ ಸಹಿ ಸಂಗ್ರಹವನ್ನು ಆರಂಭಿಸಿದ್ದಾರೆ.

ವರಿಷ್ಠರು ಬಯಸಿದರೆ ರಾಜೀನಾಮೆ ಕೊಡಲು ಸಿದ್ಧ ಎಂದು ಕೆಲವು ದಿನಗಳ ಹಿಂದೆ ಹೇಳಿದ್ದ ಯಡಿಯೂರಪ್ಪ ಅವರು, ಎರಡು ದಿನಗಳ ಹಿಂದೆ ಹಾಸನದಲ್ಲಿ ಮುಂದಿನ ಎರಡು ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿದಿರುವುದಾಗಿ ಹೇಳಿದ್ದಾರೆ. ಈ ಮಧ್ಯೆ ಸಚಿವ ಸಿ.ಪಿ.ಯೋಗೇಶ್ವರ್ ಮತ್ತು ಶಾಸಕ ಅರವಿಂದ ಬೆಲ್ಲದ ಅವರು ದೆಹಲಿಗೆ ಹೋಗಿ ವರಿಷ್ಠರನ್ನು ಭೇಟಿಯಾಗಿ ಮಾತುಕತೆ ನಡೆಸುವ ಪ್ರಯತ್ನವನ್ನೂ ನಡೆಸಿದ್ದರು.

ಅರುಣ್ ಸಿಂಗ್ ಭೇಟಿ ಮಾಡಿದ ಬೆಲ್ಲದ

ನವದೆಹಲಿ: ಮೂರು ದಿನಗಳಿಂದ ದೆಹಲಿಯಲ್ಲೇ ಬೀಡುಬಿಟ್ಟಿರುವ ಹುಬ್ಬಳ್ಳಿ–ಧಾರವಾಡ ಪಶ್ಚಿಮ ಕ್ಷೇತ್ರದ ಬಿಜೆಪಿ ಶಾಸಕ ಅರವಿಂದ ಬೆಲ್ಲದ ಸೋಮವಾರ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದಾರೆ.

ಇಲ್ಲಿನ ಗುರುದ್ವಾರ ರಖಬ್ ಗಂಜ್ ರಸ್ತೆಯಲ್ಲಿರುವ ಸಿಂಗ್ ಅವರ ನಿವಾಸದಲ್ಲಿ ಮಧ್ಯಾಹ್ನ ಅರ್ಧ ಗಂಟೆ ಚರ್ಚೆ ನಡೆಸಿದ ಬೆಲ್ಲದ, ಅಲ್ಲಿಂದ ತೆರಳುವಾಗ ಮಾಧ್ಯಮಗಳಿಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಗಾಗಿ ಪಕ್ಷದ ಹೈಕಮಾಂಡ್ ಒತ್ತಡ ಹೇರುತ್ತಿರುವ ಗುಂಪಿಗೆ ಸೇರಿದವರು ಎನ್ನಲಾದ ಬೆಲ್ಲದ, ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ಚರ್ಚೆ ನಡೆಸಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕಾರ್ಯವೈಖರಿ ವಿರುದ್ಧ ದೂರು ನೀಡಿದ್ದಾರೆ ಎಂದು ತಿಳಿದುಬಂದಿದೆ.

ಅಸಮಾಧಾನವಿದ್ದರೆ ದೂರು ಸಲ್ಲಿಸಿ: ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಆಡಳಿತದ ಬಗ್ಗೆ ಅಸಮಾಧಾನವಿದ್ದರೆ ರಾಜ್ಯ ಉಸ್ತುವಾರಿಗೆ ಪಕ್ಷದ ಶಾಸಕರು ದೂರು ನೀಡಬಹುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಅವರು ಬುಧವಾರ ಎಲ್ಲ ಸಚಿವರೊಂದಿಗೆ ಸಭೆ ನಡೆಸಲಿದ್ದಾರೆ. ಗುರುವಾರ ಶಾಸಕರೊಂದಿಗೆ ಅರುಣ್ ಸಿಂಗ್ ಮಾತನಾಡಲಿದ್ದಾರೆ. ಅಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪರ–ವಿರುದ್ಧದ ಅನಿಸಿಕೆ, ದೂರುಗಳು ಹೇಳಿಕೊಳ್ಳಲು ಅವಕಾಶವಿದೆ' ಎಂದರು.

'ಭೇಟಿಗೆ ಸಮಯ ಕೇಳಿದ್ದೇವೆ'

ಹೊನ್ನಾಳಿ: 'ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರು ಮೂರು ದಿನಗಳ ಕಾಲ ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ನಮ್ಮ ಶಾಸಕರೆಲ್ಲಾ ಅವರನ್ನು 17ರಂದು ಭೇಟಿ ಮಾಡಲು ಸಮಯ ಕೇಳಿದ್ದೇವೆ' ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

'ರಾಮ ಮಂದಿರ ದೇಣಿಗೆ ಹಣ ದುರ್ಬಳಕೆ'

ಒಂದನೇ ಪುಟದಿಂದ

ಜಮೀನು ಮಾರಾಟಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ವಿರೋಧ ಪಕ್ಷಗಳು ಬಿಡುಗಡೆ ಮಾಡಿವೆ. ಎಎಪಿ ಮತ್ತು ಸಮಾಜವಾದಿ ಪಕ್ಷದ ನಾಯಕರು ಈ ಸಂಬಂಧ ಭಾನುವಾರವೇ ಪತ್ರಿಕಾಗೋಷ್ಠಿ ನಡೆಸಿದ್ದರು. ಟ್ರಸ್ಟ್‌ನ ಕಾರ್ಯದರ್ಶಿ ಮತ್ತು ವಿಶ್ವ ಹಿಂದೂ ಪರಿಷತ್ ನಾಯಕ ಚಂಪತ್ ರಾಯ್ ಅವರು ಈ ಆರೋಪವನ್ನು ನಿರಾಕರಿಸಿದ್ದಾರೆ.

ರಾಮ ಮಂದಿರದ ಹೆಸರಲ್ಲಿ ಜನರ ದುಡ್ಡನ್ನು ಸಂಗ್ರಹಿಸಿದ್ದ ಬಿಜೆಪಿ ಈಗ ಜನರಿಗೆ ದ್ರೋಹ ಬಗೆದಿದೆ ಎಂದು ವಿರೋಧ ಪಕ್ಷಗಳು ಟ್ವೀಟ್ ಮಾಡಿವೆ. #BJP_का_श्रीराम_को_धोखा (ಬಿಜೆಪಿಯಿಂದ ಶ್ರೀರಾಮನಿಗೆ ದ್ರೋಹ) ಹ್ಯಾಷ್‌ಟ್ಯಾಗ್‌ನಲ್ಲಿ ವಿರೋಧ ಪಕ್ಷಗಳು ಅಭಿಯಾನ ನಡೆಸುತ್ತಿವೆ. ಸೋಮವಾರ ಮಧ್ಯಾಹ್ನದ ನಂತರ ಹಲವು ಗಂಟೆಗಳ ಕಾಲ ಈ ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್ ಆಗಿತ್ತು.

ವಿರೋಧ ಪಕ್ಷಗಳ ಈ ಅಭಿಯಾನದ ವಿರುದ್ಧ ಬಿಜೆಪಿ ಕಾರ್ಯಕರ್ತರು ಸಹ ಟ್ವಿಟರ್‌ನಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರು #श्रीराम_के_दुश्मन (ಶ್ರೀರಾಮನ ವೈರಿಗಳು) ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಟ್ವೀಟ್ ಮಾಡುತ್ತಿದ್ದಾರೆ. ಈ ಹ್ಯಾಷ್‌ಟ್ಯಾಗ್ ಸೋಮವಾರ ಸಂಜೆಯ ನಂತರ ಟ್ವಿಟರ್‌ನಲ್ಲಿ ಟ್ರೆಂಡ್ ಆಗಿತ್ತು.

'ರಾಮ ಮಂದಿರ ನಿರ್ಮಾಣಕ್ಕೆ ಭೂಮಿ ಖರೀದಿಸುವಲ್ಲಿ ಭಾರಿ ಹಗರಣ ನಡೆದಿದೆ. ಇದನ್ನು ಪತ್ತೆ ಮಾಡಲು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಿ ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಉತ್ತರ ಪ್ರದೇಶದ ಹಲವೆಡೆ ಸೋಮವಾರ ಪ್ರತಿಭಟನೆ ನಡೆಸಿದ್ದಾರೆ. ಲಖನೌನಲ್ಲಿ ಪ್ರತಿಭಟನೆ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪೊಲೀಸರ ಮಧ್ಯೆ ಘರ್ಷಣೆ ನಡೆಸಿದೆ. ಪೊಲೀಸರು ನಡೆಸಿದ ಲಾಠಿ ಪ್ರಹಾರದಲ್ಲಿ ಕಾಂಗ್ರೆಸ್‌ನ ಹಲವು ಕಾರ್ಯಕರ್ತರಿಗೆ ಗಾಯಗಳಾಗಿವೆ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕವು ಟ್ವೀಟ್ ಮಾಡಿದೆ.



ರಾಮ ಜನ್ಮಭೂಮಿ ಜಮೀನು ಖರೀದಿಗೆ ಸಂಬಂಧಿಸಿದಂತೆ ಟ್ರಸ್ಟ್‌ನ ವಿರುದ್ಧ ಗಂಭೀರ ಆರೋಪ ಮಾಡಲಾಗಿದೆ. ತಾನು ತಪ್ಪು ಮಾಡಿಲ್ಲ ಎಂಬುದನ್ನು ಟ್ರಸ್ಟ್ ಸಾಬೀತು ಮಾಡಲಿ

ಪ್ರಿಯಾಂಕಾ ಚತುರ್ವೇದಿ, ಶಿವಸೇನಾ ಸಂಸದೆ



ಜನರಲ್ಲಿನ ರಾಮಭಕ್ತಿಯನ್ನೇ ಮಾರಾಟ ಮಾಡಿದ ಈ ಪಾಪಕಾರ್ಯದಲ್ಲಿ ಭಾಗಿಯಾದ ಪಾಪಿಗಳನ್ನು ರಕ್ಷಿಸುವುದನ್ನು ಪ್ರಧಾನಿ ಮೋದಿ ಇನ್ನೂ ಮುಂದುವರಿಸುತ್ತಾರೆಯೇ

ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ವಕ್ತಾರ



ಶ್ರೀ ರಾಮ ಜನ್ಮಭೂಮಿ ವ್ಯಾಜ್ಯವನ್ನು ದಶಕಗಳ ಕಾಲ ನ್ಯಾಯಾಲಯದಲ್ಲಿ ಇರಿಸಿದ್ದವರೇ ಈಗ ರಾಮ ಮಂದಿರ ನಿರ್ಮಾಣಕ್ಕೆ ಅಡ್ಡಿ ಮಾಡುತ್ತಿದ್ದಾರೆ

ಅಮಿತ್ ಮಾಳವೀಯ, ಬಿಜೆಪಿ ಐಟಿ ಘಟಕದ ಮುಖ್ಯಸ್ಥ

5 ನಿಮಿಷದಲ್ಲಿ ₹ 2 ಕೋಟಿಯಿಂದ ₹ 18.5 ಕೋಟಿಗೆ ಏರಿಕೆ

ಅಯೋಧ್ಯೆಯ ರಾಮ ಜನ್ಮಭೂಮಿಗೆ ಹೊಂದಿಕೊಂಡಿರುವ 12,080 ಚದರ ಅಡಿ ನಿವೇಶನವನ್ನು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ 2021ರ ಮಾರ್ಚ್ 18ರಂದು ಖರೀದಿಸಿದೆ. ಖರೀದಿಗೆ ಸಂಬಂಧಿಸಿದ ಎರಡು ದಾಖಲೆ ಪತ್ರಗಳು ಈಗ ಬಹಿರಂಗವಾಗಿವೆ. ಕುಸುಮ್ ಪಾಠಕ್ ಮತ್ತು ಹರೀಶ್ ಪಾಠಕ್ ಎಂಬುವವರು ತಮ್ಮ ಜಮೀನನ್ನು ಮಾರಾಟ ಮಾಡಿದ ವಿವರ ಮೊದಲ ದಾಖಲೆ ಪತ್ರದಲ್ಲಿದೆ. ಅದೇ ಜಮೀನನ್ನು ರವಿ ಮೋಹನ್ ತಿವಾರಿ ಮತ್ತು ಸುಲ್ತಾನ್ ಅನ್ಸಾರಿ ಅವರು ಟ್ರಸ್ಟ್‌ಗೆ ಮಾರಾಟ ಮಾಡಿರುವ ಮಾಹಿತಿ ಎರಡನೇ ದಾಖಲೆ ಪತ್ರದಲ್ಲಿ ಇದೆ.

ಕುಸುಮ್ ಪಾಠಕ್ ಮತ್ತು ಹರೀಶ್ ಪಾಠಕ್ ಅವರು 12,080 ಚದರ ಅಡಿ ನಿವೇಶನವನ್ನು 2021ರ ಮಾರ್ಚ್ 18ರ ಸಂಜೆ 7.10ಕ್ಕೆ ರವಿ ಮೋಹನ್ ತಿವಾರಿ ಮತ್ತು ಸುಲ್ತಾನ್ ಅನ್ಸಾರಿ ಅವರಿಗೆ ಮಾರಾಟ ಮಾಡಿದ್ದಾರೆ. ಈ ದಾಖಲೆ ಪತ್ರದಲ್ಲಿ ನಿವೇಶನದ ಮೌಲ್ಯ ₹ 5.79 ಕೋಟಿ ಎಂದು ನಮೂದು ಮಾಡಲಾಗಿದೆ. ಆದರೆ, ನಿವೇಶನವನ್ನು ₹ 2 ಕೋಟಿಗೆ ಮಾರಾಟ ಮಾಡಲಾಗಿದೆ ಎಂದು ದಾಖಲೆ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಈ ಮಾರಾಟ ವಹಿವಾಟಿಗೆ ಅಯೋಧ್ಯೆ ಮೇಯರ್ ಮತ್ತು ಬಿಜೆಪಿ ನಾಯಕ ರಿಷಿಕೇಶ್ ಉಪಾಧ್ಯಾಯ, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಆರ್‌ಎಸ್‌ಎಸ್‌ನ ಪದಾಧಿಕಾರಿ ಅನಿಲ್ ಮಿಶ್ರಾ ಅವರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ.

ಇದೇ ಜಮೀನನ್ನು ಅದೇ ದಿನ ಸಂಜೆ 7.15ಕ್ಕೆ ರವಿ ಮೋಹನ್ ತಿವಾರಿ ಮತ್ತು ಸುಲ್ತಾನ್ ಅನ್ಸಾರಿ ಅವರು ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ಗೆ ಮಾರಾಟ ಮಾಡಿದ್ದಾರೆ. ಅದೇ 12,080 ಚದರ ಅಡಿ ವಿಸ್ತೀರ್ಣದ ಜಮೀನನ್ನು ₹18.5 ಕೋಟಿ ನೀಡಿ, ಟ್ರಸ್ಟ್ ಖರೀದಿಸಿದೆ. ಅದರಲ್ಲಿ ₹17 ಕೋಟಿ ಮೊತ್ತವನ್ನು ಆರ್‌ಟಿಜಿಎಸ್ ಮೂಲಕ ಮಾರಾಟಗಾರರಿಗೆ ಪಾವತಿ ಮಾಡಲಾಗಿದೆ. ಈ ಮಾರಾಟ ವಹಿವಾಟಿಗೂ ಅಯೋಧ್ಯೆ ಮೇಯರ್ ಮತ್ತು ಬಿಜೆಪಿ ನಾಯಕ ರಿಷಿಕೇಶ್ ಉಪಾಧ್ಯಾಯ ಹಾಗೂ ಮತ್ತು ಆರ್‌ಎಸ್‌ಎಸ್‌ನ ಪದಾಧಿಕಾರಿ ಅನಿಲ್ ಮಿಶ್ರಾ ಅವರು ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ.

ಸಂಜೆ 7.10ರಲ್ಲಿ ₹ 2 ಕೋಟಿಗೆ ಖರೀದಿಸಿದ್ದ ಜಮೀನನ್ನು, ನಂತರದ ಐದೇ ನಿಮಿಷದಲ್ಲಿ (ಸಂಜೆ 7.15ಕ್ಕೆ) ₹ 18.5 ಕೋಟಿ ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಯಾನ ಮುಗಿಸಿದ ಜೀವನ್ಮುಖಿ 'ಸಂಚಾರಿ'

• ಬಿ.ಎಸ್.ಲಿಂಗದೇವರು

ನಾನು ಹಾಗೂ ಸಂಚಾರಿ ವಿಜಯ್ (ಬಿ. ವಿಜಯ್ ಕುಮಾರ್) ಸೇರಿ ಮಾಡಿದ್ದು ಒಂದೇ ಸಿನಿಮಾ. ಆದರೂ ತುಂಬಾ ಆತ್ಮೀಯರಾಗಿದ್ದೆವು. ಒಬ್ಬ ನಿರ್ದೇಶಕ ಮತ್ತು ಕಲಾವಿದ ಅನ್ನುವುದನ್ನೂ ಮೀರಿದ ಸಂಬಂಧ ನಮ್ಮದು. ಸದಾ ಚಲನಶೀಲ, ಜೀವನ್ಮುಖಿ ವ್ಯಕ್ತಿತ್ವ ಅವರದಾಗಿತ್ತು. ನಮ್ಮ ಕುಟುಂಬದ ಆತ್ಮೀಯ ಸ್ನೇಹಿತರಾಗಿದ್ದರು. ನಾವು ಆಗಾಗ ಊಟಕ್ಕೆ ಸೇರುತ್ತಿದ್ದೆವು. ಊಟವನ್ನು ಅವರು ಖುಷಿಯಿಂದ ಅನುಭವಿಸುತ್ತಿದ್ದರು.

ಸುಮ್ಮನೆ ಕುಳಿತು ಕಾಲ ಕಳೆಯುವ ಜಾಯಮಾನ ಅವರದಾಗಿರಲಿಲ್ಲ. ಒಂದಿಷ್ಟು ಕಲಾವಿದರಿಗೆ ತರಬೇತಿಯನ್ನೂ ಕೊಡುತ್ತಿದ್ದರು. ನಾಟಕವನ್ನು ನಿರ್ದೇಶಿಸಬೇಕು ಎಂಬ ಕನಸೂ ಅವರಿಗಿತ್ತು. 'ಸಾವಿರದವಳು', 'ಶೂದ್ರ ತಪಸ್ವಿ', 'ಸಾಂಬಶಿವ ಪ್ರಹಸನ' ಮೊದಲಾದ ನಾಟಕಗಳಲ್ಲಿ ಅವರ ಅಭಿನಯ ಸದಾ ನೆನಪಿನಲ್ಲಿ ಉಳಿಯುವಂಥದು. ಸಮಾಜಮುಖಿ, ಮಾನವೀಯತೆಯ ವ್ಯಕ್ತಿತ್ವ ಅವರದ್ದಾಗಿತ್ತು. ಸಮಾಜದ ಕೆಲಸಗಳಿಗೆ ಯಾವಾಗಲೂ ಕಟಿಬದ್ಧರಾಗಿ ನಿಲ್ಲುತ್ತಿದ್ದರು. ಇನ್ನು ಕಲಾಪ್ರಪಂಚದಲ್ಲಿ ಪಾತ್ರಕ್ಕೆ ನಿಜವಾದ ಪರಕಾಯ ಪ್ರವೇಶ ಮಾಡುವ ಅನೇಕ ಕಲಾವಿದರ ಪೈಕಿ ವಿಜಯ್ ಅವರೂ ಒಬ್ಬರಾಗಿದ್ದರು.

ಅವಳಾದ ಕಥೆ: 'ನಾನು ಅವನಲ್ಲ ಅವಳು ಚಿತ್ರ' ಮಾಡಬೇಕಾದರೆ ಆ ಪಾತ್ರಕ್ಕೆ ತೃತೀಯ ಲಿಂಗಿ ವ್ಯಕ್ತಿಯೇ ಬೇಕು ಎಂದು ನಮ್ಮ ಕಥೆಗಾರರು ಹಟ ಹಿಡಿದಿದ್ದರು. ಹಾಗೆಯೇ ತೃತೀಯ ಲಿಂಗಿ ಒಬ್ಬರಿಗೆ ತರಬೇತಿ ಕೊಟ್ಟು ಪ್ರಯತ್ನ ಮಾಡಿದೆವು. ಆದರೆ ಅದು ನಾವು ಅಂದುಕೊಂಡಂತೆ ಬರಲಿಲ್ಲ. ಆಗ 'ಒಗ್ಗರಣೆ' ಚಿತ್ರದಲ್ಲಿ ವಿಜಯ್ ಅವರ ಪುಟ್ಟ ಪಾತ್ರವೊಂದನ್ನು ನೋಡಿದ್ದೆ. ಆಗ ಆ ಕಲಾವಿದನ ಹಿನ್ನೆಲೆಯನ್ನು ಹುಡುಕುತ್ತಾ ಹೋದಾಗ ಇವರು 'ಸಂಚಾರಿ' ತಂಡದ ಸದಸ್ಯ ಎಂದು ತಿಳಿಯಿತು. ನಾಟಕವೊಂದರಲ್ಲಿ ಅವರು ಸ್ತ್ರೀ ಪಾತ್ರವನ್ನೂ ಮಾಡಿದ್ದರು. ರಂಗಭೂಮಿ ಹಿನ್ನೆಲೆಯುಳ್ಳವರು ಎಂದು ತಿಳಿದುಕೊಂಡು ಅವರನ್ನು ನಮ್ಮ ಚಿತ್ರದ ಪಾತ್ರಕ್ಕೆ ತೆಗೆದುಕೊಂಡೆವು.

'ಕಮರ್ಷಿಯಲ್' ಮನಃಸ್ಥಿತಿ ಅಥವಾ ಮಹತ್ವಾಕಾಂಕ್ಷೆ ಅವರಿಗಿರಲಿಲ್ಲ. ಒಬ್ಬ ನಾಯಕನಿಂದ ನೂರು ಕೋಟಿ ರೂಪಾಯಿ ಬರುತ್ತದೆ ಎಂಬ ಕಲ್ಪನೆಗಳು, ನಿರೀಕ್ಷೆಗಳು ಇರುವುದುಂಟು. ಆದರೆ ವಿಜಯ್ ಅವರಿಗೆ ಅದನ್ನೆಲ್ಲಾ ಮೀರಿ ಒಬ್ಬ ಕಲಾವಿದನಾಗಿ ಗುರುತಿಸಿಕೊಳ್ಳಬೇಕು ಎಂಬುದಷ್ಟೇ ಅವರ ಗುರಿ ಆಗಿತ್ತು. ಹೀಗೆ ಬೆಳೆದವರನ್ನು ನಾವು ನಾಯಕ ನಟ ಎಂದಷ್ಟೇ ಗುರುತಿಸಬಾರದು. ಒಬ್ಬ ಕಲಾವಿದನಾಗಿ ಗುರುತಿಸಬೇಕು. ವಿಜಯ್ ಒಬ್ಬ ಅಪ್ಪಟ ಕಲಾವಿದನಾಗಿದ್ದರು. ಎಂಜಿನಿಯರಿಂಗ್ ಪದವೀಧರರಾದರೂ ಯಾವ ಹಮ್ಮು–ಬಿಮ್ಮು ಇಲ್ಲದೆ ಎಲ್ಲರೊಂದಿಗೂ ಅವರು ಬೆರೆಯುತ್ತಿದ್ದರು.

ವಿಜಯ್ ಅವರ ತಂದೆ–ತಾಯಿ ಇಬ್ಬರೂ ಕಲಾವಿದರು. ಅವರ ತಾಯಿಯಂತೂ ಜಾನಪದ ಕಲಾವಿದೆ ಆಗಿದ್ದವರು. ಅವರ ಕಲಾಪ್ರೇಮ ಮಗನಲ್ಲೂ ಅರಳಿ ನಿಂತಿತ್ತು. ಸಮಾಜದಲ್ಲಿ ಏನಾದರೂ ಮಾಡಬೇಕು ಎಂಬ ನಿರಂತರ ಚಲನಶೀಲತೆ ಅವರಲ್ಲಿ ಇತ್ತು. ಮೊನ್ನೆ ಸಾವಿನ ಮುನ್ನಾ ದಿನವೂ ಅವರು ಈ ಭಾನುವಾರ ಏನು ಮಾಡಬಹುದು? ಜನರಿಗೆ ನೆರವು ನೀಡುವ ಕೆಲಸಗಳನ್ನು ಹೇಗೆ ಮಾಡಬೇಕು ಎಂಬುದನ್ನು ಚರ್ಚಿಸಲಿಕ್ಕೆಂದೇ ತೆರಳಿದ್ದರು. ಇತ್ತೀಚೆಗೆ ಬಿಗ್ ಬಾಸ್‌ಗೆ ಕರೆ ಬಂದಿದೆ. ಹೋಗಲೇ ಎಂದು ವಿಜಯ್ ನನ್ನ ಸಲಹೆ ಕೇಳಿದ್ದರು. ಒಬ್ಬ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಟನಾಗಿ ನೀವು ಬಿಗ್‌ಬಾಸ್ ಷೋಗೆ ಹೋಗುವುದು ಬೇಡ ಎಂದಿದ್ದೆ. ಅದರಂತೆ ಅವರು ಹೋಗಲಿಲ್ಲ. ಈಗ ವಿಜಯ್ ಇಲ್ಲ ಎನ್ನುವ ಶೂನ್ಯ ಕಾಡುತ್ತಿದೆ. ಮಾತುಗಳು ಹೊರಡುತ್ತಿಲ್ಲ. ಸಾಮಾಜಿಕ ಕಳಕಳಿ, ನೈತಿಕ ಬೆಂಬಲವಾಗಿ ನಮ್ಮ ಜೊತೆಗೆ ಸದಾ ಇದ್ದ ಆತ್ಮೀಯನೊಬ್ಬನನ್ನು ಕಳೆದುಕೊಂಡಿದ್ದೇವೆ.

(ಲೇಖಕ: ಚಿತ್ರ ನಿರ್ದೇಶಕ)

ಸಂಚಾರಿ ವಿಜಯ್

ಸ್ವಯಂಪ್ರತಿಭೆಯ ಹುಡುಕಾಟ

ನಾನು ಅವನಲ್ಲ ಅವಳು, ಹರಿವು, ನಾತಿಚರಾಮಿ, ಆ್ಯಕ್ಟ್ 1978, ಗೋಧಿ ಬಣ್ಣ ಸಾಧಾರಣ ಮೈಕಟ್ಟು ಸೇರಿದಂತೆ ಹಲವು ಚಿತ್ರಗಳಲ್ಲಿ ವಿಜಯ್ ಅವರು ನಟಿಸಿದ್ದರು.

'ಸುಮ್ಮನೆ ಬರಬೇಡಿ. ಯಾವುದಾದರೂ ಒಂದು ಡಿಗ್ರಿಯನ್ನು ಕೈಯಲ್ಲಿ ಹಿಡಿದುಕೊಂಡೇ ಇಂಥ ಕ್ಷೇತ್ರಗಳಿಗೆ ಬರಬೇಕು. ಹಣ ಅಥವಾ ಹಿನ್ನೆಲೆ ಇರದಿದ್ದರೆ ಅಗಾಧವಾದ ಪ್ರತಿಭೆ ಇರಬೇಕು ಎಂದು ಯಾರೋ ಕೆಣಕಿದ ನೆನಪು. ಅದನ್ನು ಈಗಲೂ ನನ್ನೊಳಗೆ ಹುಡುಕುತ್ತಲೇ ಇದ್ದೇನೆ' ಎಂದು ವಿಜಯ್ ಹೇಳುತ್ತಿದ್ದರು.

'ಹರಿವು' ಚಿತ್ರದಲ್ಲಿ ಒಬ್ಬ ಆರ್ದ್ರ ಹೃದಯಿ ಬಡ ತಂದೆಯ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದರು. ಕೊಪ್ಪಳ ಭಾಗದ ಭಾಷಾ ಶೈಲಿ ಬಳಸುವ ಕುರಿತು ಅವರು ನಿರ್ದೇಶಕ ಮಂಸೋರೆ ಜೊತೆ ಸೇರಿ ಶೂಟಿಂಗ್ ಸ್ಥಳದಿಂದಲೇ ಆ ಭಾಗದ ಹಲವರಿಗೆ ಕರೆಮಾಡಿ ಕೇಳಿಕೊಂಡು ಪಾತ್ರ ನಿರ್ವಹಣೆ ಮಾಡಿದ್ದರು ಎಂದು ಆ ಭಾಗದ ವಿಜಯ್ ಅಭಿಮಾನಿಗಳು ನೆನಪಿಸಿಕೊಳ್ಳುವುದುಂಟು.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 33 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಡಾ.ಸುರೇಶ್ ಕೆ.ಕಾಖಂಡಕಿ,** ನಂ.377, ಬುಡಾ51, ವಿನಾಯಕ ನಗರ,ಬೆಳಗಾವಿ	10,001
2	**ಮೀರಾ ವಿ. ಶರ್ಮಾ,** ಎಸ್–1, ರಕ್ಷಾ ಆರ್ಕೇಡ್ ಅಪಾರ್ಟ್‌ಮೆಂಟ್ಸ್, 15/27, 1ನೇ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು	10,000
3	**ಸುಮಿತ್ರಾ ಕಣಮಲ್ಲ,** ಬಿ1/1, ದತ್ತಪ್ರಸಾದ್ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ, 10ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ, ಮಲ್ಲೇಶ್ವರಂ	10,000
4	**ಎಂ.ಎಸ್.ಎಸ್.ಮೂರ್ತಿ,** ನಂ.304, ಮಂತ್ರಿ ಅಲ್ಪೈನ್ ಅಪಾರ್ಟ್‌ಮೆಂಟ್ಸ್, ಡಾ.ವಿಷ್ಣುವರ್ಧನ್ ರಸ್ತೆ, ಬನಶಂಕರಿ 5ನೇ ಹಂತ, ಬೆಂಗಳೂರು	10,000
5	**ಡಾ.ವಿಶ್ವೇಶ್ವರಯ್ಯ,** ನಂ.4, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಓಂಕಾರ ನಗರ, ಉತ್ತರಹಳ್ಳಿ ಮುಖ್ಯರಸ್ತೆ, ಬೆಂಗಳೂರು	5,100
6	**ಆನಂದ್ ಹಿರೇಮಠ,** ಎಸ್‌ಜೆಆರ್ ವೋಗ್ ರೆಸಿಡೆನ್ಸಸ್, ವೈಟ್‌ಫೀಲ್ಡ್, ಬೆಂಗಳೂರು	5,000
7	**ಜಾನಕಿ ಎಸ್.ಕೆ.ರಾವ್,** ನಂ.198, ಸೀತಾಕೃಪಾ, 7ನೇ ಅಡ್ಡರಸ್ತೆ, 1ನೇ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು	5,000
8	**ಭಾರತಿ ಎಚ್.ಆರ್,** ನಂ.198, ಸೀತಾಕೃಪಾ, 7ನೇ ಅಡ್ಡರಸ್ತೆ, 1ನೇ ಎನ್ ಬ್ಲಾಕ್, ರಾಜಾಜಿನಗರ, ಬೆಂಗಳೂರು	5,000
9	**ಪಿ.ಆರ್.ಗಿರಿಯಪ್ಪ,** ಗೋಮಿನಿ, ನಂ.28, ಡಿ. ಬ್ಲಾಕ್, ಗೋಪಾಲಗೌಡ ಎಕ್ಸ್‌ಟೆನ್ಷನ್,ಶಿವಮೊಗ್ಗ	5,000
10	**ಎಚ್.ಆರ್.ಸಂಪತ್ ಕುಮಾರ್,**ಬೆಂಗಳೂರು	5,000
11	**ಶಾಹೀನ್ ಬಾನು,** ನಂ.ಸಿ5, ಸ್ಟಾಫ್ ಕ್ವಾರ್ಟರ್ಸ್, ಸಿಎಸ್ ಲೆಕ್ಚರರ್, ಡಿ.ಆರ್.ಆರ್.ಸರ್ಕಾರಿ ಪಾಲಿಟೆಕ್ನಿಕ್, ಹದಡಿ ರೋಡ್, ದಾವಣಗೆರೆ	5,000
12	**ಶಾಂತಾ ಡಿ.ಗೌಡ,** 1626, ಪದ್ಮಶ್ರೀ, 6ನೇ ಅಡ್ಡರಸ್ತೆ, 21ನೇ ಮುಖ್ಯರಸ್ತೆ, 1ನೇ ಸೆಕ್ಟರ್, ಎಚ್.ಎಸ್.ಆರ್.ಲೇಔಟ್, ಬೆಂಗಳೂರು	5,000
13	**ಕೆ.ಉಪೇಂದ್ರ,** ನಿವೃತ್ತ ಪ್ರಾಂಶುಪಾಲರು, 1366/2, ದರ್ಶನ್ ನಿಲಯ, ಷಡಕ್ಷರಿ ಮಠ ಬಡಾವಣೆ, ತಿಪಟೂರು	5,000
14	**ಬಿ.ಎಸ್.ಜೈ ಪರಮೇಶ್ವರ್,** ನಂ.16, 15ನೇ ಅಡ್ಡರಸ್ತೆ, ಮಲ್ಲೇಶ್ವರಂ ವೆಸ್ಟ್, ಬೆಂಗಳೂರು	5,000
15	**ಕೆ.ಸುಬ್ಬಲಕ್ಷ್ಮಮ್ಮ,** ಶ್ರೀ ಸ್ತಂಭಜ, ಎಸ್‌ಬಿಐ ಹಿಂಭಾಗ, ವಿನೋಬಾನಗರ, ಶಿವಮೊಗ್ಗ	5,000
16	**ಕ್ಯಾಪ್ಟನ್ ರವೀಂದ್ರ** (ನಿವೃತ್ತ), 410, ಬೈನರಿ ಹೋಮ್ಸ್, ಕೊಟ್ಟಾರ ಸಂಕೇಶ್ ರಸ್ತೆ, ಅಶೋಕನಗರ ಪೋಸ್ಟ್, ಮಂಗಳೂರು	5,000
17	**ಮಂಜುನಾಥ್ ಬಿ.ಆರ್.,** ಎಫ್–03, ಲಿಶಾ ರೆಸಿಡೆನ್ಸಿ, 3ನೇ ಅಡ್ಡರಸ್ತೆ, ದೇವಯ್ಯ ಗಾರ್ಡನ್, ಡಾಲರ್ಸ್ ಕಾಲೊನಿ, ಸಂಜಯನಗರ, ಬೆಂಗಳೂರು	5,000
18	**ನಾಗರಾಜ ಕೆ.ಜಿ,** 45, 1ನೇ ಕ್ರಾಸ್, ವೆಂಕಟೇಶಪ್ಪ ಲೇಔಟ್, ವಿದ್ಯಾರಣ್ಯಪುರ ರಸ್ತೆ, ಬೆಂಗಳೂರು	4,001
19	**ಶ್ರೀರಾಮರಾಜು,** ನಂ.12/1, 4ನೇ ಮುಖ್ಯರಸ್ತೆ, ಪ್ಯಾಲೆಸ್ ಗುಟ್ಟಹಳ್ಳಿ, ವಸಂತಪ್ಪ ಬ್ಲಾಕ್, ಬೆಂಗಳೂರು	3,000
20	**ಗ್ರೀಷ್ಮಾ ದಾಸ್,** ಎಂ.506, ಎಸಿಎಸ್ ಮೇಘನಾ ಶಾಲಿನಿ, 100 ಅಡಿ ರಿಂಗ್ ರಸ್ತೆ, ಕದಿರೇನಹಳ್ಳಿ ಪಾರ್ಕ್ ಸಮೀಪ, ಬನಶಂಕರಿ 2ನೇ ಹಂತ, ಬೆಂಗಳೂರು	3,000
21	**ಎಸ್.ಸಿ.ಮಹದೇವಪ್ಪ,** ನಿವೃತ್ತ ಶಿಕ್ಷಕ, 1ನೇ ವಾರ್ಡ್, ಪೊಲೀಸ್ ಠಾಣೆ ಸಮೀಪ, ಸರಗೂರು ತಾಲ್ಲೂಕು, ಚಾಮರಾಜನಗರ	3,000
22	**ಎ.ಎಂ.ಈರಪ್ಪ,** ನಿವೃತ್ತ ಕಾರ್ಯಪಾಲಕ ಎಂಜಿನಿಯರ್, ಕೆಪಿಸಿ ಲಿಮಿಟೆಡ್, ನಂ.432, ಇ ಬ್ಲಾಕ್, 10ನೇ ಕ್ರಾಸ್,ಮೈಸೂರು	2,222
23	**ಶಿವಶಂಕರ ಪೊರ್ಲೆ,** ಸಹಾಯಕ ಶಿಕ್ಷಕ, ಜಿಎಚ್‌ಪಿಎಸ್, ಕಾಕಲವಾರ, ಗುರುಮಠಕಲ್ ತಾಲ್ಲೂಕು, ಯಾದಗಿರಿ	2,001
24	**ಬಿ.ಮಹೇಶ್,** ನಂ. 128, ವಾತ್ಸಲ್ಯ, 4ನೇ ಬಿ ಅಡ್ಡರಸ್ತೆ, ನಂದಗೋಕುಲ ಲೇಔಟ್, ರಾಮಸಂದ್ರ, ಬೆಂಗಳೂರು	2,000
25	**ವಿಜಯಲಕ್ಷ್ಮಿ,** ನಂ.12/1,4ನೇ ಮುಖ್ಯರಸ್ತೆ, ಪ್ಯಾಲೆಸ್ ಗುಟ್ಟಹಳ್ಳಿ, ವಸಂತಪ್ಪ ಬ್ಲಾಕ್, ಬೆಂಗಳೂರು	2,000
26	**ಒ.ಎನ್.ನಾಗೇಂದ್ರ ಸಾಯಿ,** ಪ್ರಶಾಂತಿ ನಿವಾಸ್, 5ನೇ ಅಡ್ಡರಸ್ತೆ, ಎಂ.ವಿ.ಎಕ್ಸ್‌ಟೆನ್ಷನ್, ಹೊಸಕೋಟೆ	2,000
27	**ಆನಂದರಾವ್ ನಂದಗುಡಿ,** ನಂ.142, ಜಿ2, 2ನೇ ಮುಖ್ಯರಸ್ತೆ, 2ನೇ ಹಂತ, ಗೃಹಲಕ್ಷ್ಮಿ ಹೌಸಿಂಗ್ ಲೇಔಟ್, ಕಮಲಾನಗರ, ಬೆಂಗಳೂರು	2,000
28	**ಸುರೇಶ್ ಬಾಬು ಬಿ,** ನಂ.537,10ನೇ ಮುಖ್ಯರಸ್ತೆ, ಜಯನಗರ, 5ನೇ ಬ್ಲಾಕ್, ಬೆಂಗಳೂರು	2,000
29	**ಈರಣ್ಣ ಬಿ.ರಿತ್ತಿ,** ಚಿತ್ರಾಗರ ಓಣಿ, ಸವಣೂರು, ಹಾವೇರಿ ಜಿಲ್ಲೆ	1,501
30	**ರಾಮಕೃಷ್ಣ ರೆಡ್ಡಿ**	1,500
31	**ಕಾರ್ತಿಕ್ ವೈ.ಎಸ್.,** 29ನೇ ಅಡ್ಡರಸ್ತೆ, 7ನೇ ಬ್ಲಾಕ್, ಜಯನಗರ	1,201
32	**ಶಶಾಂಕ್ ಜಿ.ಎಂ.,** ಬಸವೇಶ್ವರನಗರ, ಬೆಂಗಳೂರು	1,111
33	**ಎಚ್.ಎಂ.ಧ್ರುವಕುಮಾರ್,** ನಿವೃತ್ತ ಪ್ರಾಂಶುಪಾಲರು,ನಂ.650,ಸುಮನಾ, ಲಕ್ಷ್ಮೀಶ ನಗರ, ಚಿಕ್ಕಮಗಳೂರು	1,101
34	**ನಾಗೇಂದ್ರಪ್ಪ ಪಿ.,** ಬಸವನಕೋಟೆ, ಜಗಳೂರು ತಾಲ್ಲೂಕು, ದಾವಣಗೆರೆ	1,100
35	**ವಸಂತ್ ಕುಸುಮ,** ನಂ.34, ಶ್ರೀರಾಘವೇಂದ್ರ ಲೇಔಟ್, 1ನೇ ಕ್ರಾಸ್, ಬಿಪಿಎಲ್ ಕ್ರಾಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು	1,008
36	**ಪ್ರಶಾಂತ ಎಸ್.ಬಿ.,** ನಂ.71, ಶ್ರೀ ಗುರು ತಿಪ್ಪೇರುದ್ರಸ್ವಾಮಿ ನಿಲಯ, 3ನೇ ಅಡ್ಡರಸ್ತೆ, ಮಾಸ್ತಮ್ಮ ಲೇಔಟ್, ಟೀಚರ್ಸ್ ಕಾಲೊನಿ ಸಮೀಪ, ಓಬವ್ವ ಸ್ಟೇಡಿಯಂ ಹಿಂಭಾಗ,ಚಿತ್ರದುರ್ಗ	1,001
37	**ಯುಕ್ತಾ ಆರ್.ಸತೀಶ್,** ಶರಾವತಿ ಪ್ರಿಮಿಯಾ, ಯಲಹಂಕ ನ್ಯೂಟೌನ್, ಬೆಂಗಳೂರು	1,001
38	**ಆರ್.ಎನ್.ಕುಲಕರ್ಣಿ,** ಬೆಳಗಾವಿ	1,001
39	**ಅನಿತಾ ಈಶ್ವರಪ್ಪ,** ನಂ.99, ಫ್ಲಾಟ್ ನಂ. 104 (3ನೇ ಮಹಡಿ), ಯು.ಪಿ. ಸೆರೆನಿಟಿ ಅಪಾರ್ಟ್ ಮೆಂಟ್, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು	1,001
40	**ಆಶಾ ಅರುಣ್,** ಎ1, ತೇಜಸ್ವಿ ಅಪಾರ್ಟ್‌ಮೆಂಟ್ಸ್, 74, ಗೋವಿಂದಪ್ಪ ರಸ್ತೆ, ಬಸವನಗುಡಿ, ಬೆಂಗಳೂರು	1001
41	**ಎಂ.ಆರ್.ಸದಾಶಿವನ್,** 94/1, ಜೋಡುಕಟ್ಟೆ, ಬನ್ನೂರು, ಪುತ್ತೂರು ತಾ., ದಕ್ಷಿಣ ಕನ್ನಡ	1,001
42	**ಕುಸುಮಾ ಬಿ.ವಿ.,** ನಂ.76, ಕೆಎಚ್‌ಬಿ ಲೇಔಟ್, ಚನ್ನಪಟ್ಟಣ, ರಾಮನಗರ ಜಿಲ್ಲೆ	1,001
43	**ಸಕ್ರಪ್ಪರ ಗವಿಸಿದ್ದಪ್ಪ,** ಸಕ್ರಪ್ಪರ ಮನೆ, ಹಳೆ ವಡ್ಡಿನಕಟ್ಟೆ,ಚೋರನೂರು ಪೋಸ್ಟ್, ಸಂಡೂರು ತಾಲ್ಲೂಕು, ಬಳ್ಳಾರಿ	1,000
44	**ಧೃತಿ ಎಂ,** ನಂ.128, ವಾತ್ಸಲ್ಯ, 4ನೇ ಬಿ ಕ್ರಾಸ್, ನಂದಗೋಕುಲ ಲೇಔಟ್, ರಾಮಸಂದ್ರ, ಬೆಂಗಳೂರು	1,000
45	**ತೇಜಸ್ ಎಂ.,** ನಂ.128, ವಾತ್ಸಲ್ಯ, 4ನೇ ಬಿ ಕ್ರಾಸ್, ನಂದಗೋಕುಲ ಲೇಔಟ್, ರಾಮಸಂದ್ರ, ಬೆಂಗಳೂರು	1,000
46	**ಬಿಜು ಜೇಮ್ಸ್ ಮ್ಯಾಥ್ಯೂ,** ಬೆಂಗಳೂರು	1,000
47	**ರಮಾದೇವಿ ರಾವ್**	1,000
48	**ಬಿ.ಕೆ.ಶ್ರೀಧರ್,** 93/47, ಪದ್ಮಾಲಯ, ವೈಯಾಲಿಕಾವಲ್, 3ನೇ ಮುಖ್ಯರಸ್ತೆ, ಬೆಂಗಳೂರು	1,000
49	**ಎಸ್.ಬಿ.ವಿಶ್ವಕುಮಾರ್,** ಗಿರಿನಗರ, ಬೆಂಗಳೂರು	1,000
	ಇದುವರೆಗೆ ಸಂಗ್ರಹವಾದ ಮೊತ್ತ:	1,10,34,000

ಪ್ರಜಾವಾಣಿ LIVE

prajavani.net prajavani prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಕೋವಿಡ್ ಗುಣಮುಖರಾದವರಲ್ಲಿ ಆರೋಗ್ಯ ಸಮಸ್ಯೆ

ಕೋವಿಡ್‌ನಿಂದ ಗುಣಮುಖರಾದವರಲ್ಲಿ ಕಾಣಿಸುವ ಆರೋಗ್ಯ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರ – ಎಂಬ ವಿಷಯದ ಬಗ್ಗೆ ಮಾತನಾಡಲಿದ್ದಾರೆ ಬೆಂಗಳೂರಿನ ಯಲಹಂಕದ ಪವನ್ ಆಸ್ಪತ್ರೆಯಲ್ಲಿ ವೈದ್ಯರಾಗಿರುವ **ಪ್ರೊ. ಪವನ್ ಕುಮಾರ್ ಎಂ.**

ನೀವೂ ಪ್ರಶ್ನೆಗಳನ್ನು ಕೇಳಬಹುದು

ಮಂಗಳವಾರ ಜೂನ್ 15, ಸಂಜೆ 4ಕ್ಕೆ

ಚಿರಾಗ್ ಪಾಸ್ವಾನ್ ವಿರುದ್ಧ ಬಂಡಾಯದ ಕಹಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಮ್‌ವಿಲಾಸ್ ಪಾಸ್ವಾನ್ ಅವರು ಕಟ್ಟಿದ್ದ ಲೋಕಜನಶಕ್ತಿ ಪಕ್ಷದಲ್ಲಿ (ಎಲ್‌ಜೆಪಿ) ಭಿನ್ನಮತದ ಅಲೆ ಎದ್ದಿದೆ. ಪಕ್ಷವನ್ನು ಮುನ್ನಡೆಸುತ್ತಿರುವ ಪಾಸ್ವಾನ್ ಪುತ್ರ ಚಿರಾಗ್ ಪಾಸ್ವಾನ್ ವಿರುದ್ಧ ಪಕ್ಷದ ಐವರು ಸಂಸದರು ಬಂಡೆದ್ದಿದ್ದಾರೆ. ಚಿರಾಗ್ ಚಿಕ್ಕಪ್ಪ ಹಾಗೂ ಲೋಕಸಭಾ ಸದಸ್ಯ ಪಶುಪತಿ ಕುಮಾರ್ ಪಾರಸ್ ಅವರು ಬಂಡಾಯಗಾರರ ನೇತೃತ್ವ ವಹಿಸಿದ್ದಾರೆ.

ಪಶುಪತಿ ಪರಾಸ್ ಅವರಿಗೆ ಪಕ್ಷದ ನಾಲ್ವರು ಸಂಸದರು ಬೆಂಬಲ ವ್ಯಕ್ತಪಡಿಸಿದ್ದಾರೆ. ಸಂಸದರಾದ ರಾಜ್, ಚಂದನ್ ಸಿಂಗ್, ವೀಣಾ ದೇವಿ, ಮೆಹಬೂಬ್ ಅಲಿ ಕೈಸರ್ ಅವರು ಚಿರಾಗ್ ಅವರ ನಡೆ ಬಗ್ಗೆ ತೀವ್ರ ಅಸಮಾಧಾನ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆಯಲ್ಲಿ ಪಕ್ಷದ ನಾಯಕ ಹುದ್ದೆಗೆ ಚಿರಾಗ್ ಪಾಸ್ವಾನ್ ಅವರ ಬದಲಾಗಿ ಪಾರಸ್ ಅವರನ್ನು ನೇಮಿಸುವಂತೆ ಲೋಕಸಭಾ ಸ್ಪೀಕರ್‌ಗೆ ಮನವಿ ಮಾಡಲಾಗಿದೆ. ಪಾರಸ್ ನೇತೃತ್ವದ ನಿಯೋಗವು ಸ್ಪೀಕರ್ ಓಂ ಬಿರ್ಲಾ ಅವರನ್ನು ಭಾನುವಾರ ರಾತ್ರಿ ಭೇಟಿ ಮಾಡಿ, ಮನವಿ ಸಲ್ಲಿಸಿತು.

ಚಿರಾಗ್ ಅವರ ನಾಯಕತ್ವದಲ್ಲಿ ನಂಬಿಕೆ ಕಳೆದುಕೊಂಡಿದ್ದೇವೆ. ಸದ್ಯದಲ್ಲೇ ಪಾರಸ್ ಅವರನ್ನು ಎಲ್‌ಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನೇಮಿಸಲಾಗುವುದು ಎಂದು ಎಲ್‌ಜೆಪಿ ಸಂಸದರೊಬ್ಬರು ಸುಳಿವು ನೀಡಿದ್ದಾರೆ.

ಅಸ್ತಿತ್ವ ಉಳಿಸಿಕೊಳ್ಳುವುದೇ ಜೆಡಿಎಸ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ಬಿರುಸಿನ ಚಟುವಟಿಕೆಗಳು ನಡೆದಾಗಲೆಲ್ಲ ಜೆಡಿಎಸ್ ಪಕ್ಷದ ಭವಿಷ್ಯದ ವಿಚಾರ ಚರ್ಚೆಯ ಮುನ್ನೆಲೆಗೆ ಬರುತ್ತದೆ. ಈಗಲೂ ಅಂತಹದ್ದೇ ಸನ್ನಿವೇಶವಿದೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಜತೆಗೆ ಪೈಪೋಟಿ ನಡೆಸುತ್ತಲೇ ಅಸ್ತಿತ್ವ ಉಳಿಸಿಕೊಳ್ಳಬೇಕಾದ ಸವಾಲನ್ನು ಎದುರಿಸುತ್ತಿರುವ ಈ ಪಕ್ಷದ ಭವಿಷ್ಯದ ಕುರಿತು 'ಪ್ರಜಾವಾಣಿ' ಸೋಮವಾರ ಆಯೋಜಿಸಿದ್ದ ಫೇಸ್‌ಬುಕ್ ಲೈವ್ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೂರೂ ಪಕ್ಷಗಳ ಮುಖಂಡರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪೂರ್ಣ ಸಂವಾದಕ್ಕೆ ನೋಡಿ–https://www.facebook.com/prajavani.net

ಪ್ರಜಾವಾಣಿ ಸಂವಾದ

ರಾಷ್ಟ್ರೀಯ ಪಕ್ಷಗಳದ್ದೇ ಪೈಪೋಟಿ



ಹಿಂದಿನ ಮೂರು ಚುನಾವಣೆಗಳ ಅಂಕಿ ಅಂಶ ಗಮನಿಸಿದರೆ ಮುಂದಿನ ಚುನಾವಣೆ ವೇಳೆಗೆ ಜೆಡಿಎಸ್ ಸ್ಥಿತಿ ಏನಾಗುತ್ತದೆ ಎಂಬ ಪ್ರಶ್ನೆ ಮೂಡುತ್ತದೆ. ಬಹುತೇಕ ಸಂದರ್ಭಗಳಲ್ಲಿ ಆ ಪಕ್ಷ ಬೇರೆಯವರ ಹೆಗಲ ಮೇಲೆ ಕುಳಿತು ಅಧಿಕಾರ ನಡೆಸಿದೆ. ತಮ್ಮ ನಾಯಕರು ಯಾರು ಎಂಬ ಗೊಂದಲ ಆ ಪಕ್ಷದ ಶಾಸಕರಲ್ಲೇ ಇದೆ. ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿನ ರಾಷ್ಟ್ರೀಯ ಪಕ್ಷಗಳ ನಡುವೆಯೇ ಪೈಪೋಟಿ ಇರಲಿದೆ.

ಬಿಜೆಪಿ ಸೈದ್ಧಾಂತಿಕವಾಗಿ ರಾಜಕೀಯ ಪಕ್ಷಗಳನ್ನು ವಿರೋಧಿಸುತ್ತದೆ. ಆದರೆ, ಯಾವತ್ತೂ ಯಾವುದೇ ರಾಜಕೀಯ ಪಕ್ಷಗಳನ್ನು ಮುಗಿಸುವ ಕೆಲಸ ಮಾಡಿಲ್ಲ. ಜೆಡಿಎಸ್ ಯಾವ ಸಿದ್ಧಾಂತಕ್ಕೆ ಅಂಟಿಕೊಂಡಿದೆ ಎಂಬುದನ್ನು ಆ ಪಕ್ಷದ ನಾಯಕರು ಸ್ಪಷ್ಟವಾಗಿ ಹೇಳಬೇಕು. ಆ ಪಕ್ಷವನ್ನು ಇಡಿಯಾಗಿ ಒಂದು ಕುಟುಂಬ ನಡೆಸುತ್ತಿದೆ. ಬಿಜೆಪಿಯಲ್ಲಿ ಆ ರೀತಿ ಇಲ್ಲ. ರಾಜ್ಯದಲ್ಲಿ ನಮ್ಮ ಸರ್ಕಾರದಲ್ಲಿ ಹಸ್ತಕ್ಷೇಪಕ್ಕೆ ಸಂಬಂಧಿಸಿದ ಬೆಳವಣಿಗೆಗಳ ಕುರಿತು ಚರ್ಚೆ ನಡೆಯುತ್ತಿದೆ. ಆದರೆ, ಅದಕ್ಕೂ ಕುಟುಂಬ ರಾಜಕಾರಣಕ್ಕೂ ಸಂಬಂಧವಿಲ್ಲ.

ಅವಕಾಶವಾದಿ ರಾಜಕಾರಣ ಬಿಟ್ಟು ಒಂದು ಸಿದ್ಧಾಂತದ ಆಧಾರದಲ್ಲಿ ಸಾಮೂಹಿಕ ನಾಯಕತ್ವದ ಆಧಾರದಲ್ಲಿ ಮುಂದುವರಿದರೆ ಜೆಡಿಎಸ್ ಗಟ್ಟಿಯಾಗಲಿದೆ.

– **ವಿ. ಸುನಿಲ್ ಕುಮಾರ್,** ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ

ಬಲವರ್ಧನೆಯೇ ಗುರಿ



2019ರ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಇದ್ದ ಒಲವು ಈಗ ಇಲ್ಲ. ಬಿಜೆಪಿಯ ವರ್ಚಸ್ಸು ಕುಸಿದಿದೆ. ಕೇಂದ್ರ ಸರ್ಕಾರದ ವೈಫಲ್ಯಗಳನ್ನು ರಾಜಕೀಯವಾಗಿ ಬಳಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ ಎಂದು ಆ ಪಕ್ಷದ ನಾಯಕ ಕಪಿಲ್ ಸಿಬಲ್ ಅವರೇ ಹೇಳಿದ್ದಾರೆ. ಜೆಡಿಎಸ್ ಪ್ರಾದೇಶಿಕ ಪಕ್ಷ. ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ಜೆಡಿಎಸ್ ಪೇಲವವಾಗಿಲ್ಲ. ಕರ್ನಾಟಕದ ಮಟ್ಟಿಗೆ ಇನ್ನೂ ಜೆಡಿಎಸ್ ಶಕ್ತಿ ಕಳೆದುಕೊಂಡಿಲ್ಲ.

ರಾಷ್ಟ್ರೀಯ ಪಕ್ಷಗಳು ಮಾತ್ರ ಉಳಿಯುತ್ತವೆ ಎಂಬುದನ್ನು ಒಪ್ಪಲಾಗದು. ರಾಜ್ಯದ ಹಿತಾಸಕ್ತಿ ರಕ್ಷಣೆಗೆ ಪ್ರಾದೇಶಿಕ ಪಕ್ಷವೇ ಬೇಕು ಎಂಬ ಬಯಕೆ ಜನರಲ್ಲಿದೆ. 2006ರಲ್ಲಿ ಬಿಜೆಪಿ ಜತೆ ಕೈಜೋಡಿಸಿದ್ದರಿಂದ ತಪ್ಪಾಯಿತು ಎಂಬುದು ನಿಜ. ಜೆಡಿಎಸ್ ಮತ್ತು ಕಾಂಗ್ರೆಸ್ ಮತ ಬ್ಯಾಂಕ್ ಒಂದೇ. ಅದರೊಳಗೆ ನಾವು ಬಿಜೆಪಿ ವಿರುದ್ಧವಾಗಿ ಹೋರಾಡಿ ಗೆಲುವು ಸಾಧಿಸಬೇಕಿದೆ.

-ವೈ.ಎಸ್.ವಿ. ದತ್ತ, ಜೆಡಿಎಸ್ ಮಾಜಿ ಶಾಸಕ

ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕಿದೆ



ಎಲ್ಲ ಬಗೆಯ ರಾಜಕೀಯ ಪಕ್ಷಗಳೂ ಅಸ್ತಿತ್ವದಲ್ಲಿ ಇರಬೇಕು ಎಂಬುದು ಕಾಂಗ್ರೆಸ್ ನಿಲುವು. ಜೆಡಿಎಸ್ ನಾಯಕರ ಪ್ರಯತ್ನಗಳ ಆಧಾರದ ಮೇಲೆ ಆ ಪಕ್ಷದ ಭವಿಷ್ಯ ಇದೆ. ಸರ್ಕಾರದ ನಿಲುವುಗಳನ್ನು ಬೆಂಬಲಿಸುವ ಅಥವಾ ವಿರೋಧಿಸುವ ಸಂದರ್ಭದಲ್ಲಿ ಆ ಪಕ್ಷಕ್ಕೆ ಗಟ್ಟಿಯಾದ ನಿಲುವೇ ಇರುವುದಿಲ್ಲ. ಇದರಿಂದಾಗಿ ಅವರ ಕಾರ್ಯಕರ್ತರ ನಡುವೆಯೇ ದೊಡ್ಡ ಅನುಮಾನಗಳು ಇವೆ.

ದೇಶದ ರಾಜಕೀಯ ಇತಿಹಾಸ ಗಮನಿಸಿದರೆ ಪ್ರಾದೇಶಿಕ ಪಕ್ಷಗಳು ದುರ್ಬಲಗೊಂಡ ರಾಜ್ಯಗಳಲ್ಲಿ ಬಿಜೆಪಿ ಬೆಳೆದಿದೆ. ರಾಜ್ಯದಲ್ಲೂ ಹಾಗೆಯೇ ಆಗಿದೆ. ಇದಕ್ಕೆ ದಾರಿ ಮಾಡಿಕೊಟ್ಟದ್ದು ಜೆಡಿಎಸ್ ಪಕ್ಷವೇ. ಬಿಜೆಪಿ ಜತೆ ಸಖ್ಯ ಮಾಡಿದ ಬಹುತೇಕ ಪ್ರಾದೇಶಿಕ ಪಕ್ಷಗಳು ಮುಗಿದುಹೋಗಿವೆ. 'ತೆನೆ ಹೊತ್ತ ಮಹಿಳೆ' ಈ ವಿಚಾರದಲ್ಲಿ ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕು.

– **ರಿಜ್ವಾನ್ ಅರ್ಷದ್,** ಕಾಂಗ್ರೆಸ್ ಶಾಸಕ

ಯೂರೊ ಕಪ್: ಸ್ಕಾಟ್ಲೆಂಡ್‌ಗೆ ಸೋಲುಣಿಸಿದ 'ಜೆಕ್'

ಗ್ಲಾಸ್ಗೊ (ಎಎಫ್‌ಪಿ/ಎಪಿ): ಹತ್ತು ನಿಮಿಷಗಳ ಅವಧಿಯಲ್ಲಿ ಪ್ಯಾಟ್ರಿಕ್ ಶೀಕ್ ಎರಡು ಬಾರಿ ಚೆಂಡನ್ನು ಗುರಿ ಮುಟ್ಟಿಸಿದರು. ಅವರ ಅಮೋಘ ಆಟದ ನೆರವಿನಿಂದ ಜೆಕ್ ಗಣರಾಜ್ಯ ತಂಡ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ತನ್ನ ಮೊದಲ ಪಂದ್ಯದಲ್ಲಿ ಜಯಭೇರಿ ಮೊಳಗಿಸಿತು.

ಸ್ಕಾಟ್ಲೆಂಡ್‌ನ ಹ್ಯಾಂಪ್‌ಡೆನ್ ಪಾರ್ಕ್ ಕ್ರೀಡಾಂಗಣದಲ್ಲಿ ಸೋಮವಾರ ಸಂಜೆ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಆತಿಥೇಯ ಸ್ಕಾಟ್ಲೆಂಡ್ ವಿರುದ್ಧ ಜೆಕ್ ಗಣರಾಜ್ಯ 2–0 ಅಂತರದ ಜಯ ಸಾಧಿಸಿತು. ಪ್ರಥಮಾರ್ಧ ಮುಕ್ತಾಯದ ಹಂತದಲ್ಲಿದ್ದಾಗ 42ನೇ ನಿಮಿಷದಲ್ಲಿ ಹೆಡರ್ ಮೂಲಕ ಮೊದಲ ಗೋಲು ಗಳಿಸಿದ ಪ್ಯಾಟ್ರಿಕ್ 52ನೇ ನಿಮಿಷದಲ್ಲಿ ಅದ್ಭುತ ಕಾಲ್ಚಳಕದ ಮೂಲಕ ಎದುರಾಳಿ ಡಿಫೆಂಡರ್‌ಗಳನ್ನು ವಂಚಿಸಿ ಮೊತ್ತೊಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ನೆದರ್ಲೆಂಡ್ಸ್ 3–2ರಿಂದ ಉಕ್ರೇನ್‌ಅನ್ನು ಮಣಿಸಿತು.

ಬ್ರೆಜಿಲ್ ಶುಭಾರಂಭ: ವೆನೆಜುವೆಲಾವನ್ನು ಮಣಿಸಿದ ಬ್ರೆಜಿಲ್ ತಂಡ ಕೋಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಸಾವೊ ಪೌಲೊದ ಮೇನ್ ಗರಿಂಚಾ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಬ್ರೆಜಿಲ್ 3–0ಯಿಂದ ಗೆಲುವು ಸಾಧಿಸಿತು.

ಗೋಲು ಗಳಿಸಿ ಸಂಭ್ರಮಿಸಿದ ಪ್ಯಾಟ್ರಿಕ್ ಶೀಕ್ –ಎಎಫ್‌ಪಿ ಚಿತ್ರ

ಫುಟ್‌ಬಾಲ್: ಅಗ್ರ 10ರಲ್ಲಿ ಸ್ಥಾನ ಪಡೆಯುವತ್ತ ಸುನಿಲ್ ಚೆಟ್ರಿ ಚಿತ್ತ

ಭಾರತಕ್ಕೆ ಅಫ್ಗಾನಿಸ್ತಾನ ಸವಾಲು

ದೋಹ(ಪಿಟಿಐ): ಭಾರತದ ಗೋಲು ಮಷಿನ್ ಸುನಿಲ್ ಚೆಟ್ರಿ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಗರಿಷ್ಠ ಗೋಲು ಗಳಿಸಿದ 10 ಮಂದಿ ಆಟಗಾರರ ಪಟ್ಟಿಯಲ್ಲಿ ಸ್ಥಾನ ಗಳಿಸುವ ಹಾದಿಯಲ್ಲಿದ್ದಾರೆ. ಮಂಗಳವಾರ ಇಲ್ಲಿ ನಡೆಯಲಿರುವ ವಿಶ್ವಕಪ್ ಮತ್ತು ಏಷ್ಯಾಕಪ್ ಅರ್ಹತಾ ಟೂರ್ನಿಯ ಪಂದ್ಯದಲ್ಲಿ ಅವರು ಈ ಸಾಧನೆಯ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿದ್ದಾರೆ.

'ಇ' ಗುಂಪಿನ ಪಂದ್ಯದಲ್ಲಿ ಸುನಿಲ್ ಚೆಟ್ರಿ ನೇತೃತ್ವದ ಭಾರತ ತಂಡ ಅಫ್ಗಾನಿಸ್ತಾನವನ್ನು ಎದುರಿಸಲಿದೆ. ಈ ಪಂದ್ಯವನ್ನು ಡ್ರಾ ಮಾಡಿಕೊಂಡರೂ ಭಾರತ ಏಷ್ಯಾಕಪ್ ಅರ್ಹತೆಯ ಮೂರನೇ ಸುತ್ತಿನಲ್ಲಿ ಆಡಲು ಅವಕಾಶ ಗಳಿಸಲಿದೆ. ವಿಶ್ವಕಪ್ ಸ್ಪರ್ಧೆಯಿಂದ ಭಾರತ ಈಗಾಗಲೇ ಹೊರಬಿದ್ದಿದೆ.

ಕಳೆದ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಭಾರತ 2–0 ಅಂತರದಲ್ಲಿ ಮಣಿಸಿತ್ತು. ಆ ಮೂಲಕ ಈ ಬಾರಿಯ ಅರ್ಹತಾ ಟೂರ್ನಿಯಲ್ಲಿ ಮೊದಲ ಜಯ ದಾಖಲಿಸಿತ್ತು. ಪಂದ್ಯದ ಎರಡೂ ಗೋಲುಗಳನ್ನು ಸುನಿಲ್ ಚೆಟ್ರಿ ಗಳಿಸಿದ್ದರು. ಆ ಮೂಲಕ ಅವರ ವೈಯಕ್ತಿಕ ಖಾತೆಯಲ್ಲಿ 74 ಗೋಲುಗಳು ಸೇರಿದ್ದವು. ಅವರು ಈಗ ಹೆಚ್ಚು ಗೋಲು ಗಳಿಸಿದವರ ಪಟ್ಟಿಯ 11ನೇ ಸ್ಥಾನದಲ್ಲಿದ್ದಾರೆ.



ಸುನಿಲ್ ಚೆಟ್ರಿ –ಟ್ವಿಟರ್ ಚಿತ್ರ

ಯುಎಇಯ ಅಲಿ ಮಬ್ಖೌತ್, ಕುವೈತ್‌ನ ಬಾಷಾರ್ ಅಬ್ದುಲ್ಲ ಮತ್ತು ಜಪಾನ್‌ನ ಕುನಿಶಿಗೆ ಕಮಮೊಟೊ 75 ಗೋಲು ಗಳಿಸಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಮೂರು ಗೋಲುಗಳನ್ನು ಗಳಿಸಿದರೆ ಬ್ರೆಜಿಲ್‌ನ ಪೆಲೆ ಗಳಿಸಿದ ಗೋಲುಗಳ ಸಂಖ್ಯೆಯನ್ನು ಚೆಟ್ರಿ ಸರಿಗಟ್ಟಲಿದ್ದಾರೆ.

ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಸೋಲು ತಪ್ಪಿಸಲು ಸಾಧ್ಯವಾದರೆ ತಂಡ ಗುಂಪಿನಲ್ಲಿ ಮೂರನೇ ಸ್ಥಾನ ಗಳಿಸಲಿದೆ. ಆ ಮೂಲಕ ಮೂರನೇ ಸುತ್ತಿಗೆ ಪ್ರವೇಶಿಸಲಿದೆ. ಎದುರಾಳಿ ತಂಡ ಅಷ್ಟೊಂದು ಬಲಿಷ್ಠವಾಗಿಲ್ಲದ ಕಾರಣ ಭಾರತ ಗೆಲುವಿನ ಭರವಸೆಯೊಂದಿಗೆ ಕಣಕ್ಕೆ ಇಳಿಯಲಿದೆ. ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ತೋರಿದ ಸಾಮರ್ಥ್ಯವನ್ನು ಈ ಪಂದ್ಯದಲ್ಲೂ ತೋರಿಸಲು ಸಾಧ್ಯವಾದರೆ ಗೆಲುವು ದೂರವಲ್ಲ.

ಸುನಿಲ್ ಚೆಟ್ರಿ ಮತ್ತು ಮನ್ವೀರ್ ಸಿಂಗ್ ಆಕ್ರಮಣ ವಿಭಾಗವನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಇವರಿಬ್ಬರಿಗೆ ಮಿಡ್‌ಫೀಲ್ಡರ್ ಬ್ರೆಂಡನ್ ಫರ್ನಾಂಡಿಸ್ ಉತ್ತಮ ಸಹಕಾರ ನೀಡುತ್ತಿದ್ದಾರೆ. ಇದು ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಪಂದ್ಯ ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ). **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್.



ನೋವಾಕ್ ಯೊಕೋವಿಕ್ ಎರಡನೇ ಬಾರಿಗೆ ಫ್ರೆಂಚ್ ಓಪನ್ ವಿಜೇತರಾಗಿದ್ದಾರೆ!

ರಕ್ತದಾನ ಮಾಡಿದ ಸಚಿನ್

ಮುಂಬೈ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ ಸಚಿನ್ ತೆಂಡೂಲ್ಕರ್ ಅವರು ಸೋಮವಾರ' ವಿಶ್ವ ರಕ್ತದಾನಿಗಳ ದಿನ'ದ ಅಂಗವಾಗಿ ರಕ್ತದಾನ ಮಾಡಿದರು.

ಪ್ರತಿಯೊಬ್ಬರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡುವಂತೆ ಇದೇ ವೇಳೆ ದಿಗ್ಗಜ ಬ್ಯಾಟ್ಸ್‌ಮನ್ ಕರೆ ನೀಡಿದರು.

'ನಮಗೆಲ್ಲ ಜೀವವೊಂದನ್ನು ಉಳಿಸುವ ಶಕ್ತಿಯಿದೆ. ಅದನ್ನು ಬಳಸಿಕೊಳ್ಳೋಣ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹಂಚಿಕೊಂಡಿರುವ ಅವರು, 'ಜೀವ ಉಳಿಸುವಲ್ಲಿ ರಕ್ತ ಪ್ರಮುಖ ಪಾತ್ರ ವಹಿಸುತ್ತದೆ' ಎಂದಿದ್ದಾರೆ.

ಬ್ಯಾಂಕ್ ಆಫ್ ಬರೋಡಾ ಅಧಿಕಾರಿಗಳು ಕೆ.ಗೌತಮ್ ಅವರನ್ನು ಸನ್ಮಾನಿಸಿದರು

ಕ್ರಿಕೆಟಿಗ ಕೆ.ಗೌತಮ್‌ಗೆ ಸನ್ಮಾನ

ಬೆಂಗಳೂರು: ಶ್ರೀಲಂಕಾ ಪ್ರವಾಸ ಕೈಗೊಳ್ಳಲಿರುವ ಶಿಖರ್ ಧವನ್ ನೇತೃತ್ವದ ಭಾರತ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಿರುವ ಕೃಷ್ಣಪ್ಪ ಗೌತಮ್ ಅವರನ್ನು ಬ್ಯಾಂಕ್ ಆಫ್ ಬರೋಡಾ ವತಿಯಿಂದ ಸೋಮವಾರ ಸನ್ಮಾನಿಸಲಾಯಿತು. ಗೌತಮ್, ಈ ಬ್ಯಾಂಕಿನ ಉದ್ಯೋಗಿಯಾಗಿದ್ದಾರೆ.

ವಲಯ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಎ.ಕೆ.ಖುರಾನ, ವಲಯ ಮುಖ್ಯಸ್ಥ ಸುಧಾಕರ್ ನಾಯಕ್, ಉಪ ವಲಯ ಮುಖ್ಯಸ್ಥ ಕೆ.ಶಿವರಾಮ್ ಮುಂತಾದವರು ಉಪಸ್ಥಿತರಿದ್ದರು.

ಡಬ್ಲ್ಯುಟಿಸಿ: ವಿಜೇತರಿಗೆ ₹ 11.71 ಕೋಟಿ

ದುಬೈ (ಪಿಟಿಐ): ಪ್ರತಿಷ್ಠಿತ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ವಿಜೇತರು ₹ 11.71 ಕೋಟಿ ಬಹುಮಾನ ಮೊತ್ತ ಜೇಬಿಗಿಳಿಸಲಿದ್ದಾರೆ. ಇದರೊಂದಿಗೆ 'ಚಾಂಪಿಯನ್‌ಷಿಪ್ ಗದೆ'ಯನ್ನೂ ಪಡೆಯಲಿದ್ದಾರೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸೋಮವಾರ ತಿಳಿಸಿದೆ.

ಇಂಗ್ಲೆಂಡ್‌ನ ಸೌತಾಂಪ್ಟನ್‌ನಲ್ಲಿ ಇದೇ 18ರಿಂದ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಸೆಣಸಲಿವೆ.

'ಟೆಸ್ಟ್ ಚಾಂಪಿಯನ್‌ಷಿಪ್ ವಿಜೇತ ತಂಡ ₹ 11.71 ಕೋಟಿ ಬಹುಮಾನ ಗಳಿಸಿದರೆ, ರನ್ನರ್ ಅಪ್ ತಂಡವು ₹ 5.85 ಕೋಟಿ ತನ್ನದಾಗಿಸಿಕೊಳ್ಳಲಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಪಾಯಿಂಟ್ಸ್ ಪದ್ಧತಿಯಲ್ಲಿ ಬದಲಾವಣೆ ಸಾಧ್ಯತೆ: ಎರಡನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಪಾಯಿಂಟ್ಸ್ ಪದ್ಧತಿಯಲ್ಲಿ ಬದಲಾವಣೆಯಾಗುವ ಸಾಧ್ಯತೆಯಿದೆ. ಐಸಿಸಿಯ ಹಂಗಾಮಿ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡಿಸ್ ಸೋಮವಾರ ಈ ವಿಷಯ ತಿಳಿಸಿದ್ದಾರೆ.

ಮೊದಲ ಆವೃತ್ತಿಯಲ್ಲಿ, ಸರಣಿಯೊಂದಕ್ಕೆ 120 ಪಾಯಿಂಟ್‌ಗಳನ್ನು ನಿಗದಿ ಮಾಡಲಾಗುತ್ತಿತ್ತು. ಆದರೆ ಅದರ ಬದಲಾಗಿ ಈಗ ಪಂದ್ಯವೊಂದರ ಜಯ ಆಧರಿಸಿ 'ಒಂದೇ ಮಾನದಂಡದಲ್ಲಿ ಪಾಯಿಂಟ್ಸ್' ನೀಡುವ ಪದ್ಧತಿ ಜಾರಿಗೆ ತರುವ ಸಾಧ್ಯತೆಯಿದೆ.

ಮೊದಲ ಆವೃತ್ತಿಯಲ್ಲಿ, ಪ್ರತಿ ಸರಣಿಯ ಮೌಲ್ಯವು 120 ಪಾಯಿಂಟ್‌ಗಳಾಗಿದ್ದು, ಎರಡು ಪಂದ್ಯಗಳ ಭಾರತ-ಬಾಂಗ್ಲಾದೇಶ ಸರಣಿಯಲ್ಲಿ ಪಂದ್ಯ ಗೆದ್ದ ತಂಡ 60 ಪಾಯಿಂಟ್ ಗಳಿಸುತ್ತಿತ್ತು. ಆದರೆ ನಾಲ್ಕು ಪಂದ್ಯಗಳ ಭಾರತ-ಆಸ್ಟ್ರೇಲಿಯಾ ಟೆಸ್ಟ್ ಸರಣಿಯಲ್ಲಿ ಪ್ರತಿ ಪಂದ್ಯದ ಗೆಲುವಿನಿಂದ 30 ಪಾಯಿಂಟ್‌ಗಳು ಮಾತ್ರ ಸಿಗುತ್ತಿದ್ದವು.

ಆದಾಗ್ಯೂ, ಕೊನೆಯ ಹಂತದಲ್ಲಿ ಬಹಳಷ್ಟು ಸರಣಿಗಳನ್ನು ರದ್ದುಗೊಳಿಸಲಾಯಿತು. ಆಗ ಐಸಿಸಿ, ಶೇಕಡಾವಾರು ಪಾಯಿಂಟ್ಸ್ ಪದ್ಧತಿಗೆ ಮರಳಿತ್ತು.

ಕಿಡೊ ಹೃದಯಾಘಾತದಿಂದ ಸಾವು

ಬೆಂಗಳೂರು: ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ, ಇಂಡೊನೇಷ್ಯಾದ ಬ್ಯಾಡ್ಮಿಂಟನ್ ಪಟು ಮಾರ್ಕಿಸ್ ಕಿಡೊ (36) ಹೃದಯಾಘಾತದಿಂದ ನಿಧನರಾಗಿದ್ದಾರೆ. ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಟ್ವೀಟ್ ಮಾಡಿ ಈ ವಿಷಯ ತಿಳಿಸಿದೆ. ಡಬಲ್ಸ್ ವಿಭಾಗದಲ್ಲಿ ಆಡುತ್ತಿದ್ದ ಮಾರ್ಕಿಸ್ 2008ರ ಬೀಜಿಂಗ್ ಕೂಟದಲ್ಲಿ ಹೇಂದ್ರ ಸೇತಿಯವಾನ್ ಜೊತೆಗೂಡಿ ಚಿನ್ನದ ಪದಕ ಗೆದ್ದಿದ್ದರು.

ಬ್ಯಾಡ್ಮಿಂಟನ್: ಪ್ರಶಸ್ತಿ ಗೆದ್ದ ಮಾಳವಿಕಾ

ಮಾಳವಿಕಾ ಬನ್ಸೋಡ್

ಕೌನಸ್, ಲಿಥುವೇನಿಯಾ (ಪಿಟಿಐ): ಭಾರತದ ಮಾಳವಿಕಾ ಬನ್ಸೋಡ್ ಅವರು ಆರ್‌ಎಸ್‌ಎಲ್ ಲಿಥುವೇನಿಯನ್ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇಲ್ಲಿ ಭಾನುವಾರ ರಾತ್ರಿ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅವರು 21–14, 21–11ರಿಂದ ಐರ್ಲೆಂಡ್‌ನ ರಾಚೆಲ್ ಡರಾಗ್ ಅವರನ್ನು ಮಣಿಸಿದರು.

ಇಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದ ಭಾರತದ ಆಟಗಾರ್ತಿ ಕೇವಲ 29 ನಿಮಿಷಗಳಲ್ಲಿ ನಾಲ್ಕನೇ ಶ್ರೇಯಾಂಕದ ರಾಚೆಲ್ ಸವಾಲನ್ನು ಮೀರಿದರು.

19 ವರ್ಷದ ಮಾಳವಿಕಾ ಕಳೆದ ತಿಂಗಳು ನಡೆದ ಆಸ್ಟ್ರಿಯನ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

'ತಪ್ಪು ವರದಿ'ಗೆ ಅದಾನಿ ಕಂಪನಿಗಳ ಷೇರು ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಕಂಪನಿಗಳಲ್ಲಿ ಹೂಡಿಕೆ ಮಾಡಿರುವ ಕೆಲವು ವಿದೇಶಿ ಬಂಡವಾಳ ಹೂಡಿಕೆದಾರರ (ಎಫ್‌ಪಿಐ) ಖಾತೆಗಳನ್ನು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಸ್ಥಗಿತಗೊಳಿಸಿದೆ ಎನ್ನುವ ವರದಿಗಳಿಂದಾಗಿ ಕಂಪನಿಗಳ ಷೇರುಗಳ ಮೌಲ್ಯವು ಸೋಮವಾರದ ವಹಿವಾಟಿನ ಆರಂಭದಲ್ಲಿ ಗರಿಷ್ಠ ಶೇಕಡ 25ರವರೆಗೂ ಕುಸಿದಿತ್ತು.

ಮುಂಬೈ ಷೇರುಪೇಟೆಯಲ್ಲಿ ಅದಾನಿ ಎಂಟರ್‌ಪ್ರೈಸಸ್ ಷೇರು ಶೇ 24.99ರಷ್ಟು ಕುಸಿತ ಕಂಡು ಪ್ರತಿ ಷೇರಿನ ಬೆಲೆ ₹ 1,201.10ಕ್ಕೆ ಇಳಿಕೆ ಆಗಿತ್ತು. ವಹಿವಾಟಿನ ಅಂತ್ಯದ ವೇಳೆಗೆ ಇಳಿಕೆ ಪ್ರಮಾಣವು ಶೇ 6.26ಕ್ಕೆ ಬಂದು ಪ್ರತಿ ಷೇರಿನ ಬೆಲೆ ₹ 1,501.25ಕ್ಕೆ ತಲುಪಿತು. ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಷೇರು ಮೌಲ್ಯ ಶೇ 18.75ರಷ್ಟು ಕುಸಿದು ₹ 681.50ಕ್ಕೆ ತಲುಪಿತ್ತು. ದಿನದ ಅಂತ್ಯಕ್ಕೆ ಕುಸಿತವು ಶೇ 8.36ರಷ್ಟಾಗಿ, ಷೇರು ಬೆಲೆ ₹ 768.70ಕ್ಕೆ ತಲುಪಿತು.

ಅದಾನಿ ಗ್ರೀನ್ ಎನರ್ಜಿ ಶೇ 4.13ರಷ್ಟು, ಅದಾನಿ ಟೋಟಲ್ ಗ್ಯಾಸ್ ಹಾಗೂ ಅದಾನಿ ಟ್ರಾನ್ಸ್‌ಮಿಷನ್ ತಲಾ ಶೇ 5ರಷ್ಟು, ಅದಾನಿ ಪವರ್ ಶೇ 4.99ರಷ್ಟು ಇಳಿಕೆ ಕಂಡವು.

ಅದಾನಿ ಸಮೂಹದ ಕಂಪನಿಗಳಲ್ಲಿ ಷೇರು ಹೊಂದಿರುವ ಮೂರು ಎಫ್‌ಪಿಐ ಖಾತೆಗಳನ್ನು ಮೇ 31 ಅಥವಾ ಅದಕ್ಕೂ ಮೊದಲೇ ಸ್ಥಗಿತಗೊಳಿಸಲಾಗಿದೆ ಎಂದು ವರದಿಗಳಲ್ಲಿ ಹೇಳಲಾಗಿತ್ತು.

ಕಂಪನಿಗಳಲ್ಲಿ ಇರುವ ಪ್ರಮುಖ 12 ಹೂಡಿಕೆದಾರರಲ್ಲಿ ಈ ಮೂರು ಹೂಡಿಕೆದಾರರು ಸೇರಿದ್ದಾರೆ. ಅದಾನಿ ಸಮೂಹದ ಐದು ಕಂಪನಿಗಳಲ್ಲಿ ಈ ಹೂಡಿಕೆದಾರರು ಶೇ 2.1ರಿಂದ ಶೇ 8.91ರವರೆಗೆ ಷೇರುಪಾಲು ಹೊಂದಿದ್ದಾರೆ. ಸೋಮವಾರದ ಕುಸಿತಕ್ಕೂ ಮುನ್ನ ಈ ಮೂರು ಎಫ್‌ಪಿಐಗಳು ಅದಾನಿ ಸಮೂಹದ ಐದು ಕಂಪನಿಗಳಲ್ಲಿ ಹೊಂದಿರುವ ಷೇರು ಮೌಲ್ಯವು ₹ 57,019 ಕೋಟಿಗಳಷ್ಟಿತ್ತು.

ಸ್ಥಗಿತ ಇಲ್ಲ: ಅದಾನಿ ಸಮೂಹ

ವಿದೇಶಿ ಹೂಡಿಕೆದಾರರ (ಎಫ್‌ಪಿಐ) ಖಾತೆಗಳನ್ನು ಸ್ಥಗಿತಗೊಳಿಸಿಲ್ಲ ಎನ್ನುವುದಕ್ಕೆ ಲಿಖಿತ ರೂಪದ ದೃಢೀಕರಣ ಹೊಂದಿರುವುದಾಗಿ ಅದಾನಿ ಸಮೂಹ ಹೇಳಿದೆ. ವರದಿಯು ಹೂಡಿಕೆದಾರರನ್ನು ತಪ್ಪುದಾರಿಗೆ ಎಳೆಯುವಂಥದ್ದು ಎಂದು ಅದು ಪ್ರತಿಕ್ರಿಯಿಸಿದೆ.

'ವಿದೇಶಿ ಹೂಡಿಕೆದಾರರ ಡಿಮ್ಯಾಟ್ ಖಾತೆಗಳ ಸ್ಥಿತಿ ಕುರಿತು ಮಾಹಿತಿ ನೀಡುವಂತೆ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಿಗೆ ಮನವಿ ಮಾಡಿದ್ದೆವು. ಅದರಂತೆ, ಡಿಮ್ಯಾಟ್ ಖಾತೆಗಳನ್ನು ಸ್ಥಗಿತಗೊಳಿಸಿಲ್ಲ ಎಂದು ಇ-ಮೇಲ್ ಮೂಲಕ ಸೋಮವಾರ ದೃಢೀಕರಣ ಬಂದಿದೆ' ಎಂದು ಸಮೂಹವು ತಿಳಿಸಿದೆ.

ದಾಖಲೆ ವಹಿವಾಟು: ಷೇರುಪೇಟೆಗಳು ಸೋಮವಾರ ದಾಖಲೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿದವು. ಮುಂಬೈ ಷೇರುಪೇಟೆ ಸೂಚ್ಯಂಕ 77 ಅಂಶ ಹೆಚ್ಚಾಗಿ 52,551ಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 12 ಅಂಶ ಹೆಚ್ಚಾಗಿ 15,881 ಅಂಶಗಳಿಗೆ ತಲುಪಿತು.

ಜಾಗತಿಕ ಮಟ್ಟದಲ್ಲಿ ಸಕಾರಾತ್ಮಕ ಅಂಶಗಳು ಮತ್ತು ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯು ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿವೆ ಎಂದು ವರ್ತಕರು ಹೇಳಿದ್ದಾರೆ.

ಆನ್‌ಲೈನ್ ಚೆಸ್: ಅರ್ಹನ್, ಶ್ರಿಯಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹನ್ ಚೇತನ್ ಆನಂದ್ ಮತ್ತು ಶ್ರಿಯಾ ರೇವಣಕರ್ ಅವರು ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ ಆಯೋಜಿಸಿದ್ದ ಆನ್‌ಲೈನ್ ಚೆಸ್ ಟೂರ್ನಿಯ ಹದಿನೆಂಟು ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಪ್ರಶಸ್ತಿ ಗೆದ್ದುಕೊಂಡರು. ಬಾಲಕರ ವಿಭಾಗದಲ್ಲಿ ಅರ್ನವ್ ಮುರಳೀಧರ ಮತ್ತು ಬಾಲಕಿಯರ ವಿಭಾಗದಲ್ಲಿ ಸಂಜನಾ ರಘುನಾಥ್ ದ್ವಿತೀಯ ಸ್ಥಾನ ಗಳಿಸಿದರು.

ಹದಿನಾರು ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪಂಕಜ್ ಭಟ್ ಹಾಗೂ ಸುಜನ್ ಭಾರದ್ವಾಜ್ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಸಂಜನಾ ರಘುನಾಥ್ ಮತ್ತು ಅನನ್ಯ ಅರಂಬೂಕಮ್ ಕ್ರಮವಾಗಿ ಮೊದಲೆರಡು ಸ್ಥಾನ ಗಳಿಸಿದರು.

ಹದಿನಾಲ್ಕು ವರ್ಷದೊಳಗಿನ ಬಾಲಕರ ವಿಭಾಗದ ಮೊದಲ ಸ್ಥಾನ ಅರ್ಹನ್ ಚೇತನ್ ಆನಂದ್ ಪಾಲಾದರೆ ಬಾಲಕಿಯರ ವಿಭಾಗದಲ್ಲಿ ಮನಸ್ವಿ ಮೊದಲಿಗರಾದರು. ಬಾಲಕರ ವಿಭಾಗದಲ್ಲಿ ಪ್ರಗಿ ನಾರಾಯಣ್ ದ್ವಿತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದ ದ್ವಿತೀಯ ಸ್ಥಾನ ಕೆ.ಜಿ.ಆರ್. ಅನಘಾ ಪಾಲಾಯಿತು.

ಹನ್ನೆರಡು ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸಾತ್ವಿಕ್ ಅಡಿಗ ಪ್ರಥಮ, ಚಿನ್ಮಯ್ ಕೌಶಿಕ್ ದ್ವಿತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಅಕ್ಷಯ ಸಾಥಿ ಪ್ರಥಮ, ರುದ್ರ ರಾಜೀವ್ ದ್ವಿತೀಯ ಸ್ಥಾನ ಪಡೆದರು.

ಹತ್ತು ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಚಿನ್ಮಯ್ ಕೌಶಿಕ್ ಪ್ರಥಮ ಹಾಗೂ ಅದ್ವೈತ್ ಪ್ರಭುರಾಜ್ ದ್ವಿತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಸಿದ್ಧಿ ರಾವ್ ಪ್ರಥಮ ಹಾಗೂ ಆನಂದಿ ಪಿ. ದ್ವಿತೀಯ ಸ್ಥಾನ ಪಡೆದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,799
ಇಂದಿನ ಅಂತ್ಯ	15,811
▲	12
ದಿನದ ಗರಿಷ್ಠ	15,823

ವಿನಿಮಯ ದರ

$ ಡಾಲರ್	73.29
£ ಪೌಂಡ್	103.26
€ ಯೂರೊ	88.77
¥ ಯೆನ್ (100ಕ್ಕೆ)	67

ಮುಂಬೈ ಧಾರಣೆ

ಶೇಂಗಾ

14-6-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1425 (1440)
ಒಂದು ವಾರದ ಡೆಲಿವರಿ	1420 (1435)
ಸೋಯಾ ಕಚ್ಚಾ	1255 (1310)
ಪಾಮ್ ವಾರದ ಡೆಲಿವರಿ	1128 (1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,200 (48,600)
ಬೆಳ್ಳಿ ಕೆ.ಜಿ 71,400 (72,000)

ಆವರಣದಲ್ಲಿ ಶನಿವಾರದ ಧಾರಣೆ

ಹೀಗಾಗುತ್ತೆ ಷೇರುಪೇಟೆ ವಹಿವಾಟು..!

ಷೇರು ಮಾತು

ಶರತ್ ಎಂ.ಎಸ್.

ಕಂಪನಿಗಳು ಷೇರುಪೇಟೆ ಪ್ರವೇಶಿಸುವುದು ಏಕೆ, ಕಂಪನಿಗಳು ಹೇಗೆ ಮಾರುಕಟ್ಟೆಗೆ ಲಗ್ಗೆ ಇಡುತ್ತವೆ, ಜನರು ಷೇರುಗಳ ವಹಿವಾಟಿನಲ್ಲಿ ತೊಡಗುವುದೇಕೆ, ಯಾವೆಲ್ಲಾ ಕಾರಣಗಳಿಗೆ ಷೇರು ಮಾರುಕಟ್ಟೆ ಏರಿಳಿತ ಕಾಣುತ್ತದೆ? ಹೀಗೆ ಹಲವು ಪ್ರಶ್ನೆಗಳು ನಿಮ್ಮಲ್ಲಿ ಇವೆ ಅಲ್ಲವೇ? ಎಲ್ಲವಕ್ಕೂ ಸರಳವಾಗಿ ಉತ್ತರ ಕಂಡುಕೊಳ್ಳೋಣ ಬನ್ನಿ.

ಹೆಚ್ಚು ಬಂಡವಾಳ ಸಂಗ್ರಹಿಸಲು, ಉದ್ಯಮ ವಿಸ್ತರಿಸಲು, ದೈನಂದಿನ ನಿರ್ವಹಣಾ ವೆಚ್ಚ ನಿಭಾಯಿಸಲು, ಸಾಲ ಮರುಪಾವತಿ ಮಾಡಲು... ಹೀಗೆ ಹಲವು ಪ್ರಮುಖ ಕಾರಣಗಳಿಗೆ ಷೇರು ಮಾರುಕಟ್ಟೆ ಪ್ರವೇಶಿಸುತ್ತವೆ. ಎಲ್ಲಾ ಕಂಪನಿಗಳು ಷೇರು ಮಾರುಕಟ್ಟೆಗೆ ಪ್ರವೇಶ ಪಡೆಯಲು ಸಾಧ್ಯವಿಲ್ಲ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಮಾನದಂಡಗಳಿಗೆ ಅನುಗುಣವಾಗಿ ಖಾಸಗಿ ಕಂಪನಿಗಳು ಷೇರು ಮಾರುಕಟ್ಟೆಗೆ ಲಗ್ಗೆ ಹಾಕಬಹುದು.

ಐಪಿಒ ಮೂಲಕ ಪ್ರವೇಶ, ನಂತರ ಸ್ಥಾನ: ಖಾಸಗಿ ಕಂಪನಿಗಳು 'ಐಪಿಒ' (ಆರಂಭಿಕ ಸಾರ್ವಜನಿಕ ಹೂಡಿಕೆ) ಪ್ರಕ್ರಿಯೆ ಮೂಲಕ ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ನೀಡಿ ಬಂಡವಾಳ ಸಂಗ್ರಹಿಸಲು ಮುಂದಾಗುತ್ತವೆ. ಸರಳವಾಗಿ ಹೇಳುವುದಾದರೆ, ಕಂಪನಿಯೊಂದು ತನ್ನ ಒಂದಷ್ಟು ಷೇರನ್ನು ನಮ್ಮನಿಮ್ಮಂತಹ ಹೂಡಿಕೆದಾರರಿಗೆ ನೀಡುವ ಪ್ರಕ್ರಿಯೆಯೇ ಆರಂಭಿಕ ಸಾರ್ವಜನಿಕ ಹೂಡಿಕೆ. 'ಐಪಿಒ' ಪ್ರಕ್ರಿಯೆ ಬಳಿಕ ಆ ನಿರ್ದಿಷ್ಟ ಕಂಪನಿಯ ಷೇರು, ಷೇರುಮಾರುಕಟ್ಟೆಯಲ್ಲಿ ಸ್ಥಾನ (ಲಿಸ್ಟಿಂಗ್) ಪಡೆದುಕೊಳ್ಳುತ್ತದೆ. ಕಂಪನಿಯ ಷೇರು ಲಿಸ್ಟ್ ಆದ ಬಳಿಕ ಹೂಡಿಕೆದಾರರು ಷೇರುಗಳ ಖರೀದಿ ಮತ್ತು ಮಾರಾಟ ಮಾಡಬಹುದು.

ಷೇರುಗಳ ಖರೀದಿ, ಮಾರಾಟ ಏಕೆ?: ಲಾಭ ಗಳಿಕೆಯ ಉದ್ದೇಶದಿಂದ ಷೇರು ಮಾರುಕಟ್ಟೆಯಲ್ಲಿ ಷೇರುಗಳ ಖರೀದಿ ಮತ್ತು ಮಾರಾಟ ಪ್ರಕ್ರಿಯೆ ನಡೆಯುತ್ತದೆ. ಉದಾಹರಣೆ: ಉತ್ತಮ ಕಂಪನಿಯೊಂದರಲ್ಲಿ ನಾಯಕತ್ವದ ಸಮಸ್ಯೆಯಾದ ಕಾರಣ ಆ ಕಂಪನಿಯ ಷೇರು ಮೌಲ್ಯ ₹ 1000ದಿಂದ ₹ 700ಕ್ಕೆ ಇಳಿಯುತ್ತದೆ ಎಂದುಕೊಳ್ಳೋಣ. ಆಗ, ವಿನೀತ್ (ಕಾಲ್ಪನಿಕ ವ್ಯಕ್ತಿ) ಷೇರಿನ ಮೌಲ್ಯ ಮತ್ತಷ್ಟು ತಗ್ಗಬಹುದು ಎಂದು ಭಾವಿಸಿ ₹ 1000 ಕೊಟ್ಟು ಖರೀದಿಸಿದ್ದ ಷೇರುಗಳನ್ನು ₹ 700ಕ್ಕೆ ಮಾರಾಟ ಮಾಡುತ್ತಾರೆ.

ಷೇರಿನ ಬೆಲೆ ಕುಸಿದಿದ್ದರೂ ಕಂಪನಿಯ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿರುವುದನ್ನು ಗುರುತಿಸಿದ ರೇಷ್ಮಾ (ಕಾಲ್ಪನಿಕ ವ್ಯಕ್ತಿ), ಅದೇ ಷೇರುಗಳನ್ನು ಖರೀದಿಸುತ್ತಾರೆ. ಇಲ್ಲಿ ರವಿ ಷೇರಿನ ಮಾರಾಟಗಾರ, ರೇಷ್ಮಾ ಖರೀದಿದಾರ ಆಗುತ್ತಾರೆ.

ಬೆಲೆ ಏರಿಳಿತಕ್ಕೆ ಕಾರಣ: ಮಾರುಕಟ್ಟೆಯಲ್ಲಿ ಪೂರೈಕೆಗಿಂತ ಷೇರುಗಳಿಗೆ ಬೇಡಿಕೆ ಹೆಚ್ಚಾದಾಗ ಷೇರಿನ ಬೆಲೆ ಸಹಜವಾಗಿಯೇ ಹೆಚ್ಚಾಗುತ್ತದೆ. ಒಂದು ಕಂಪನಿಯ ಪ್ರಗತಿಯ ಬಗ್ಗೆ ಹೂಡಿಕೆದಾರರಲ್ಲಿ ಭಿನ್ನ ಆಲೋಚನೆಗಳಿದ್ದರೆ ಷೇರು ಏರಿಳಿತ ಕಾಣುತ್ತೆ. ಕಂಪನಿ ಲಾಭ ಗಳಿಸಿದರೆ, ಹೊಸ ಟೆಂಡರ್‌ಗಳನ್ನು ಪಡೆದರೆ, ಬಿಸಿನೆಸ್ ವಿಸ್ತರಣೆ ಮಾಡಿದರೆ ಷೇರಿನ ಬೆಲೆ ಹಿಗ್ಗುತ್ತದೆ. ಚುನಾವಣೆ ಹತ್ತಿರವಿದ್ದಾಗ ಷೇರುಗಳ ಬೆಲೆಯಲ್ಲಿ ಏರಿಳಿತವಿರುತ್ತದೆ. ಸ್ಥಿರವಾದ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಷೇರುಪೇಟೆ ಸೂಚ್ಯಂಕಗಳು ಏರಿಕೆಯಾಗುತ್ತೆ.

ಇಷ್ಟೇ ಅಲ್ಲ, ನೈಸರ್ಗಿಕ ವಿಕೋಪಗಳು, ಆರ್ಥಿಕ ಹಿಂಜರಿತ, ಸರ್ಕಾರದ ಹಣಕಾಸು ನೀತಿ, ಜಾಗತಿಕ ವಿದ್ಯಮಾನಗಳು ಕೂಡ ತೀವ್ರ ಏರಿಳಿತಕ್ಕೆ ದಾರಿ ಮಾಡುತ್ತವೆ. ಈ ಎಲ್ಲಾ ಲೆಕ್ಕಾಚಾರಗಳನ್ನೂ ಮೀರಿ ಎಣಿಕೆಗೆ ಸಿಗದ ರೀತಿಯಲ್ಲಿ ಷೇರುಪೇಟೆ ಏರಿಳಿತ ಕಂಡಿರುವ ಉದಾಹರಣೆಗಳು ಇತಿಹಾಸದಲ್ಲಿವೆ. •

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಹೊಸತು	23500-40500
ಹಳತು	42500-50500
ಕುಮಟ	
ಚಿಪ್ಪು	29569-31599
ಕೋಕ	19869-28169
ಫ್ಯಾಕ್ಟರಿ	13169-18129
ಹಳೆಚಾಲಿ	35869-37799
ಹೊಸಚಾಲಿ	41099-41899
ಸಿದ್ದಾಪುರ	
ಬಿಳಿಗೋಟು	20999-31809
ಚಾಲಿ	35399-38009
ಕೋಕ	17109-30669
ಕೆಂಪುಗೋಟು	25899-29109
ರಾಶಿ	40679-41639
ತಟ್ಟಿಬೆಟ್ಟೆ	33939-41109
ಯಲ್ಲಾಪುರ	
ಬಿಳಿಗೋಟು	26899-31811
ಚಾಲಿ	32389-38114
ಕೋಕ	20412-29399
ಕೆಂಪುಗೋಟು	28642-31899
ರಾಶಿ	39610-44498
ತಟ್ಟಿಬೆಟ್ಟೆ	2969-38880
ರಾಮನಗರ ರೇಷ್ಮೆ	
ಮಿಶ್ರತಳಿ	320-391
ದ್ವಿತಳಿ	300-482

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11050	10800	10700	157.45 ಸೆಂಟ್ಸ್
ಎಸಿ	4675	4300	4150	
ಆರ್‌ಪಿ	5250	5100	5250	ಲಂಡನ್
ಆರ್‌ಸಿ	3125	3100	3120	1592 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹553

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1415 (1430)
ಸೋಯಾ (ರಿಫೈನ್ಡ್)	₹1310 (1350)
ಸೂರ್ಯಕಾಂತಿ (ರಿಫೈನ್ಡ್)	₹1440(1450)
ಪಾಮೋಲಿನ್	₹1130 (1160)

ಚಿನ್ನ ₹ 464, ಬೆಳ್ಳಿ ₹ 723 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿದೆ. 10 ಗ್ರಾಂ ಚಿನ್ನದ ದರ ₹ 464ರಷ್ಟು ಇಳಿಕೆ ಆಗಿದ್ದು ₹ 47,705ರಂತೆ ಮಾರಾಟವಾಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 723ರಷ್ಟು ಕಡಿಮೆ ಆಗಿದ್ದು, ₹ 70,420ರಂತೆ ಮಾರಾಟವಾಗಿದೆ.